# ಸಂಸದೀಯ ವ್ಯವಹಾರಗಳ ಇಲಾಖೆ
# ಹಾಗೂ
# ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ

## ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ
## ಹಾಗೂ
## ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2014–2015

## ಮಾಹಿತಿ ಕೈಪಿಡಿ 2014

**ಸಂವ್ಯಶಾಇ 16 ಯು.ಸಂ.ಸ್ಪ 2014**

# ಸಂಸದೀಯ ವ್ಯವಹಾರಗಳ ಇಲಾಖೆ
# ಹಾಗೂ
# ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆ

# ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ
# ಹಾಗೂ
# ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2014–2015

**ಮಾಹಿತಿ ಕೈಪಿಡಿ 2014**
**ಸಂವ್ಯಶಾಇ 16 ಯು.ಸಂ.ಸ್ಪ 2014**

## ವಿಷಯಸೂಚಿ


| ಕ್ರಮ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| **1.** | 2014–15ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆ ನಡೆಸಲು ಅನುದಾನ ಕೋರುವ ಬಗ್ಗೆ. | **1–2** |
| **2.** | ಮಾದರಿ ಪ್ರಮಾಣ ಪತ್ರಗಳು (ಅನುಬಂಧ–I ರಿಂದ III) | 3–6 |
| **3.** | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು | 7–8 |
| **4.** | ಯುವ ಸಂಸತ್ ಮಾದರಿ ಪ್ರಶ್ನೆಗಳ ಪಟ್ಟಿ (ಅನುಬಂಧ–IV) | 9–17 |
| **5.** | ಯುವ ಸಂಸತ್ ಕಾರ್ಯಕಲಾಪಗಳ ಮಾದರಿ ಪಟ್ಟಿ (ಅನುಬಂಧ–V) | 18–24 |
| **6.** | ಯುವ ಸಂಸತ್ ಸ್ಪರ್ಧೆ ನಡೆಸುವ ಪದ್ಧತಿ ಮತ್ತು ಕಾರ್ಯವಿಧಾನ ಬಗ್ಗೆ ಟಿಪ್ಪಣಿ (ಅನುಬಂಧ–VI) | 25–52 |
| **7.** | ಮಾದರಿ ಕಾರ್ಯಕ್ರಮಗಳು (ಅನುಬಂಧ–ಎ ಮತ್ತು ಬಿ) | 53–54 |
| **8.** | ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಗಳಲ್ಲಿ ಭಾಗವಹಿಸಿದ ಕಾಲೇಜುಗಳಿಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳು | 55–58 |
| **9.** | ಮಾದರಿ ಸಂತಾಪ ಸೂಚನೆ ಪ್ರಸ್ತಾವಗಳು | 59 |
| **10.** | ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು | 60–78 |
| **11** | ಗಮನ ಸೆಳೆಯುವ ಸೂಚನೆಗಳ ಮಾದರಿಗಳು | 79–80 |
| **12** | ನಿಯಮ–330ರ ಮೇರೆಗೆ ಚರ್ಚೆ | 81 |
| **13** | ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪ ಕಾಲಾವಧಿ ಚರ್ಚೆಯ ಸೂಚನೆ ಹಾಗೂ ಉತ್ತರದ ಮಾದರಿ ನಿಯಮ 69 | 82 |
| **14** | ಶಾಸನ ರಚನೆ – ಮಾದರಿ ವಿಧೇಯಕ | 83–118 |
| **15** | ತೀರ್ಪುಗಾರರ ಮಾದರಿ ಅಂಕಪಟ್ಟಿ | 119 |
| **16** | ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧೆಗಳ ಪಟ್ಟಿ – (ಕಾಲೇಜಿನ ಹೆಸರು, ಸ್ಪರ್ಧಾರ್ಥಿಗಳ ಹೆಸರು) | 120 |


ವೆಬ್ ವಿಳಾಸ. **www.dpal.kar.nic.in.**

## ಕರ್ನಾಟಕ ಸರ್ಕಾರದ ನಡವಳಿಗಳು

***ವಿಷಯ :*** 2014-15ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆ ನಡೆಸಲು ಅನುದಾದನ ಕೋರುವ ಬಗ್ಗೆ.

***ಓದಲಾಗಿದೆ :*** (1) ಸರ್ಕಾರಿ ಆದೇಶ ಸಂಖ್ಯೆ: ಇಡಿ 181 ಯೋಯೋಕ 2014, ದಿ:27-10-2014.
(2) ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ರವರ ಅ.ಸ.ಪ ಸಂ.ಸಂವ್ಯಶಾಇ 11 ಯುಸಂಸ್ಪ 2014, ದಿ:29.10.2014.

***ಪ್ರಸ್ತಾವನೆ :***

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ 2013-14ನೇ ಸಾಲಿನಲ್ಲಿ ಯುವ ಸಂಸತ್ ನಡೆಸಲು ಲೆಕ್ಕಶೀರ್ಷಿಕೆ 2202-02-108-0-01-059ರಡಿ ರೂ.5.00 ಲಕ್ಷ (ಐಡು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ 2014-15ನೇ ಸಾಲಿನಲ್ಲಿ ನಡೆದ ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧಾ ಕಾರ್ಯಕ್ರಮವನ್ನು ನಡೆಸಲು ರೂ.5.00 ಲಕ್ಷಗಳನ್ನು ಒದಗಿಸಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 181 ಯೋಯೋಕ 2014, ಬೆಂಗಳೂರು ದಿನಾಂಕ:06-12-2014**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ 2014-15ನೇ ಸಾಲಿನಲ್ಲಿ ನಡೆಯುವ ಸಂಸತ್ ಸ್ಪರ್ಧೆಗೆ ಲೆಕ್ಕಶೀರ್ಷಿಕೆ 2202-02-108-0-01-059ರಡಿ ರೂ.5.00 ಲಕ್ಷ (ಐದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ನಿಯಮಾನುಸಾರ ಭರಿಸುವ ಷರತ್ತಿನೊಂದಿಗೆ ಬಿಡುಗೆ ಮಾಡಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಐ.ಎಫ್.ಮಾಗಿ)**
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

1) ಮಹಾಲೇಖಪಾಲರು,  ಕರ್ನಾಟಕ (ಆಡಿಟ್ 1&2) ಬೆಂಗಳೂರು.
2) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
4) ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
5) ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್‌ರಸ್ತೆ, ಬೆಂಗಳೂರು.
6) ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
8) ಕೋ.ಆರ್ಡಿನೇಟರ್, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬೆಂಗಳೂರು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## *ಮಾದರಿ ಪ್ರಮಾಣ ಪತ್ರಗಳು*

## ಅನುಬಂಧ – I

**ಕರ್ನಾಟಕ ಸರ್ಕಾರ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

**"ಯುವ ಸಂಸತ್ ಸ್ಪರ್ಧೆ"**

---------------------------------------------------- ಕಾಲೇಜಿನಲ್ಲಿ

----------------------------------------------------- ವಿದ್ಯಾರ್ಥಿ/ವಿದ್ಯಾರ್ಥಿನಿ

ಕರ್ನಾಟಕ ರಾಜ್ಯ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ, ಬೆಂಗಳೂರು, ನವದೆಹಲಿ ಇವರು -------ನೇ ವರ್ಷದಲ್ಲಿ ನಡೆಸಿದ "ಯುವ ಸಂಸತ್" ಸ್ಪರ್ಧೆಯಲ್ಲಿ ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**

**ಸಂಸದೀಯ ವ್ಯವಹಾರಗಳ ಇಲಾಖೆ**

**ಅನುಬಂಧ – II**

**ಕರ್ನಾಟಕ ಸರ್ಕಾರ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

**"ಯುವ ಸಂಸತ್ ಸ್ಪರ್ಧೆ"**

------------------------------ ಕಾಲೇಜಿನ ------------------- ವಿದ್ಯಾರ್ಥಿ/ ವಿದ್ಯಾರ್ಥಿನಿಯಾದ ---------------------------- ಅವರಿಗೆ --------------- ವರ್ಷದಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರ ನೇತೃತ್ವದಲ್ಲಿ ನಡೆಸಲಾದ "ಯುವ ಸಂಸತ್ ಸ್ಪರ್ಧೆ" ಯಲ್ಲಿನ ಅತ್ಯುತ್ತಮ ಸಾಧನೆಗೆ ------------------------ -------------- ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**

**ಸಂಸದೀಯ ವ್ಯವಹಾರಗಳ ಇಲಾಖೆ**

## *ಅನುಬಂಧ* – III

ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯವು ---------------------- ವರ್ಷದಲ್ಲಿ ನಡೆಸಿದ ಯುವ ಸಂಸತ್ ಸ್ಪರ್ಧೆಯ ವರದಿ/ ಹಣಕಾಸು ವೆಚ್ಚದ ವಿವರ.

| | | | |
|---|---|---|---|
| 1 | ಜಿಲ್ಲೆ / ಪ್ರಾದೇಶಿಕ ವ್ಯಾಪ್ತಿಯ ಹೆಸರು: | | |
| 2 | ಯುವ ಸಂಸತ್ ಸ್ಪರ್ಧೆಯನ್ನು ನಡೆಸಿದ ಶೈಕ್ಷಣಿಕ ವರ್ಷ : | | |
| 3 | ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಕಾಲೇಜುಗಳ ಸಂಖ್ಯೆ: | | |
| 4 | ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: | | |
| 5 | ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ: | | |
| 6 | ಜಿಲ್ಲೆ / ಪ್ರಾದೇಶಿಕ ಮಟ್ಟದ ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನಗಳನ್ನು ಗಳಿಸಿದ ಕಾಲೇಜುಗಳ, ಮೆರಿಟ್ ಆಧಾರದ ಮೇಲೆ, ಹೆಸರು ಮತ್ತು ವಿಳಾಸ: | | |
| 7 | ಜಿಲ್ಲೆ / ಪ್ರಾದೇಶಿಕ ಮಟ್ಟದ ಪ್ರದೇಶಗಳ ಸ್ಪರ್ಧೆಯಲ್ಲಿ ಮಾಡಿರುವ ವೆಚ್ಚಗಳ ಒಟ್ಟು ಮೊಬಲಗು: | | |
| | **ವೆಚ್ಚಗಳ ಬಾಬು ವೆಚ್ಚ ಮಾಡಿದ** | **ಒಟ್ಟು ಮೊಬಲಗು** | |
| | **ವಿಷಯಾಭಿಮುಖ ಶಿಕ್ಷಣಕ್ಕಾಗಿ**<br>1.<br>2. | | |
| | **ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆಗಾಗಿ**<br>1.<br>2. | | |
| | **ಬಹುಮಾನ ವಿತರಣೆ ಸಮಾರಂಭಕ್ಕಾಗಿ**<br>1.<br>2. | | |
| 8 | ಸ್ಪರ್ಧೆ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ತೆಗೆದ ಫೋಟೋಗಳು (5) | | |

1. ಮೇಲೆ ಸೂಚಿಸಿದಂತೆ ಕಾಲೇಜುಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಯಿತು.
2. ವೆಚ್ಚದ ಮೂಲ ಓಚರುಗಳೊಂದಿಗೆ ತಾಳೆ ನೋಡಲಾಗಿದ್ದು ಅವುಗಳು ಸರಿಯಾಗಿದೆ ಎಂದು ಕಂಡುಬಂದಿದೆ ಹಾಗೂ ಅವುಗಳ ಪ್ರತಿಗಳನ್ನು ಲಗತ್ತಿಸಿದೆ.

– ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ:

**(ಹೆಸರು)**
**ಪದನಾಮದ**
(ಉಪ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳು ಸಹಿ ಮಾಡುವುದು)
**ಜಿಲ್ಲೆ / ಪ್ರಾದೇಶಿಕ ವ್ಯಾಪ್ತಿಯ ಅಧಿಕಾರಿಯ ವಿಳಾಸ**
**ದೂರವಾಣಿ ಸಂಖ್ಯೆ/ ಇಮೇಲ್ ಐ.ಡಿ.**

**ಸೂಚನೆ:**

**ವಿಷಯಾಭಿಮುಖ ಶಿಕ್ಷಣ** ಎಂದರೆ ಯುವ ಸಂಸತ್ತನ್ನು ನಡೆಸುವುದರ ಪ್ರಭಾರದಲ್ಲಿರುವ ಶಿಕ್ಷಕರ/ಶಿಕ್ಷಣ ಅಧಿಕಾರಿಗಳ ಪ್ರಯೋಜನಕ್ಕಾಗಿ ನೋಡಲ್ ಪ್ರಾಧಿಕಾರಿಗಳು ನಡೆಸುವ ಒಂದು ಕೋರ್ಸು. ಭಾಗವಹಿಸುವವರಿಗೆ ಹಂಚುವ ಸಾಹಿತ್ಯ/ಲೇಖನ ಸಾಮಗ್ರಿಗಳ ರೂಪದಲ್ಲಿ ವೆಚ್ಚಗಳುಂಟಾಗುತ್ತವೆ.

**ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ** ಎಂದರೆ, ಸ್ಪರ್ಧೆಯನ್ನು ನಡೆಸುವುದಕ್ಕೆ ವಹಿಸಿದ ವೆಚ್ಚ, ಇದು ಉಪಹಾರಕ್ಕೆ, ಭಾಗವಹಿಸುವ ವಿದ್ಯಾರ್ಥಿಗಳ ಸಾರಿಗೆ ವ್ಯವಸ್ಥೆಗೆ, ಬಹುಮಾನ/ಪಾರಿತೋ಼ಕ ಮುಂತಾದವುಗಳಿಗೆ ತಗಲಿದ ವೆಚ್ಚವನ್ನು ಒಳಗೊಳ್ಳುತ್ತದೆ.

**ಬಹುಮಾನ ವಿತರಣೆ ಸಮಾರಂಭ** ಎಂದರೆ, ರಾಜ್ಯ ಮಟ್ಟದ ಬಹುಮಾನ ವಿಜೇತರು ಮುಂತಾದವರಿಗೆ ಬಹುಮಾನಗಳು/ಷೀಲ್ಡ್‌ಗಳನ್ನು (ಪಾರಿತೋ಼ಕಗಳನ್ನು) ವಿತರಣೆ ಮಾಡುವುದಕ್ಕಾಗಿ ನಡೆಸಿದ ಸಮಾರಂಭ, ಇದು ಪ್ರತಿಭಾನ್ವಿತ ಕಾಲೇಜುಗಳು ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳು, ನೆನಪಿನ ಕಾಣಿಕೆಗಳು, ಪ್ರಮಾಣ ಪತ್ರಗಳು, ಷೀಲ್ಡ್‌ಗಳ (ಪಾರಿತೋಷಕಗಳು) ರೂಪದಲ್ಲಿ ಬಹುಮಾನ ಮುಂತಾದವುಗಳಿಗಾಗಿ ವಹಿಸಿದ ವೆಚ್ಚವನ್ನು ಒಳಗೊಳ್ಳುತ್ತದೆ.

* ವರದಿಯನ್ನು ಸ್ಪರ್ಧೆಯು ಮುಗಿದ ಒಂದು ವಾರದೊಳಗಾಗಿ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ ಇವರಿಗೆ ಕಳುಹಿಸತಕ್ಕದ್ದು.

## ಜಿಲ್ಲಾಮಟ್ಟದ ಹಾಗೂ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು

**1. ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ:–** ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಮ್ಮ ಜಿಲ್ಲೆಯ ನೋಡಲ್ ಅಧಿಕಾರಿ ಹಾಗೂ ಇತರ ಸಿಬ್ಬಂದಿಯ ಸಮನ್ವಯದೊಂದಿಗೆ ಯುವ ಸಂಸತ್ ಸ್ಪರ್ಧೆಯನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯೊಳಗೆ ವ್ಯವಸ್ಥಿತವಾಗಿ ನಡೆಸತಕ್ಕದ್ದು. ಸ್ಪರ್ಧೆಗಾಗಿ ಉತ್ತಮ ವೇದಿಕೆ, ಧ್ವನಿವರ್ಧಕ, ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ, ಸ್ಪರ್ಧಾವಿಜೇತರಿಗೆ ಬಹುಮಾನ, ಮುಂತಾದವನ್ನು ಪ್ರತಿ ಜಿಲ್ಲೆಗೆ ನೀಡಲಾಗುವ ಅನುದಾನದಿಂದ ಏರ್ಪಾಡು ಮಾಡತಕ್ಕದ್ದು.

**2. ಯುವ ಸಂಸತ್ ಸ್ಪರ್ಧೆಗಳಿಗೆ ವಿಧ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ.–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದರಿಂದ ಸುಮಾರು 60 ರಿಂದ 90 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಅವಕಾಶ ನೀಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಈ ಮುಂದೆ ಹೇಳಿದ ಅರ್ಹತೆಗಳನ್ನು ಸಾಮಾನ್ಯವಾಗಿ ಪರಿಗಣಿಸಬೇಕು.

(1) ಚರ್ಚಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು.

(2) ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಚೆನ್ನಾಗಿ ತಿಳಿದುಕೊಂಡ ವಿದ್ಯಾರ್ಥಿಗಳು.

(3) ತಮ್ಮ ತಮ್ಮ ತರಗತಿಗಳಲ್ಲಿ ಉತ್ತಮ ಮೆರಿಟ್ ಪಡೆದಿರುವ ವಿದ್ಯಾರ್ಥಿಗಳು.

(4) ಮುಖಂಡತ್ವದ ಗುಣಗಳಿರುವ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು.

(5) ಪ್ರಥಮ ವರ್ಷದ ಹಾಗೂ ದ್ವಿತೀಯ ವರ್ಷದ ಪದವಿ ಪೂರ್ವ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

ಪ್ರತಿ ವರ್ಷವೂ ಹೊಸ ವಿದ್ಯಾರ್ಥಿಗಳ ಗುಂಪುಗಳಿಗೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಮತ್ತು ಇತರ ಶಾಸನ–ಕಲಾಪಗಳ ಅವಧಿಯಲ್ಲಿ ಆಯ್ಕೆ ಮಾಡಿದ ವಿಷಯಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವಂತೆ ಅವರಿಗೆ ಸೂಚಿಸಬೇಕು. ವಿದ್ಯಾರ್ಥಿನಿಯರಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡತಕ್ಕದ್ದು.

**3. ಸ್ಪರ್ಧೆ ನಡೆಸುವ ವಿಧಾನ.–** ಕೇಂದ್ರ ಸರ್ಕಾರವು ಒದಗಿಸಿರುವ ಮಾದರಿ ಪ್ರಶ್ನೆಗಳ ಪಟ್ಟಿ ಇದನ್ನು ಅನುಬಂಧ–5, ಕಾರ್ಯಕಲಾಪಗಳ ಒಂದು ಮಾದರಿ ಪಟ್ಟಿ ಅನುಬಂಧ–6, 1998ರ ಕೇಂದ್ರ ಸರ್ಕಾರದ ಯುವ ಸಂಸತ್ ಸ್ಪರ್ಧೆಯ ಒಂದು ಟಿಪ್ಪಣಿ ಅನುಬಂಧ–7ರಲ್ಲಿ ಒದಗಿಸಲಾಗಿದೆ. ಇದರೊಂದಿಗೆ ಲೋಕ ಸಭೆ ಹಾಗೂ ರಾಜ್ಯ ಸಭೆಗಳ ವೆಬ್‌ಸೈಟ್ http://loksabha.gov.in ಹಾಗೂ http://rajyasabha.gov.in http://dpal.kar.nic.in ಇವುಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಪಡೆದು ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬಹುದು.

4. ***ಪ್ರಾದೇಶಿಕ ಮಟ್ಟದ ಸ್ಪರ್ಧೆಗಳು.–*** ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಉಪ ನಿರ್ದೇಶಕರ ನೇತೃತ್ವದಲ್ಲಿ ವಿಷಯ ತಜ್ಞರು ಹಾಗೂ ವಿಧಾನ ಸಭೆ / ವಿಧಾನ ಪರಿಷತ್ತು / ಜಿಲ್ಲಾ ಪಂಚಾಯತ್ ಅಧ್ಯಕ್ಷ / ಸದಸ್ಯರ ಮಾರ್ಗದರ್ಶನದಲ್ಲಿ ನಡೆಸತಕ್ಕದ್ದು. ಪ್ರತಿಯೊಂದು ಜಿಲ್ಲೆಯಿಂದ ಅಂಕಗಳ ಆಧಾರದ ಮೇಲೆ ಆಯ್ಕೆಯಾದ ಪ್ರಥಮ ಐದು ವಿದ್ಯಾರ್ಥಿಗಳನ್ನು ಪ್ರಾದೇಶಿಕ ಮಟ್ಟದ ಸ್ಪರ್ಧೆಗೆ ಅರ್ಹ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.

ಪ್ರಾದೇಶಿಕ ಮಟ್ಟದ ಸ್ಪರ್ಧೆಗಳಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಜಂಟಿ ಕಾರ್ಯದರ್ಶಿ ಹುದ್ದೆಗೆ ಕಡಿಮೆ ಇಲ್ಲದ ಅಧಿಕಾರಿಗಳು ತೀರ್ಪುಗಾರರಾಗಿ ಭಾಗವಹಿಸುವರು ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಗಳು ಹಾಗೂ ವಿಧಾನ ಸಭೆ / ಪರಿಷತ್ತಿನ ಸದಸ್ಯರು ತೀರ್ಪುಗಾರರಾಗಿರುವರು. ಪ್ರಾದೇಶಿಕ ಮಟ್ಟದಲ್ಲಿ ಆಯ್ಕೆಯಾದ ಒಟ್ಟು 60 ವಿದ್ಯಾರ್ಥಿಗಳನ್ನು (ಅಂಕಗಳ ಆಧಾರದ ಮೇಲೆ) ರಾಜ್ಯ ಮಟ್ಟದ ಸ್ಪರ್ಧೆಗೆ ಆಹ್ವಾನಿಸಲಾಗುವುದು.

***5. ರಾಜ್ಯ ಮಟ್ಟದ ಸ್ಪರ್ಧೆಗಳು.–*** ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಜನವರಿ ತಿಂಗಳ ಮೊದಲ ವಾರದಲ್ಲಿ ಅಥವಾ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಸಲಾಗುವುದು. ಸದರಿ ಸ್ಪರ್ಧೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಹಿತಿ ಮತ್ತು ಮಾರ್ಗದರ್ಶನಗಳನ್ನು ಸೂಕ್ತ ಸಮಯದಲ್ಲಿ ನೀಡಲಾಗುವುದು.

## *ಅನುಬಂಧ – IV*
## *ಯುವ ಸಂಸತ್ ಮಾದರಿ ಪ್ರಶ್ನೆಗಳ ಪಟ್ಟಿ*
## *ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ*

**ತುರ್ತು ಪ್ರಯಾಣದ ಪ್ರಮಾಣ ಪತ್ರಗಳು**

***155.** ಶ್ರೀ.............................:

ಮಾನ್ಯ ವಿದೇಶಾಂಗ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಎ) ಮಧ್ಯಪ್ರಾಚ್ಯ ದೇಶಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯರು ತುರ್ತು ಪ್ರಯಾಣಕ್ಕಾಗಿ ಪ್ರಮಾಣಪತ್ರಗಳನ್ನು ನೀಡುವಂತೆ ಬೇಡಿಕೆ ಸಲ್ಲಿಸಿರುವರೆ;

(ಬಿ) ಹಾಗಿದ್ದಲ್ಲಿ, ಕಳೆದ 3 ವರ್ಷಗಳ ಅವಧಿಯಲ್ಲಿ, ದೇಶವಾರು ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಮತ್ತು ವರ್ಷವಾರು ನೀಡಲಾದ ಪ್ರಮಾಣ ಪತ್ರಗಳ ಸಂಖ್ಯೆ; ಮತ್ತು

(ಸಿ) ಅಂಥ ಪ್ರಮಾಣಪತ್ರಗಳ ನೀಡಿಕೆಗೆ ಕೋರಿಕೆ ಸಲ್ಲಿಸುವುದಕ್ಕಾಗಿ ವಿಧಿಸಿರುವ ಮಾನದಂಡ/ ಷರತ್ತುಗಳು, ಮತ್ತು ಕಳೆದ ಮೂರು ವರ್ಷಗಳ ಅವಧಿಯಲ್ಲಿ ವರ್ಷವಾರು ನಿರಾಕರಿಸಲಾದಂಥ ಪ್ರಕರಣಗಳ ಸಂಖ್ಯೆ ಹಾಗೂ ಹಾಗೆ ನಿರಾಕರಿಸಲು ಇದ್ದ ಕಾರಣಗಳು?

**ಜವಾಹರ್ ನವೋದಯ ವಿದ್ಯಾಲಯಗಳ ಕಾರ್ಯನಿರ್ವಹಣೆ**

*** 156.** ಶ್ರೀ..........................:

ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಎ) ಜವಾಹರ್ ನವೋದಯ ವಿದ್ಯಾಲಯಗಳನ್ನು (ಜೆಎನ್‌ವಿ) ಪ್ರಾರಂಭಿಸಲು ಗೊತ್ತುಪಡಿಸಿರುವ ಗುಣಮಟ್ಟಗಳು

(ಬಿ) ಸರ್ಕಾರವು ಜವಾಹರ್ ನವೋದಯ ವಿದ್ಯಾಲಯಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸುತ್ತಿದೆಯೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಜವಾಹರ್ ನವೋದಯ ವಿದ್ಯಾಲಯಗಳ ಕಾರ್ಯನಿರ್ವಹಣೆಯ ಸುಧಾರಣೆಗಾಗಿ ಪ್ರಸ್ತಾವಿಸಿರುವ ಕ್ರಮಗಳು;

(ಸಿ) ವಿಶೇಷವಾಗಿ ದೇಶದ ಹಿಂದುಳಿದ ಜಿಲ್ಲೆಗಳಲ್ಲಿರುವ ಜವಾಹರ್ ನವೋದಯ ವಿದ್ಯಾಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರವು ಹಣಕಾಸಿನ ನೆರವನ್ನು ಒದಗಿಸಲು ಪ್ರಸ್ತಾವಿಸಿದೆಯೇ ಮತ್ತು ಹಾಗಿದ್ದಲ್ಲಿ ಅದರ ವಿವರಗಳು; ಮತ್ತು

(ಡಿ) ವಿಶೇಷವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಗುಡ್ಡಗಾಡು ಮತ್ತು ಮರಭೂಮಿ ಪ್ರದೇಶಗಳಲ್ಲಿ ಹೊಸ ಶಾಲೆಗಳನ್ನು ತೆರೆಯುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು?

**ಬಾಂಗ್ಲಾದೇಶದೊಂದಿಗೆ ಭೂ ಗಡಿ ಒಪ್ಪಂದ**

***157. ಶ್ರೀ...................**

ಮಾನ್ಯ ವಿದೇಶಾಂಗ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:

(ಎ) ಮಾನ್ಯ ವಿದೇಶಾಂಗ ವ್ಯವಹಾರಗಳ ಸಚಿವರು ಇತ್ತೀಚೆಗೆ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರೆ, ಮತ್ತು ಹಾಗಿದ್ದಲ್ಲಿ, ಭೇಟಿಯ ಸಂದರ್ಭದಲ್ಲಿ ನಡೆದ ಚರ್ಚೆ, ಸಹಿ ಹಾಕಿದ ಒಪ್ಪಂದದ ವಿವರಣಾ ಪತ್ರಗಳು ಮತ್ತು ಸಹಕರಿಸಲು ಗುರುತಿಸಲಾದಂತಹ ಕ್ಷೇತ್ರಗಳು – ಇವುಗಳ ವಿವರಗಳು;

(ಬಿ) ಭೂ ಗಡಿ ಒಪ್ಪಂದ (ಎಲ್‌ಬಿಎ) ಮತ್ತು ಟೀಸ್ತಾ ನೀರು ಹಂಚಿಕೆ ಒಪ್ಪಂದಕ್ಕೆ ಸಂಬಂಧಿಸಿದ ವಿವಾದಗಳೂ ಸಹ ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಕ್ಕೆ ಬಂದಿದ್ದವೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು; ಮತ್ತು

(ಸಿ) ಬಾಂಗ್ಲಾದೇಶವು ಭಾರತದ ಮೂಲಕ ನೇಪಾಳ ಮತ್ತು ಭೂತಾನ್‌ಗೆ ಸಂಪರ್ಕ–ಸಾಗಣೆಗಾಗಿ ಕೋರಿಕೆ ಸಲ್ಲಿಸಿದೆಯೇ? ಮತ್ತು ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಅದಕ್ಕೆ ಸರ್ಕಾರದ ಪ್ರತಿಕ್ರಿಯೆ?

**159.** ಶ್ರೀ.........................

ಮಾನ್ಯ ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಎ) ಕೌಶಲ್ಯಾಭಿವೃದ್ಧಿಗೆ ಪ್ರೋತ್ಸಾಹಿಸಲು ಭಾರತದ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮ, ವಲಯ ಕೌಶಲ್ಯ ಪರಿಷತ್ತು, ರಾಜ್ಯ ಕೌಶಲ್ಯ ಮಿಷನ್, ಇತ್ಯಾದಿಗಳನ್ನು ಸದೃಢಗೊಳಿಸಲು ವಿವಿಧ ವಲಯಗಳಿಂದ ಸಲಹೆಗಳು ಬಂದಿವೆಯೇ:

(ಬಿ) ಹಾಗಿದ್ದಲ್ಲಿ, ಅದರ ವಿವರಗಳು;

(ಸಿ) ಕೈಗಾರಿಕೆಗೆ ಆದ್ಯತೆ ನೀಡಿ ಕೌಶಲ್ಯಾಭಿವೃದ್ಧಿಯ ಕಾರ್ಯತಂತ್ರಗಳನ್ನು ಪರಿಷ್ಕರಿಸುವ ಅವಶ್ಯಕತೆ ಇದೆಯೇ; ಮತ್ತು

(ಡಿ) ಹಾಗಿದ್ದರೆ, ಅದರ ವಿವರಗಳು?

**ಸ್ವತಂತ್ರ ಮೌಲ್ಯಮಾಪನ ಕಚೇರಿ**

* **181.** ಶ್ರೀ....................

ಮಾನ್ಯ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಎ) ಸ್ವತಂತ್ರ ಮೌಲ್ಯಮಾಪನ ಕಚೇರಿಯು (ಐಇಒ) ವಿವಿಧ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳು, ಯೋಜನೆಗಳು, ಮುಂತಾದವುಗಳ ವಸ್ತುನಿಷ್ಠ ಮೌಲ್ಯಮಾಪನವನ್ನು ಕೈಗೊಳ್ಳುವುದೇ ಮತ್ತು ಹಾಗಿದ್ದರೆ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೈಗೊಂಡ ಅಧ್ಯಯನಗಳ ವಿವರಗಳು;

(ಬಿ) ಸ್ವತಂತ್ರ ಮೌಲ್ಯಮಾಪನ ಕಚೇರಿಯ ರಚನೆ ಮತ್ತು ಸಾರ್ವಜನಿಕ ಕಾರ್ಯಕ್ರಮದ ನಿಸ್ಪಕ್ಷಪಾತ ಮೌಲ್ಯಮಾಪನವನ್ನು ಸಾಧ್ಯಗೊಳಿಸಲು ಅದಕ್ಕೆ ನೀಡಲಾದ ಸ್ವಾಯತ್ತತೆಯ ವ್ಯಾಪ್ತಿ; ಮತ್ತು

(ಸಿ) ಮೌಲ್ಯನಿರ್ಧರಣೆ ಕಾರ್ಯದಲ್ಲಿ ಸರ್ಕಾರೇತರ ಸಂಘಟನೆ (ಎನ್‌ಜಿಓ)ಗಳ ಸೇವೆಗಳನ್ನು ಪಡೆದುಕೊಳ್ಳಲು ಸ್ವತಂತ್ರ ಮೌಲ್ಯಮಾಪನ ಕಚೇರಿಯು ಅನುಮತಿ ಪಡೆದಿದೆಯೇ ಮತ್ತು ಹಾಗಿದ್ದಲ್ಲಿ ಅದರ ವಿವರಗಳು?

## *ಯುವ ಸಂಸತ್*
## *ಮೌಖಿಕ ಉತ್ತರಗಳಿಗಾಗಿ ಪ್ರಶ್ನೆಗಳ ಪಟ್ಟಿ*

ಗುರುವಾರ .........................
(ಮಂತ್ರಾಲಯಗಳು: ರಕ್ಷಣಾ, ವಾಣಿಜ್ಯ ಮತ್ತು ಕೈಗಾರಿಕೆ, ಹಣಕಾಸು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕೃಷಿ)

* **ಯುದ್ಧ ವಿಮಾನಗಳನ್ನು ಪಡೆದುಕೊಳ್ಳುವುದು**

***182.** ಶ್ರೀ..................

ಮಾನ್ಯ ರಕ್ಷಣಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಎ) ಯುದ್ಧ ವಿಮಾನಗಳನ್ನು ಪಡೆದುಕೊಳ್ಳುವುದಕ್ಕೆ/ ಖರೀದಿಸುವುದಕ್ಕೆ ಭಾರತವು ವಿವಿಧ ದೇಶಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆಯೇ:

(ಬಿ) ಹಾಗಿದ್ದಲ್ಲಿ, ಅದರ ವಿವರಗಳು;

(ಸಿ) ಗೌಪ್ಯ ತಾಂತ್ರಿಕತೆಯೊಂದಿಗೆ (stealth technology) ಸಜ್ಜುಗೊಂಡ ಯುದ್ಧ ವಿಮಾನಗಳನ್ನು ಪಡೆದುಕೊಳ್ಳುವುದಕ್ಕಾಗಿ ರಷ್ಯಾದೊಂದಿಗೆ ಸಹ ಯಾವುದೇ ವ್ಯವಹಾರದಲ್ಲಿ ಒಪ್ಪಂದವಾಗಿದೆಯೇ ಮತ್ತು ಹಾಗಿದ್ದಲ್ಲಿ, ಅದರ ವಿವರಗಳು;

(ಡಿ) ಸದರಿ ಯುದ್ಧ ವಿಮಾನಗಳನ್ನು ಪಡೆದುಕೊಳ್ಳುವುದಕ್ಕಾಗಿ ಬಳಸಬಹುದಾದ ನಿಧಿಗಳು; ಮತ್ತು

(ಇ) ಸದರಿ ವಿಮಾನಗಳನ್ನು ಭಾರತೀಯ ವಾಯುಪಡೆಯಲ್ಲಿ ಯಾವಾಗ ಸೇರ್ಪಡೆ ಮಾಡಿಕೊಳ್ಳುವ ಸಂಭವವಿದೆ?

**ಪರಮಾನುಗ್ರಹ ಪಾತ್ರ ರಾಷ್ಟ್ರವೆಂಬ ಸ್ಥಾನಮಾನ**

***183.** ಶ್ರೀ.......................

ಮಾನ್ಯ ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಎ) ಭಾರತಕ್ಕೆ ಪರಮಾನುಗ್ರಹ ಪಾತ್ರ ರಾಷ್ಟ್ರ (ಎಮ್‌ಎಫ್‌ಎನ್) ಎಂಬ ಸ್ಥಾನಮಾನವನ್ನು ನೀಡುವುದಕ್ಕೆ ಮುಂಚೆ ಪಾಕಿಸ್ತಾನವು ನಿರ್ದಿಷ್ಟ ಷರತ್ತುಗಳನ್ನು ವಿಧಿಸಿದೆಯೇ?

(ಬಿ) ಹಾಗಿದ್ದಲ್ಲಿ, ಅದರ ವಿವರಗಳು ಮತ್ತು ಆ ಬಗ್ಗೆ ಭಾರತದ ಪ್ರತಿಕ್ರಿಯೆ;

(ಸಿ) ಆ ವಿಷಯದ ಈಗಿನ ಸ್ಥಿತಿಗತಿ; ಮತ್ತು

(ಡಿ) ಭಾರತಕ್ಕೆ ಪರಮಾನುಗ್ರಹ ಪಾತ್ರ ದೇಶವೆಂಬ ಸ್ಥಾನಮಾನವನ್ನು ನೀಡುವುದರ ಪರಿಣಾಮವಾಗಿ ಎರಡೂ ರಾಷ್ಟ್ರಗಳಿಗೆ ಪ್ರಾಪ್ತವಾಗಬಹುದಾದ ಪ್ರಯೋಜನಗಳು?

**ಆರ್ಥಿಕ ಅಪರಾಧಗಳು**

* 185. ಶ್ರೀ.....................

ಮಾನ್ಯ ಹಣಕಾಸು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ;

(ಎ) ಸಾಲ ಪಡೆದವರು/ ಕಂಪನಿಗಳು/ ಫರ್ಮುಗಳು ಮುಂತಾದುವು ಎಸಗುವ ಆರ್ಥಿಕ ಅಪರಾಧಗಳನ್ನು ತಡೆಗಟ್ಟುವುದಕ್ಕಾಗಿ ಸರ್ಕಾರ/ ಭಾರತದ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಮಾರ್ಗಸೂಚಿಗಳು/ ನಿರ್ದೇಶನಗಳು;

(ಬಿ) ತಮ್ಮ ಸಚಿವಾಲಯವು ದೇಶದಲ್ಲಿ ನೀತಿ ನಿಷ್ಠೆಗಳಿಲ್ಲದ ಘಾತುಕ ಶಕ್ತಿಗಳು ಎಸಗುವ ಆರ್ಥಿಕ ಅಪರಾಧದ ಪ್ರಕರಣಗಳ ಬಗ್ಗೆ ಎಚ್ಚರ ವಹಿಸಿದೆಯೇ;

(ಸಿ) ಹಾಗಿದ್ದಲ್ಲಿ, ಅದರ ವಿವರಣೆಗಳನ್ನು ಒಳಗೊಂಡು, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷದಲ್ಲಿ ಮತ್ತು ಪ್ರಸ್ತುತ ವರ್ಷದಲ್ಲಿ ದಾಖಲಿಸಿಕೊಂಡಿರುವಂತಹ ಪ್ರಕರಣಗಳು ಮತ್ತು ಪ್ರಕರಣವಾರು ಅಪರಾಧಿಗಳಿಗೆ ವಿಧಿಸಿದ ದಂಡನೆಗಳು; ಮತ್ತು

(ಡಿ) ಈ ವಿಷಯದಲ್ಲಿ ಸರ್ಕಾರವು ತೆಗೆದುಕೊಂಡ ಪರಿಹಾರ ಕ್ರಮಗಳು?

**ವೈದ್ಯಕೀಯ ಕಾಲೇಜುಗಳು**

* **189.** ಶ್ರೀ........................

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಎ) ದೇಶದಲ್ಲಿ, ರಾಜ್ಯವಾರು/ ಕೇಂದ್ರಾಡಳಿತ ಪ್ರದೇಶವಾರು ಇರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಒಟ್ಟು ಸಂಖ್ಯೆ ಮತ್ತು ಅದರೊಂದಿಗೆ ಎಂಬಿಬಿಎಸ್ ಮತ್ತು ಪಿಜಿ ಕೋರ್ಸುಗಳಿಗಾಗಿ ಕಾಲೇಜುಗಳಲ್ಲಿ ಪ್ರವೇಶ ನೀಡಬಹುದಾದ ಸೀಟುಗಳ ಸಂಖ್ಯೆ (intake capacity)

ಬಿ) ದೇಶದ ಬೇರೆ ಬೇರೆ ಭಾಗಗಳಲ್ಲಿ ವೈದ್ಯಕೀಯ ಕಾಲೇಜುಗಳ ಲಭ್ಯತೆ/ ಕೊರತೆಯನ್ನು ಸರ್ಕಾರವು ಮಾಪನ ಮಾಡಿದೆಯೇ?/ ಮಾಪನ ಮಾಡಲು ಉದ್ದೇಶಿಸಿದೆಯೇ, ಹಾಗಿದ್ದರೆ, ಅದರ ವಿವರಗಳು ಮತ್ತು ಅದರ ಫಲಿತಾಂಶ;

(ಸಿ) ದೇಶದಲ್ಲಿ ನಿರ್ದಿಷ್ಟವಾಗಿ ವೈದ್ಯಕೀಯ ಕಾಲೇಜುಗಳು ಕಡಿಮೆ ಇರುವ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಲ್ಲಿ ನೂತನ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಹಾಗೂ ಈ ಸಂಬಂಧದಲ್ಲಿ ಪ್ರಕ್ರಿಯೆಯನ್ನು ರಾಜ್ಯ/ ಕೇಂದ್ರಾಡಳಿತ ಪ್ರದೇಶವಾರು ಸರಳಗೊಳಿಸಲು ಸರ್ಕಾರವು ತೆಗೆದುಕೊಂಡಿರುವ / ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳು;

(ಡಿ) ನೂತನ ವೈದ್ಯಕೀಯ ಕಾಲೇಜಗಳ ಸ್ಥಾಪನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ/ ಭಾರತದ ವೈದ್ಯಕೀಯ ಪರಿಷತ್ತಿಗೆ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಮತ್ತು ಆ ಪ್ರಸ್ತಾವಗಳ ಮೇಲೆ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರತೀ ವರ್ಷದಲ್ಲಿ ಹಾಗೂ ಪ್ರಸಕ್ತ ವರ್ಷದಲ್ಲಿ ರಾಜ್ಯ/ಕೇಂದ್ರಾಡಳಿತ ಪ್ರದೇಶವಾರು ತೆಗೆದುಕೊಳ್ಳಲಾದ ಹಾಗೂ ತೆಗೆದುಕೊಳ್ಳಲು ಉದ್ದೇಶಿಸಲಾದ ಕ್ರಮ; ಮತ್ತು

(ಇ) ದೇಶದೆಲ್ಲೆಡೆ ವೈದ್ಯಕೀಯ ಕಾಲೇಜುಗಳಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟ ಹಾಗೂ ಮೌಲ್ಯ ಕಾಯ್ದುಕೊಳ್ಳುವಲ್ಲಿ ಸರ್ಕಾರವು ತೆಗೆದುಕೊಂಡಿರುವ ಹಾಗೂ ತೆಗೆದುಕೊಳ್ಳಲು ಉದ್ದೇಶಿಸಿದರುವ ಕ್ರಮಗಳು.

**ಹತ್ತಿ ಕೃಷಿ**

**∗ 221 ಶ್ರೀ............................**

ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:

(ಎ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಾಗೂ ಪ್ರಸಕ್ತ ವರ್ಷದಲ್ಲಿ ಬಿ.ಟಿ ಹತ್ತಿ/ ಸಾಂಪ್ರದಾಯಿಕ ಹತ್ತಿ ಉತ್ಪಾದನೆಯ ವಿವರಗಳು ಹಾಗೂ ದೇಶದಲ್ಲಿ ಹತ್ತಿ ಕೃಷಿ ಮಾಡುವುದಕ್ಕಾಗಿ ರೈತರಿಗೆ ಒದಗಿಸಲಾದ ತಾಂತ್ರಿಕ, ಆರ್ಥಿಕ ಹಾಗೂ ಸಾಂಸ್ಥಿಕ ನೆರವಿನ ವಿವರಗಳು;

(ಬಿ) ದೇಶದ ವಿವಿಧ ಭಾಗಗಳಲ್ಲಿ ರೈತರು ಸಂಕಷ್ಟದಿಂದಾಗಿ ಹತ್ತಿ ಮಾರಾಟ ಮಾಡಿದ ಬಗ್ಗೆ ವರದಿಗಳು ಬಂದಿವೆಯೇ;

(ಸಿ) ಹಾಗಿದ್ದಲ್ಲಿ, ಅದರ ವಿವರಗಳು ಹಾಗೂ ದೇಶದಲ್ಲಿ ಹತ್ತಿಯ ಸಂಕಷ್ಟದ ಮಾರಾಟವನ್ನು ತಡೆಗಟ್ಟಲು ತೆಗೆದುಕೊಂಡಿರುವ/ ತೆಗೆದುಕೊಳ್ಳಲು ಉದ್ದೇಶಿಸಲಾದ ಕ್ರಮಗಳು;

(ಡಿ) ದೇಶದೆಲ್ಲೆಡೆ ಹತ್ತಿ ಬೀಜಗಳ ಗುಣಮಟ್ಟ ಸುಧಾರಣೆಗಾಗಿ ಹಾಗೂ ಹತ್ತಿ ಉತ್ಪಾದನೆಯ ಸಂವರ್ಧನೆಗಾಗಿ, ಗುಜರಾತನ್ನೂ ಒಳಗೊಂಡಂತೆ, ದೇಶದಲ್ಲಿ ಸ್ಥಾಪಿಸಲಾದ ಹತ್ತಿ ಉತ್ಕೃಷ್ಟತಾ ಕೇಂದ್ರ (ಸಿಸಿಇ)ಗಳ ವಿವರಗಳು; ಹಾಗೂ

(ಇ) ದೇಶದಲ್ಲಿ ಬಿ.ಟಿ ಹತ್ತಿ ಹಾಗೂ ಸಾಂಪ್ರದಾಯಿಕ ಹತ್ತಿ ಬೆಳೆ ಬೆಳೆಯುವ ಪ್ರದೇಶಗಳ ವ್ಯಾಪ್ತಿಯನ್ನು ಹೆಚ್ಚು ಮಾಡುವುದಕ್ಕಾಗಿ ಸರ್ಕಾರವು ಯಾವುದೇ ವಿಶೇಷ ಕ್ರಮಗಳನ್ನು ತೆಗೆದುಕೊಂಡಿದೆಯೇ? ಮತ್ತು ಹಾಗಿದ್ದಲ್ಲಿ, ಅದರ ವಿವರಗಳು.

## *ಅನುಬಂಧ* – V

### *ಯುವ ಸಂಸತ್ ಮಾದರಿ ಕಾರ್ಯಕಲಾಪಗಳ ಪಟ್ಟಿ*

*ದಿನ ದಿನಾಂಕ ತಿಂಗಳು ವರ್ಷ ವೇಳೆ*

### *ಪ್ರಮಾಣ ಅಥವಾ ದೃಢೀಕರಣ*

1. ಶ್ರೀ ...................... ( ................. ಮತ ಕ್ಷೇತ್ರದಿಂದ) ಪ್ರಮಾಣವಚನ ಪ್ರತಿಜ್ಞಾವಚನವನ್ನು ಸ್ವೀಕರಿಸುವುದು ಮತ್ತು ಸದನದಲ್ಲಿ ಆಸೀನರಾಗುವುದು.

### ರಾಷ್ಟ್ರಪತಿಗಳ ಭಾಷಣ

2. ಮಹಾ ಕಾರ್ಯದರ್ಶಿಯವರು, ...................... ರಂದು ಸೇರಿದ ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸುವುದು.

### *ಸಂತಾಪ ಸೂಚನೆ*

3. ಶ್ರೀ ....................... ರವರು ನಿಧನರಾದುದಕ್ಕಾಗಿ ಸಂತಾಪ ಸೂಚನೆ

### *ಪ್ರಶ್ನೆಗಳು*

4. ಕೇಳಬೇಕಾದ ಪ್ರಶ್ನೆಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ನಮೂದಿಸುವುದು ಮತ್ತು ಉತ್ತರಗಳನ್ನು ನೀಡುವುದು.

5. ಕೇಳಬೇಕಾದ ಅಲ್ಪಕಾಲಿಕ ಪ್ರಶ್ನೆ ಸಂಖ್ಯೆ ....... ಯನ್ನು ಪ್ರತ್ಯೇಕ ಪಟ್ಟಿಯಲ್ಲಿ ನಮೂದಿಸುವುದು ಮತ್ತು ಉತ್ತರಗಳನ್ನು ನೀಡುವುದು.

## ಸಭೆಯ ಮುಂದೆ ಮಂಡಿಸಬೇಕಾದ ಕಾಗದ ಪತ್ರಗಳು

6. "ಶ್ರೀ ........................... ಅವರು ಆಕಾಶವಾಣಿ ಮತ್ತು ದೂರವಾಣಿಯ ಸ್ವಾಯತ್ತತೆಗೆ ಸಂಬಂಧಿಸಿದ ಕಾರ್ಯತಂಡದ ವರದಿಯ (ವ್ಯಾಲ್ಯೂಮ್ I ಮತ್ತು II) (ಹಿಂದಿ ಮತ್ತು ಇಂಗ್ಲೀಷ್ ಆವೃತ್ತಿಯಲ್ಲಿ) ಪ್ರತಿಯನ್ನು ಸದನದ ಮುಂದೆ ಮಂಡಿಸುವುದು".

7. ಶ್ರೀ .................... ಅವರು ನೌಕರರ ಭವಿಷ್ಯ ನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952ರ 7ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ದಿನಾಂಕ: ................. ರಂದು ಭಾರತ ರಾಜ್ಯ ಪತ್ರದಲ್ಲಿ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 201 ರಲ್ಲಿ ಪ್ರಕಟವಾದ ನೌಕರರ ಕುಟುಂಬ (ತಿದ್ದುಪಡಿ) ಯೋಜನೆ, 1983ರ ಪ್ರತಿಯನ್ನು (ಹಿಂದಿ ಮತ್ತು ಇಂಗ್ಲೀಷ್ ಆವೃತ್ತಿಗಳಲ್ಲಿ) ಸದನದ ಮುಂದೆ ಮಂಡಿಸುವುದು.

## ಮೇಲ್ಮನೆಯಿಂದ ಸಂದೇಶಗಳು

8. ಮಹಾ ಕಾರ್ಯದರ್ಶಿಯವರು, ಪತ್ರಿಕಾ ಪರಿಷತ್ ವಿಧೇಯಕ, 1986 ಮತ್ತು ಬಾಲ ವಿವಾಹ ನಿಗ್ರಹ (ತಿದ್ದುಪಡಿ) ವಿಧೇಯಕ, 1987ಕ್ಕೆ ಸಂಬಂಧಪಟ್ಟಂತೆ ಮೇಲ್ಮನೆಯ ಎರಡು ಸಂದೇಶಗಳ ಬಗ್ಗೆ ವರದಿಯನ್ನು ನೀಡುವುದು.

## ವಿಧೇಯಕಗಳಿಗೆ ಅನುಮತಿ

9. ಮಹಾ ಕಾರ್ಯದರ್ಶಿಯವರು, ಯುವ ಸಂಸತ್ತಿನ ಕಳೆದ ಅಧಿವೇಶನದಲ್ಲಿ ಅಂಗೀಕಾರವಾದ ಮತ್ತು ಅನುಮತಿ ಪಡೆದ ವಿಧೇಯಕಗಳನ್ನು ಸದನದ ಮುಂದೆ ಮಂಡಿಸುವುದು.

## ಗಮನ ಸೆಳೆಯುವ ಸೂಚನೆ

10. ಶ್ರೀ ......................
ಶ್ರೀ ......................

ಶ್ರೀಮತಿ ........................ ರವರು ದೇಶದ ವಿವಿಧ ಭಾಗಗಳಲ್ಲಿ ಬೆಲ್ಲ, ಕಬ್ಬು, ಹತ್ತಿ ಮತ್ತು ಸಾಸುವೆಯ ಬೆಲೆಗಳಲ್ಲಿ ಇಳಿತವಾಗಿದೆಯೆಂದು ಮತ್ತು ಕಬ್ಬು ಬೆಳೆಗಾರರಿಗೆ ಕಡಿಮೆ ಬೆಲೆ ನೀಡುವ ಮೂಲಕ ಸಕ್ಕರೆ ಕಾರ್ಖಾನೆಗಳ ಮಾಲೀಕರು ಒಪ್ಪಂದದ ಉಲ್ಲಂಘನೆ ಮಾಡಿರುವ ವರದಿಯ ಬಗ್ಗೆ ಕೃಷಿ ಮತ್ತು ನೀರಾವರಿ ಸಚಿವರ ಗಮನ ಸೆಳೆಯುವುದು.

### *ಸದನದ ಅಧಿವೇಶನಗಳಿಂದ ಗೈರುಹಾಜರಾಗುವುದಕ್ಕೆ ಅನುಮತಿ*

11. ಮಾನ್ಯ ಅಧ್ಯಕ್ಷರು ಅಧಿವೇಶನದ ಉಪವೇಶನದಿಂದ ಸದಸ್ಯರ ಗೈರುಹಾಜರಿಯ ಮೇಲಿನ ಸಮಿತಿಯು ದಿನಾಂಕ: ................ ರಂದು ಮಂಡಿಸಿದ ವರದಿಯಲ್ಲಿ ಶಿಫಾರಸ್ಸು ಮಾಡಲಾದಂತೆ ಇಬ್ಬರು ಸದಸ್ಯರು ಗೈರು ಹಾಜರಾಗುವುದಕ್ಕೆ ಅನುಮತಿ ನೀಡಿರುವ ಬಗ್ಗೆ ಸದನದ ಗಮನ ಸೆಳೆಯುವುದು.

### *ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿ*

12. ಶ್ರೀ ........................

ಶ್ರೀ ......................... ರವರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 71ನೇ ವರದಿಯನ್ನು ಮಂಡಿಸುವುದು.

### *ಸದಸ್ಯರ ಗೈರುಹಾಜರಿಯ ಮೇಲಿನ ಸಮಿತಿಯ ವರದಿ*

13. ಶ್ರೀ ........................

ಶ್ರೀ ......................... ರವರು ಸದನದ ಉಪವೇಶನದಿಂದ ಸದಸ್ಯರ ಗೈರುಹಾಜರಿಯ ಮೇಲಿನ ಸಮಿತಿಯ ಐದನೇ ವರದಿಯನ್ನು ಮಂಡಿಸುವುದು.

### *ಮನವಿ ಮಂಡಿಸುವುದು*

14. ಶ್ರೀ .................... ಅವರು ಕಪ್ಪೆ ಮಾಂಸವನ್ನು ರಫ್ತು ಮಾಡುವುದರ ನಿಷೇಧದ ಬಗ್ಗೆ ಮಹಾರಾಷ್ಟ್ರದ ಥಾನೆ ಜಿಲ್ಲೆಯ ಶ್ರೀ 'ಎ' ಮತ್ತು ಇತರರು ಸಹಿ ಮಾಡಿದ ಮನವಿಯನ್ನು ಮಂಡಿಸುವುದು.

### *ಸಚಿವರಿಂದ ಹೇಳಿಕೆ*

15. ಶ್ರೀ .......................... ಅವರು, .................... ದಿಂದ ಪ್ರಾರಂಭವಾಗುವ ವಾರಕ್ಕೆ ಸರ್ಕಾರಿ ಕಾರ್ಯಕಲಾಪಗಳ ಬಗ್ಗೆ ಹೇಳಿಕೆಯನ್ನು ನೀಡುವುದು.

16. ಶ್ರೀ .......................... ಅವರು, ................... ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ................... ಯ ಭಾಗ (ಎ) ಗೆ .......... ರಂದು ಶ್ರೀ .............................. ರವರು ನೀಡಿದ ಉತ್ತರಕ್ಕೆ ತಿದ್ದುಪಡಿ ಹೇಳಿಕೆಯನ್ನು ನೀಡುವುದು.

17. ಶ್ರೀ ...................... ಅವರು, 1988-89ನೇ ವರ್ಷದ ಸರ್ಕಾರದ ಆಮದು ರಫ್ತು ಧೋರಣೆಯ ಬಗ್ಗೆ ಹೇಳಿಕೆಯನ್ನು ನೀಡುವುದು.

## *ನಿಯಮ 199ರ ಅಡಿಯಲ್ಲಿ ಹೇಳಿಕೆ*

18. ಶ್ರೀ .................. ಅವರು, .................... ಸಚಿವರ ಪದಕ್ಕೆ ತನ್ನ ರಾಜೀನಾಮೆಯ ಬಗ್ಗೆ ವಿವರಣಾ ಹೇಳಿಕೆಯನ್ನು ನೀಡುವುದು.

## *115ರ ನಿರ್ದೇಶನದ ಅಡಿಯಲ್ಲಿ ಹೇಳಿಕೆ*

19. ಶ್ರೀ ......................... ಅವರು, ................... ಪ್ರಸ್ತಾವನೆಯ ಬಗ್ಗೆ .................... ದಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ........ ಗೆ ಉತ್ತರವಾಗಿ ....................... ಸಚಿವರು ನೀಡಿದ ಕೆಲವು ಮಾಹಿತಿಗಳ ಬಗ್ಗೆ ಒಂದು ಹೇಳಿಕೆಯನ್ನು ನೀಡುವುದು.

ಶ್ರೀ .......................... ಅವರು, ಅದಕ್ಕೆ ಉತ್ತರವಾಗಿ ಒಂದು ಹೇಳಿಕೆಯನ್ನು ನೀಡುವುದು.

## *ನಿಯಮ 357ರ ಅಡಿಯಲ್ಲಿ ವೈಯಕ್ತಿಕ ವಿವರಣೆ*

20. ಶ್ರೀ ....................... ಅವರು, ................. ದಂದು ಸದನದಲ್ಲಿ ....................... ಅವರು ತನ್ನ ಬಗ್ಗೆ ಮಾಡಿದ ಕೆಲವು ಆಕ್ಷೇಪಗಳ ಬಗ್ಗೆ ವೈಯಕ್ತಿಕ ವಿವರಣೆಯನ್ನು ನೀಡುವುದು.

## *ಸಮಿತಿಯ ಚುನಾವಣೆಯ ಪ್ರಸ್ತಾವ*

21. ಶ್ರೀ .......................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು. "ಸೀಮಾ ಶುಲ್ಕ ಅಧಿನಿಯಮ, 1965ರ 4ನೇ ಪ್ರಕರಣದ (3) (ಸಿ) ಉಪ ಪ್ರಕರಣಕ್ಕೆ ಅನುಸಾರವಾಗಿ, ಸಭಾಪತಿಯವರು ನಿರ್ದೇಶಿಸಬಹುದಾದ ಅಂಥ ರೀತಿಯಲ್ಲಿ ಸದರಿ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಈ ಸದನದ ಸದಸ್ಯರು ತಮ್ಮ ಪೈಕಿ ಇಬ್ಬರು ಸದಸ್ಯರನ್ನು ಏಲಕ್ಕಿ ಮಂಡಲಿಯ ಸದಸ್ಯರಾಗಿ ಸೇವೆ ಸಲ್ಲಿಸಲು ಚುನಾಯಿಸಲು ತೊಡಗುತ್ತಾರೆ."

## *ಜಂಟಿ ಸಮಿತಿಯ ವರದಿಯ ಬಗ್ಗೆ ಅವಧಿ ವಿಸ್ತರಣೆಗೆ ಪ್ರಸ್ತಾವ*

22. ಶ್ರೀ ..................

ಶ್ರೀ ...................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು:

"ಸಾರ್ವಜನಿಕರ ವಿರುದ್ಧ ದುರ್ನಡತೆಯ ಆಪಾದನೆಗಳ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ವಿಚಾರಣೆಗಾಗಿ ಲೋಕಪಾಲರನ್ನು ನೇಮಿಸುವುದಕ್ಕೆ ಉಪಬಂಧ ಕಲ್ಪಿಸುವ ವಿಧೇಯಕದ ಮೇಲೆ ಜಂಟಿ ಸಮಿತಿಯ ವರದಿಯನ್ನು ಮಂಡಿಸಲು ಕಾಲಮಿತಿಯನ್ನು ಮುಂದಿನ ಅಧಿವೇಶನದ ಮೊದಲ ವಾರದ ಕೊನೆಯ ದಿನದವರೆಗೆ ಈ ಸದನವು ಮತ್ತಷ್ಟು ವಿಸ್ತರಿಸುತ್ತದೆ."

## *ಪ್ರಸ್ತಾವ*

23. ಶ್ರೀ ...................

ಶ್ರೀ ................... ರವರು ಈ ಮುಂದಿನದನ್ನು ಮಂಡಿಸುವುದು:

"ಈ ಸದನವು ......................... ದಂದು ಮಂಡಿಸಿದ ಕಾರ್ಯಕಲಾಪಗಳ ಸಲಹಾ ಸಮಿತಿಯ ....................... ವರದಿಯನ್ನು ಅಂಗೀಕರಿಸುತ್ತದೆ."

## *ಮಂತ್ರಿ ಪರಿಷತ್ತಿನಲ್ಲಿ ಅವಿಶ್ವಾಸ ಗೊತ್ತುವಳಿ*

24. ಶ್ರೀ ......................... ಅವರು ಈ ಮುಂದಿನದನ್ನು ಮಂಡಿಸುವುದು:
"ಈ ಸದನವು ಸಚಿವ ಸಂಪುಟದಲ್ಲಿ ವಿಶ್ವಾಸವಿಲ್ಲದಿರುವುದನ್ನು ತಿಳಿಸುತ್ತದೆ."

## *ಶಾಸನಾತ್ಮಕ ಕಾರ್ಯಕಲಾಪಗಳು*

(i) ವಿಧೇಯಕವನ್ನು ಹಿಂತೆಗೆದುಕೊಳ್ಳುವುದು

25. ಶ್ರೀ ......................... ಅವರು, ದಂಡ ಪ್ರಕ್ರಿಯಾ ಸಂಹಿತೆ ಅಧಿನಿಯಮ, 1973ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಹಿಂತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೋರುವ ಪ್ರಸ್ತಾವವನ್ನು ಮಂಡಿಸುವುದು.

(i) ವಿಧೇಯಕವನ್ನು ಮಂಡಿಸುವುದು.

26. ಶ್ರೀ..................... ಅವರು ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ ಅಧಿನಿಯಮ, 1920ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವ ಪ್ರಸ್ತಾವವನ್ನು ಮಂಡಿಸುವುದು. ಹಾಗೂ ವಿಧೇಯಕವನ್ನು ಮಂಡಿಸುವುದು.

## *ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾರ್ಪಣಾ ಪ್ರಸ್ತಾವ*

27. ಶ್ರೀ ........................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು.

"ಈ ಮುಂದಿನಂತೆ ರಾಷ್ಟ್ರಪತಿಗಳು .......................... ರಂದು ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ....................... ಸದಸ್ಯರಾದ ನಾವು ರಾಷ್ಟ್ರಪತಿಗಳಿಗೆ ಅತ್ಯಂತ ಕೃತಜ್ಞರಾಗಿದ್ದೇವೆ.

ಶ್ರೀ ....................... ಅವರು ಪ್ರಸ್ತಾವವನ್ನು ಅನುಮೋದಿಸುವುದು."

## *ಆಯವ್ಯಯ (ಸಾಮಾನ್ಯ)*
## *ಮೊದಲನೇ ಹಂತ*

28. 2012-13ನೇ ಸಾಲಿನ ಆಯವ್ಯಯ (ಸಾಮಾನ್ಯ)ದ ಮೇಲೆ ಸಾಮಾನ್ಯ ಚರ್ಚೆ.

## *ಆಯವ್ಯಯ (ಸಾಮಾನ್ಯ)*
## *ಎರಡನೇ ಹಂತ*

29. ಗೃಹ ಮಂತ್ರಾಲಯದ ನಿಯಂತ್ರಣದಲ್ಲಿರುವ ಬೇಡಿಕೆಗಳ ಮೇಲೆ ಚರ್ಚೆ ಮತ್ತು ಮತದಾನ.

## *ಶಾಸನಾತ್ಮಕ ಕಾರ್ಯಕಲಾಪಗಳು*

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

30. ಶ್ರೀ .................. ಅವರು, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಅಧಿನಿಯಮ, 1956ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವ ಪ್ರಸ್ತಾವವನ್ನು ಮಂಡಿಸುವುದು.

ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವ ಪ್ರಸ್ತಾವವನ್ನು ಕೂಡ ಮಂಡಿಸುವುದು.

## *ಖಾಸಗಿ ಸದಸ್ಯರ ಕಾರ್ಯಕಲಾಪಗಳು*

31. ಶ್ರೀ ......................

ಶ್ರೀ ...................... ಅವರು, ಈ ಮುಂದಿನಂತೆ ಪ್ರಸ್ತಾವವನ್ನು ಮಂಡಿಸುವುದು.

"ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಪರಿಭಾವಿತ ವಿಶ್ವವಿದ್ಯಾನಿಲಯಗಳಾದ ಇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಲ್ಲಿ ಅಶಾಂತಿ ಬೆಳೆಯುತ್ತಿರುವುದರ ಬಗ್ಗೆ ಈ ಸದನವು ತನ್ನ ಆತಂಕವನ್ನು ವ್ಯಕ್ತಪಡಿಸುತ್ತದೆ ಹಾಗೂ ಅಶಾಂತಿಗೆ ಕಾರಣಗಳನ್ನು ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ."

### *ನಿರ್ಣಯ*

32. ಶ್ರೀ ....................... ಅವರು ಈ ಮುಂದಿನ ಪ್ರಸ್ತಾವವನ್ನು ಮಂಡಿಸುವುದು.

"ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಾನತೆಯನ್ನು ತರುವ ದೃಷ್ಟಿಯಿಂದ ಹಾಗೂ ಜಾತಿ ಮತ್ತು ವರ್ಗ ತಾರತಮ್ಯವನ್ನು ತೊಡೆದು ಹಾಕುವುದು ಹಾಗೂ ಸಮಾಜದ ಶೋಷಿತ ಮತ್ತು ದುರ್ಬಲ ವರ್ಗಗಳಿಗೆ ವಿಶೇಷ ಅವಕಾಶವನ್ನು ನೀಡಲು, ಸರ್ಕಾರಿ ನೌಕರರಿಗೆ ಅಂತರ್ಜಾತಿ ವಿವಾಹವನ್ನು ಕಡ್ಡಾಯಗೊಳಿಸಲು ಮತ್ತು ಸರ್ಕಾರಿ ಸೇವೆಯಲ್ಲಿ ಮತ್ತು ಸೈನ್ಯದಲ್ಲಿ ಕನಿಷ್ಠ ಶೇಕಡಾ 60 ರಷ್ಟು ಹುದ್ದೆಗಳನ್ನು ಹರಿಜನರು, ಆದಿವಾಸಿಗಳು, ಅಲ್ಪಸಂಖ್ಯಾತರು ಮಹಿಳೆಯರು ಮತ್ತು ಇತರ ಹಿಂದುಳಿದ ವರ್ಗಗಳಿಗೆ, ಸಂವಿಧಾನವನ್ನು ತಿದ್ದುಪಡಿ ಮಾಡುವ ಮತ್ತು ಈ ಬಗ್ಗೆ ಕಾನೂನನ್ನು ತರುವ ಮೂಲಕ ಮೀಸಲಾತಿಯನ್ನು ತರಲು ಈ ಸದನವು ಶಿಫಾರಸ್ಸು ಮಾಡುತ್ತದೆ."

### *ಅರ್ಧ ಗಂಟೆ ಕಾಲಾವಧಿ ಚರ್ಚೆ*

33. ಶ್ರೀ ........................ ಅವರು ಟೈರುಗಳ ಬೆಲೆ ಏರಿಕೆಯ ಬಗ್ಗೆ ....................... ದಂದು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ .............. ಗೆ ನೀಡಿರುವ ಉತ್ತರದಿಂದ ಉದ್ಭವಿಸಿದ ಅಂಶದ ಮೇಲೆ ಚರ್ಚಿಸುವುದು.

ನವದೆಹಲಿ (ಹೆಸರು)

ದಿನಾಂಕ: ಕಾರ್ಯದರ್ಶಿ

***ಸೂಚನೆ:*** ಸಾಮಾನ್ಯವಾಗಿ ಸದನದ ಕಾರ್ಯಕಲಾಪಗಳನ್ನು ಮುಂದೂಡುವ ಸೂಚನೆಗಳ ಬಗ್ಗೆ ಮತ್ತು ವಿಶೇಷ ಅಧಿಕಾರದ ಉಲ್ಲಂಘನೆಯ ಪ್ರಶ್ನೆಗಳ ಬಗ್ಗೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಯಾವುದೇ ನಮೂದು ಮಾಡಿಲ್ಲದ 'ಪ್ರಶ್ನೆಗಳ' ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

## *ಅನುಬಂಧ* – VI

### *ಯುವ ಸಂಸತ್ ಸ್ಪರ್ಧೆ ನಡೆಸುವ ಪದ್ಧತಿ ಮತ್ತು ಕಾರ್ಯವಿಧಾನದ ಬಗ್ಗೆ ಟಿಪ್ಪಣಿ*

***1. ಯುವ ಸಂಸತ್ ಸದನದ ಒಳಗೆ ಆಸನ ವ್ಯವಸ್ಥೆ.-*** ಯುವ ಸಂಸತ್ತಿನ ಕಾರ್ಯವ್ಯವಸ್ಥೆಯು ಸ್ಥೂಲವಾಗಿ ಲೋಕಸಭೆಯ ಕಾರ್ಯವ್ಯವಸ್ಥೆಯ ಮಾದರಿಯಲ್ಲಿಯೇ ಇರತಕ್ಕದ್ದು. ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಮೊದಲು ದೇಶದ ನಿಜವಾದ ಸಂಸತ್ತಿನ ವಾಸ್ತವಿಕ ಕಾರ್ಯಕಲಾಪಗಳನ್ನು ಸ್ವತಃ ನೋಡಿ ಲೋಕಸಭೆಯ ಸದನದಲ್ಲಿ ಸದಸ್ಯರುಗಳಿಗಾಗಿ ಮಾಡಲಾದ ವ್ಯವಸ್ಥೆಯನ್ನು ತಿಳಿದುಕೊಂಡರೆ ಕಾರ್ಯಚಟುವಟಿಕೆಯ ಜವಾಬ್ದಾರಿ ಹೊತ್ತಿರುವ ಉಪಾಧ್ಯಾಯರ ಕಾರ್ಯಾಭಾರ ಸುಲಭವಾದಂತಾಗುತ್ತದೆ.

ಯುವ ಸಂಸತ್ತಿನ ಸದನದ ವಿನ್ಯಾಸವು ಸಾಧ್ಯವಾದಷ್ಟು ಮಟ್ಟಿಗೆ ಲೋಕಸಭಾ ಸದನದ ವಿನ್ಯಾಸದಂತೆಯೇ ಇರಬೇಕು. ಸಭಾಧ್ಯಕ್ಷರ ವೇದಿಕೆ ಮತ್ತು ಆಸನವು ಅರ್ಧವೃತ್ತಾಕಾರದ ಜ್ಯಾರೇಖೆಯ ಕೇಂದ್ರದಲ್ಲಿರಬೇಕು. ಸದಸ್ಯರುಗಳ ಆಸನ ವ್ಯವಸ್ಥೆಯು ಲೋಕಸಭೆಯಲ್ಲಿರುವಂತೆ ಲಾಳದ ಆಕಾರದಲ್ಲಿರಬೇಕು. ಲೋಕಸಭೆಯ ಸದನವು ಅರ್ಧವೃತ್ತಾಕಾರದ ಸಭಾಂಗಣವಾಗಿದ್ದು, ಸಭಾಧ್ಯಕ್ಷರು ಅರ್ಧ ವೃತ್ತಾಕಾರದ ಎರಡೂ ಕೊನೆಗಳನ್ನು ಸೇರಿಸಿದ ಜ್ಯಾರೇಖೆಯ ಮಧ್ಯಭಾಗದ ಎದ್ದು ಕಾಣುವ ಸ್ಥಳದಲ್ಲಿರುವ ಮೇಲ್ಕಟ್ಟಿನಿಂದ ಕೂಡಿದ ಆಸನದಲ್ಲಿ ಕುಳಿತಿರುತ್ತಾರೆ. ಸಭಾಧ್ಯಕ್ಷರ ಆಸನದ ಮುಂದೆ ಒಂದು ವಿಭಾಜಕ ಸ್ಥಾನವಿರುತ್ತದೆ. ವೇದಿಕೆಯ ಎಡಭಾಗದಲ್ಲಿ ವಿರೋಧಪಕ್ಷದ ಸದಸ್ಯರಿಗಾಗಿ ಮತ್ತು ಬಲಭಾಗದಲ್ಲಿ ಆಡಳಿತಾರೂಢ ಪಕ್ಷದವರಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಯುವ ಸಂಸತ್ ಸದನಕ್ಕಿಂತ ಸ್ವಲ್ಪ ಎತ್ತರಿಸಲಾದ ಸ್ಥಳದಲ್ಲಿ ಸಂದರ್ಶಕರು, ಪತ್ರಿಕೆಯವರು, ಗಣ್ಯ ರಾಜತಾಂತ್ರಿಕರು ಮತ್ತು ವಿಶೇಷ ಸಂದರ್ಶಕರು ಮುಂತಾದವರಿಗಾಗಿ ಸಂದರ್ಶಕರ ಗ್ಯಾಲರಿ ಇರುತ್ತದೆ.

### *ಯುವ ಸಂಸತ್ತನ್ನು ನಡೆಸುವುದಕ್ಕಾಗಿ ಕಾರ್ಯವಿಧಾನ*

ಯುವ ಸಂಸತ್ತಿನಲ್ಲಿ ಅನುಸರಿಸಬೇಕಾದ ಸಂಸದೀಯ ಕಾರ್ಯವಿಧಾನಗಳು ಮತ್ತು ಪದ್ಧತಿಗಳು ಸಾಧ್ಯವಾದ ಮಟ್ಟಿಗೆ ಸ್ಥೂಲವಾಗಿ ಲೋಕಸಭೆಯಲ್ಲಿ ಅನುಸರಿಸುತ್ತಿರುವ ಪದ್ಧತಿಗಳು ಮತ್ತು ಕಾರ್ಯವಿಧಾನಗಳಂತೆಯೇ ಇರತಕ್ಕದ್ದು.

ಯುವ ಸಂಸತ್ ಅಧಿವೇಶನವನ್ನು ನಡೆಸುವುದಕ್ಕೆ ಮೊದಲು, ಭಾಗವಹಿಸುತ್ತಿರುವ ಪ್ರತಿಯೊಂದು ಶಾಲೆಯು ಕಲಾಪಗಳ ಒಂದು ಪಟ್ಟಿಯನ್ನು ತಯಾರಿಸತಕ್ಕದ್ದು. ಹೀಗೆ ಮಾಡುವುದರಿಂದ ಅವರು ಸದನದಲ್ಲಿ ಚರ್ಚೆಗಳಲ್ಲಿ ಪಾಲ್ಗೊಳ್ಳಲು ತಯಾರಿ ನಡೆಸಿದಂತೆ ಆಗುತ್ತದೆ.

ಸದನವು ನಡೆಸುವ ಕಲಾಪಗಳನ್ನು ಎರಡು ಸ್ಥೂಲ ವರ್ಗಗಳಾಗಿ ವಿಂಗಡಿಸಬಹುದು. ಅಂದರೆ, (1) ಸರ್ಕಾರದ ಕಲಾಪಗಳು ಮತ್ತು (2) ಖಾಸಗಿ ಸದಸ್ಯರ ಕಲಾಪಗಳು. ಸರ್ಕಾರವು ತನ್ನ ಶಾಸನಗಳು, ಪ್ರಮುಖ ಕಾರ್ಯನೀತಿಗಳು, ತೆರಿಗೆ ಪ್ರಸ್ತಾವಗಳು ಮತ್ತು ವೆಚ್ಚದ ಅಂದಾಜುಗಳು ಇವೆಲ್ಲವುಗಳಿಗೆ ಸದನದ ಅನುಮೋದನೆ ಪಡೆಯಬೇಕಾಗಿರುವುದರಿಂದ, ಸಂಸತ್ತಿನ ಸಮಯದ ಹೆಚ್ಚಿನ ಭಾಗವನ್ನು ಸರ್ಕಾರದ ಕಲಾಪಗಳ ನಿರ್ವಹಣೆಗೆ ನೀಡಲಾಗುತ್ತದೆ.

ಲೋಕಸಭೆಯಲ್ಲಿ, ಸಂಸದೀಯ ಕಲಾಪವನ್ನು "ಸಭಾಧ್ಯಕ್ಷರ ನಿರ್ದೇಶನ" ದಲ್ಲಿ ತೋರಿಸಲಾದ ಕ್ರಮದಲ್ಲಿ ವ್ಯವಸ್ಥೆ ಮಾಡಲಾಗಿದೆ. ಸದನದಲ್ಲಿ ಸಾಮಾನ್ಯವಾಗಿ ಕೈಗೊಳ್ಳಲಾಗುವ ಕಲಾಪಗಳ ವಿವಿಧ ವಿಷಯಗಳು ಈ ಮುಂದಿನ ಕ್ರಮದಲ್ಲಿರತಕ್ಕದ್ದು.-

1. ಪ್ರಮಾಣವಚನ ಅಥವಾ ಪ್ರತಿಜ್ಞಾವಚನ
2. ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಮಾಡುವ ಭಾಷಣದ ಪ್ರತಿಗಳನ್ನು ಸಭೆಯ ಮುಂದೆ ಮಂಡಿಸುವುದು.
3. ಸಂತಾಪ ಸೂಚನೆಯ ಪ್ರಸ್ತಾವಗಳು.
4. ಪ್ರಶ್ನೆಗಳು (ಅಲ್ಪಾವಧಿ ಸೂಚನೆ ಪ್ರಶ್ನೆಗಳೂ ಒಳಗೊಂಡಂತೆ)
5. ರಾಷ್ಟ್ರಪತಿಯವರ ಭಾಷಣದ ಮೇಲೆ ವಂದನೆಗಳು
6. ಸದನದ ಕಲಾಪಗಳ ನಿಲುವಳಿ ಸೂಚನೆಗಳ ಮಂಡನೆಗೆ ಅನುಮತಿ
7. ಹಕ್ಕುಚ್ಯುತಿಯನ್ನು ಒಳಗೊಂಡಿರುವ ಪ್ರಶ್ನೆಗಳು
8. ಸಭೆಯ ಮುಂದೆ ಮಂಡಿಸಬೇಕಾಗಿರುವ ಕಾಗದಪತ್ರಗಳು
9. ರಾಷ್ಟ್ರಪತಿ ಅವರಿಂದ ಬಂದ ಸಂದೇಶಗಳನ್ನು ಓದುವುದು
10. ರಾಜ್ಯಗಳ ಪರಷತ್ತಿನಿಂದ (ರಾಜ್ಯಸಭೆ) ಬಂದ ಸಂದೇಶಗಳನ್ನು ಓದುವುದು
11. ವಿಧೇಯಕಗಳಿಗೆ ರಾಷ್ಟ್ರಪತಿಯವರ ಅನುಮತಿಗೆ ಸಂಬಂಧಪಟ್ಟಂತೆ ಸೂಚನೆ
12. ಸದನದ ಸದಸ್ಯರ ದಸ್ತಗಿರಿ ಅಥವಾ ಬಂಧನ ಅಥವಾ ಬಿಡುಗಡೆಗೆ ಸಂಬಂಧಪಟ್ಟಂತೆ ಇತರ ಪ್ರಾಧಿಕಾರಗಳ ಮ್ಯಾಜಿಸ್ಟ್ರೇಟರಿಂದ ಪತ್ರಗಳು.
13. ಗಮನ ಸೆಳೆಯುವ ಸೂಚನೆಗಳು
14. ಸದನದ ಉಪವೇಶನಗಳಿಂದ ಸದಸ್ಯರ ಗೈರುಹಾಜರಿಯ ಅನುಮತಿಗೆ ಸಂಬಂಧಪಟ್ಟಂತೆ ಸಭಾಧ್ಯಕ್ಷರಿಂದ ಘೋಷಣೆ.
15. ವಿವಿಧ ವಿಷಯಗಳಿಗೆ, ಎಂದರೆ, ಸದನದ ಸದಸ್ಯರ ರಾಜೀನಾಮೆಗಳಿಗೆ ಸಂಬಂಧಪಟ್ಟಂತೆ ಮತ್ತು ಅಧ್ಯಕ್ಷರ ಸ್ಥಾನಗಳಿಗೆ, ಸಮಿತಿಗಳು ಮುಂತಾದವುಗಳಿಗೆ ನಾಮನಿರ್ದೇಶನ ಮಾಡುವುದಕ್ಕೆ ಸಂಬಂಧಪಟ್ಟಂತೆ ಸಭಾಧ್ಯಕ್ಷರಿಂದ ಘೋಷಣೆ.
16. ಸಭಾಧ್ಯಕ್ಷರಿಂದ ನಿರ್ಣಯಗಳು
17. ಸಮಿತಿಗಳ ವರದಿಗಳನ್ನು ಮಂಡಿಸುವುದು
18. ವಿಧೇಯಕಗಳ ಮೇಲಿನ ಆಯ್ಕೆ/ಜಂಟಿ ಸಮಿತಿಗಳ ಮುಂದೆ ಸಾಕ್ಷ್ಯಗಳ ಮಂಡನೆ
19. ಅರ್ಜಿಗಳ ಮಂಡನೆ
20. ಸಚಿವರುಗಳಿಂದ ಹೇಳಿಕೆಗಳು
21. ಮಾಜಿ ಸಚಿವರಿಂದ ಅವರ ರಾಜೀನಾಮೆಯ ಕಾರಣದ ಸಂಬಂಧದಲ್ಲಿ ವೈಯಕ್ತಿಕ ಹೇಳಿಕೆಗಳು
22. 115ನೇ ನಿರ್ದೇಶನದ ಅಡಿಯಲ್ಲಿನ ಹೇಳಿಕೆಗಳು
23. ನಿಯಮ 357ರ ಅಡಿಯಲ್ಲಿ ವೈಯಕ್ತಿಕ ವಿವರಣೆ (ಚರ್ಚೆಯ ಸಂದರ್ಭದಲ್ಲಿ ನೀಡದಿದ್ದಲ್ಲಿ)

24. ಸಮಿತಿಗಳಿಗೆ ಚುನಾವಣಾ ಪ್ರಸ್ತಾವಗಳು
25. ವಿಧೇಯಕಗಳ ಮೇಲಿನ ಆಯ್ಕೆ / ಜಂಟಿ ಸಮಿತಿಗಳ ವರದಿಗಳ ಮಂಡನೆಗಾಗಿ ಕಾಲಾವಕಾಶ ವಿಸ್ತರಣೆಗಾಗಿ ಪ್ರಸ್ತಾವಗಳು
26. ಕಲಾಪಗಳ ಸಲಹಾ ಸಮಿತಿಯ ವರದಿಯ ಅಂಗೀಕಾರಕ್ಕಾಗಿ ಪ್ರಸ್ತಾವಗಳು
27. ಸಭಾಧ್ಯಕ್ಷರನ್ನು / ಉಪಸಭಾಧ್ಯಕ್ಷರನ್ನು ತೆಗೆದು ಹಾಕುವುದಕ್ಕಾಗಿ ನಿರ್ಣಯದ ಮಂಡನೆಗೆ ಅನುಮತಿ ಪ್ರಸ್ತಾವಗಳು.
28. ಮಂತ್ರಿಗಳ ಪರಿಷತ್ತಿನಲ್ಲಿ ಅವಿಶ್ವಾಸ ನಿರ್ಣಯದ ಮಂಡನೆಗೆ ಅನುಮತಿ ಪ್ರಸ್ತಾವ.
29. ಹಿಂತೆಗೆದುಕೊಳ್ಳಬೇಕಾದ ವಿಧೇಯಕಗಳು
30. ಮಂಡಿಸಬೇಕಾದ ವಿಧೇಯಕಗಳು
31. ಖಾಸಗಿ ಸದಸ್ಯರ ವಿಧೇಯಕದ ಮಂಡನೆ
32. ಖಾಸಗಿ ಸದಸ್ಯರ ವಿಧೇಯಕದ ಪರ್ಯಾಲೋಚನೆ
33. ಅಧ್ಯಾದೇಶಗಳ ಮೂಲಕ ತತ್‌ಕ್ಷಣ ಶಾಸನ ರಚನೆಗೆ ಕಾರಣಗಳನ್ನು ನೀಡುವ ವಿವರಣಾತ್ಮಕ ಹೇಳಿಕೆಗಳ ಮಂಡನೆ
34. ಕ್ರಿಯಾಲೋಪಗಳಲ್ಲದ, 377ನೇ ನಿಯಮದ ಅಡಿಯಲ್ಲಿನ ವಿಷಯಗಳನ್ನು ಎತ್ತುವುದು.
35. ಹಕ್ಕು ಬಾಧ್ಯತಾ ಸಮಿತಿಯ ವರದಿಗಳ ಪರಿಶೀಲನೆ.

ಈ ಮೇಲ್ಕಂಡ ಎಲ್ಲಾ ವಿಷಯಗಳು, ಯುವ ಸಂಸತ್ತಿನ ಕಲಾಪಗಳ ಪಟ್ಟಿಯಲ್ಲಿ ಒಳಗೊಂಡಿರಬೇಕಾದ ಅಗತ್ಯವಿಲ್ಲ. ಮಾರ್ಗದರ್ಶಿಗಳಾಗಿ ಬಳಸಲು ಇವುಗಳನ್ನು ಪಟ್ಟಿ ಮಾಡಲಾಗಿದೆ. ಸಾಕಷ್ಟು ವಾಸ್ತವಾಂಶಗಳಿರುವ ಪ್ರಮುಖ ವಿಷಯಗಳನ್ನು ಮಾತ್ರ ಒಳಗೊಳ್ಳತಕ್ಕದ್ದು.

ಸಾಮಾನ್ಯವಾಗಿ, ಈ ಮುಂದಿನ ವಿಷಯಗಳನ್ನು "ಯುವ ಸಂಸತ್"ನ ಉಪವೇಶನಕ್ಕಾಗಿ ಕಾರ್ಯಸೂಚಿಯಲ್ಲಿ ಸೇರಿಸಬಹುದಾಗಿದೆ:-

1. ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನ
2. ಸಂತಾಪ ಸೂಚನೆಯ ಪ್ರಸ್ತಾವಗಳು
3. ಪ್ರಶ್ನೆಗಳು
4. ನಿಲುವಳಿ ಸೂಚನೆ
5. ಹಕ್ಕುಚ್ಯುತಿಯನ್ನು ಒಳಗೊಂಡಿರುವ ಪ್ರಶ್ನೆಗಳು
6. ಸಭೆಯ ಮುಂದೆ ಮಂಡಿಸಬೇಕಾಗಿರುವ ಕಾಗದ ಪತ್ರಗಳು
7. ಗಮನ ಸೆಳೆಯುವ ಸೂಚನೆಗಳು
8. ಶಾಸನ ರಚನಾ ಕಲಾಪ

9. ಖಾಸಗಿ ಸದಸ್ಯರ ಪ್ರಸ್ತಾವ
10. ಅಲ್ಪಾವಧಿ ಚರ್ಚೆ
11. ಮಂತ್ರಿ ಪರಿಷತ್ತಿನಲ್ಲಿ ಅವಿಶ್ವಾಸ ನಿರ್ಣಯದ ಮಂಡನೆ

ಲೋಕಸಭೆಯಲ್ಲಿ ಪ್ರಚಲಿತವಿರುವ ಪದ್ಧತಿಯ ಪ್ರಕಾರ ಯುವ ಸಂಸತ್ತಿನ ಅಧಿವೇಶನವು ಸಭಾಧ್ಯಕ್ಷರ ಆಗಮನದೊಂದಿಗೆ ಪ್ರಾರಂಭವಾಗುತ್ತದೆ. ಮೊದಲು ಮಾರ್ಷಲ್ (ದಂಡನಾಯಕ) ಅವರು ಸದನಕ್ಕೆ ಬಂದು ಸದನದಲ್ಲಿ ಕೋರಂ ಇರುವ ಬಗ್ಗೆ ಎಂದರೆ, ಸದನದ ಒಟ್ಟು ಸದಸ್ಯರ ಕನಿಷ್ಠ ಶೇಕಡಾ 10ರಷ್ಟು ಸದಸ್ಯರು ಹಾಜರಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರವಷ್ಟೇ ಸಭಾಧ್ಯಕ್ಷರ ಆಗಮನದ ಬಗ್ಗೆ ಮಾರ್ಷಲ್ ಅವರು ಘೋಷಿಸುತ್ತಾರೆ.

ಸಭಾಧ್ಯಕ್ಷರು, ಸದನದ ಒಳಗೆ ಪ್ರವೇಶಿಸಿದ ಕೂಡಲೇ ಅವರ ಆಗಮನದ ಬಗ್ಗೆ ಮಾರ್ಷಲ್ ಅವರು, "ಮಾನ್ಯ ಸದಸ್ಯರೇ, ಸನ್ಮಾನ್ಯ ಸಭಾಧ್ಯಕ್ಷರು" ಎಂಬುದಾಗಿ ಘೋಷಿಸುತ್ತಾರೆ.

ತರುವಾಯ, ಸದನದಲ್ಲಿ ಹಾಜರಿರುವ ಎಲ್ಲಾ ಸದಸ್ಯರೂ ಎದ್ದು ನಿಲ್ಲುತ್ತಾರೆ. ಸಭಾಧ್ಯಕ್ಷರು, ತಮ್ಮ ಆಸನದಲ್ಲಿ ಕುಳಿತುಕೊಳ್ಳುವುದಕ್ಕೆ ಮೊದಲು, ಎಡಭಾಗದಲ್ಲಿ ಕುಳಿತವರಿಗೆ ತಲೆಬಾಗಿ ವಂದಿಸಿ, ನಂತರ ಬಲಭಾಗದಲ್ಲಿ ಹಾಗೂ ಕೊನೆಯದಾಗಿ ಎದುರಿನಲ್ಲಿ ಕುಳಿತವರಿಗೆ ವಂದಿಸುತ್ತಾರೆ. ಸದಸ್ಯರು ತಾವು ಕುಳಿತುಕೊಳ್ಳುವುದಕ್ಕೆ ಮೊದಲು ಕ್ರಮವಾಗಿ, ಗೌರವಾದರಗಳೊಂದಿಗೆ ಸಭಾಧ್ಯಕ್ಷರಿಗೆ ತಲೆಬಾಗಿ ವಂದಿಸುತ್ತಾರೆ.

**1. ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ:**

ಸಭಾಧ್ಯಕ್ಷರು, ಕಲಾಪ ಪಟ್ಟಿಯಲ್ಲಿ ಪ್ರಕಟಿಸಲಾದ ಕ್ರಮದಲ್ಲಿಯೇ ಸದನದ ಕಾರ್ಯಕಲಾಪಗಳನ್ನು ಕೈಗೊಳ್ಳುತ್ತಾರೆ. ಕಾರ್ಯಸೂಚಿಯಲ್ಲಿನ ಪ್ರಥಮ ವಿಷಯ ಎಂದರೆ, ಹೊಸದಾಗಿ ಆಯ್ಕೆಗೊಂಡ ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನ ಸ್ವೀಕರಿಸುವುದು. ಪ್ರತಿಯೊಬ್ಬ ಹೊಸ ಸದಸ್ಯರು ತಮ್ಮ ಆಸನವನ್ನು ಅಲಂಕರಿಸುವುದಕ್ಕೆ ಮೊದಲು ಈ ಮುಂದಿನಂತೆ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಸ್ವೀಕರಿಸುವಂತೆ ಅಗತ್ಯಪಡಿಸಲಾಗಿದೆ:-

"ಎ.ಬಿ. ಆದ ನಾನು, ಯುವ ಸಂಸತ್ತಿನ ಸದಸ್ಯನಾಗಿ ಚುನಾಯಿತನಾಗಿದ್ದು ಅಥವಾ (ನಾಮನಿರ್ದೇಶಿತನಾಗಿದ್ದು) ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದೂ ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಶ್ರದ್ಧಾ ಪೂರ್ವಕವಾಗಿ ಪ್ರತಿಜ್ಞಾವಚನ ಸ್ವೀಕರಿಸುತ್ತೇನೆ.

ಸದಸ್ಯನು, ಪ್ರಮಾಣವಚನ ಅಥವಾ ಪ್ರತಿಜ್ಞಾವಚನವನ್ನು ಹಿಂದಿ ಅಥವಾ ಇಂಗ್ಲೀಷ್ ಅಥವಾ ಸಂವಿಧಾನದ ಅನುಸೂಚಿ – 8ರಲ್ಲಿ ನಿದಿಷ್ಟಪಡಿಸಲಾದ ಯಾವುದೇ ಭಾಷೆಯಲ್ಲಿ ಸ್ವೀಕರಿಸಬಹುದು. ಪ್ರಮಾಣವಚನವನ್ನು ಸ್ವೀಕರಿಸುವುದಕ್ಕೆ ಮೊದಲು, ಸದಸ್ಯನು, ಮುಖ್ಯ ಚುನಾವಣಾ ಆಯುಕ್ತರು (ಚುನಾವಣಾಧಿಕಾರಿ) ಅವರು ನೀಡಿದ ಚುನಾವಣಾ ಪ್ರಮಾಣ ಪತ್ರವನ್ನು ತೆಗೆದುಕೊಂಡು ಬರತಕ್ಕದ್ದು.

ಸದನದಲ್ಲಿ, ಮಹಾ ಕಾರ್ಯದರ್ಶಿಯವರು, ಸದಸ್ಯನ ಹೆಸರನ್ನು ಕರೆದಾಗ, ಸದಸ್ಯನು ತಾನು ಕುಳಿತ ಸ್ಥಳದಿಂದ ಎದ್ದು ಮಹಾ ಕಾರ್ಯದರ್ಶಿ ಅವರ ಮೇಜಿನ ಬಲಭಾಗಕ್ಕೆ ಬರುತ್ತಾರೆ ಮತ್ತು ಚುನಾವಣಾ ಪ್ರಮಾಣ ಪತ್ರವನ್ನು ಮಹಾ ಕಾರ್ಯದರ್ಶಿ ಅವರಿಗೆ ನೀಡುತ್ತಾರೆ. ಸದಸ್ಯನು ಯಾವ ಭಾಷೆಯಲ್ಲಿ ಪ್ರಮಾಣವಚನ ಅಥವಾ ಪ್ರತಿಜ್ಞಾವಚನವನ್ನು ಸ್ವೀಕರಿಸಲು ಇಚ್ಛಿಸುತ್ತಾನೋ ಆ ಭಾಷೆಯಲ್ಲಿರುವ ಪ್ರಮಾಣವಚನ ಅಥವಾ ಪ್ರತಿಜ್ಞಾವಚನದ ಒಂದು ಪ್ರತಿಯನ್ನು ಅವನಿಗೆ ನೀಡಲಾಗುವುದು. ಪ್ರಮಾಣವಚನ ಅಥವಾ ಪ್ರತಿಜ್ಞಾವಚನವನ್ನು ಸ್ವೀಕರಿಸುವಾಗ ಸದಸ್ಯನು ಸಭಾಧ್ಯಕ್ಷರಿಗೆ ಅಭಿಮುಖವಾಗಿರುತ್ತಾರೆ ಮತ್ತು ಆ ತರುವಾಯ ಸಭಾಧ್ಯಕ್ಷರ ಬಳಿಹೋಗಿ ವಂದನೆ ಸಲ್ಲಿಸುತ್ತಾನೆ ಅಥವಾ ಕೈಕುಲುಕುತ್ತಾನೆ. ಆತನು ಸಭಾಧ್ಯಕ್ಷರೊಂದಿಗೆ ಕೈಕುಲುಕುವಾಗ ಅಥವಾ ಕೈಜೋಡಿಸಿ ನಮಸ್ಕರಿಸುವಾಗ ಸಾಮಾನ್ಯವಾಗಿ ಸದಸ್ಯರು ಮೇಜನ್ನು ತಟ್ಟಿ ತಮ್ಮ ಹರ್ಷ ವ್ಯಕ್ತಪಡಿಸುತ್ತಾರೆ. ತರುವಾಯ ಸದಸ್ಯರು ಸಭಾಧ್ಯಕ್ಷರ ಆಸನದ ಹಿಂಭಾಗದಿಂದ ಮಹಾ ಕಾರ್ಯದರ್ಶಿ ಅವರ ಮೇಜಿನ ಇನ್ನೊಂದು ಭಾಗಕ್ಕೆ ಹೋಗಿ ಸದಸ್ಯರ ಹೆಸರುಗಳ ಪಟ್ಟಿಯಲ್ಲಿ ಸಹಿ ಮಾಡುತ್ತಾನೆ. ಹೆಸರುಗಳ ಪಟ್ಟಿಯಲ್ಲಿ ಸಹಿ ಮಾಡಿದ ತರುವಾಯ ಸದನದಲ್ಲಿನ ತನ್ನ ಆಸನದಲ್ಲಿ ಕುಳಿತುಕೊಳ್ಳುತ್ತಾನೆ.

## *2. ಸಂತಾಪ ಸೂಚನೆಯ ಪ್ರಸ್ತಾವಗಳು :*

ಕಾರ್ಯಸೂಚಿಯ ಮುಂದಿನ ವಿಷಯ ಎಂದರೆ, ಸದನದ ಸದಸ್ಯರ ಅಥವಾ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಖ್ಯಾತಿಯ ಪ್ರತಿಷ್ಠಿತ ವ್ಯಕ್ತಿಗಳ ಅಥವಾ ಕಲೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿನ ಹೆಸರಾಂತ ವ್ಯಕ್ತಿಗಳ ನಿಧನಕ್ಕೆ ಸಂಬಂಧಪಟ್ಟ ಸಂತಾಪ ಸೂಚನಾ ಪ್ರಸ್ತಾವಗಳಾಗಿರಬಹುದು. ಈ ಸಂಬಂಧದಲ್ಲಿ ಸಾಮಾನ್ಯ ಪದ್ಧತಿಯೆಂದರೆ, ಸಭಾಧ್ಯಕ್ಷರು ಎದ್ದುನಿಂತು ಅಗಲಿದ ವ್ಯಕ್ತಿಯ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸುವುದು. ತರುವಾಯ, ಸಭಾಧ್ಯಕ್ಷರು ತಿಳಿಸಿದ ರೀತಿಯಲ್ಲಿ ಪ್ರಧಾನ ಮಂತ್ರಿಯವರು ಕೂಡ ಸಂತಾಪ ವ್ಯಕ್ತಪಡಿಸುತ್ತಾರೆ. ಪ್ರಧಾನ ಮಂತ್ರಿಯವರ ತರುವಾಯ ಸದನದ ವಿರೋಧಪಕ್ಷದ ನಾಯಕರು ಅಗಲಿದ ಆತ್ಮಕ್ಕೆ ತಮ್ಮ ಶ್ರದ್ಧಾಂಜಲಿ ಅರ್ಪಿಸುತ್ತಾರೆ. ತದನಂತರ, ಸದನವು ಅಗಲಿದವರ ಆತ್ಮಕ್ಕೆ ಶಾಂತಿಕೋರಿ ಸ್ವಲ್ಪಕಾಲ ಮೌನ ಆಚರಿಸುವಂತೆ ಸಭಾಧ್ಯಕ್ಷರು ಘೋಷಿಸುತ್ತಾರೆ. ಆಗ ಸದನದ ಸದಸ್ಯರು ಮೌನಾಚರಣೆಗಾಗಿ ಎದ್ದುನಿಲ್ಲುತ್ತಾರೆ. ಸದಸ್ಯರು ತಮ್ಮ ಆಸನಗಳಲ್ಲಿ ಕುಳಿತ ನಂತರ ಸದನದ ಸದಸ್ಯರ ಸಂತಾಪವನ್ನು, ನಿಧನ ಹೊಂದಿದವರ ಕುಟುಂಬಗಳಿಗೆ ಕಳುಹಿಸುವಂತೆ ಮಹಾಕಾರ್ಯದರ್ಶಿ ಅವರಿಗೆ ಸಭಾಧ್ಯಕ್ಷರು ನಿರ್ದೇಶಿಸುತ್ತಾರೆ.

ಇತ್ತೀಚೆಗೆ, ಸದಸ್ಯರ ಮರಣದ ಸಂದರ್ಭದಲ್ಲಿ ಸಂಸತ್ತಿನಲ್ಲಿ ಸಭಾಧ್ಯಕ್ಷರು ಮಾತ್ರ ಸಂತಾಪ ಸೂಚನಾ ಪ್ರಸ್ತಾವಗಳನ್ನು ಮಾಡುತ್ತಾರೆ. ತರುವಾಯ, ಸದನದ ಸದಸ್ಯರು ಎದ್ದು ನಿಂತು ಅಗಲಿದ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷ ಕಾಲ ಮೌನಾಚರಣೆ ಮಾಡುತ್ತಾರೆ.

***3. ಪ್ರಶ್ನೆಗಳು :***

ಯುವ ಸಂಸತ್‌ನಲ್ಲಿ ಪ್ರತಿದಿನವೂ ಉಪವೇಶನದ ಮೊದಲ ಭಾಗವನ್ನು ಸಾಮಾನ್ಯವಾಗಿ ಚುಕ್ಕೆ ಗುರುತಿನ ಪ್ರಶ್ನೆಗಳೆಂದು ಕರೆಯಲಾಗುವ ಮೌಖಿಕ ಪ್ರಶ್ನೆಗಳಿಗೆ ಮೀಸಲಿಡತಕ್ಕದ್ದು. ಭಾರತದ ಸಂಸತ್ತಿನಲ್ಲಿ ಇದು ಸಂಸತ್ತಿನ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಬಹು ಜನಪ್ರಿಯವಾದ ವೇಳೆಯಾಗಿರುತ್ತದೆ. ಸಚಿವರ ದೃಷ್ಟಿಯಿಂದ ನೋಡಿದಾಗ ಅವರಿಗೆ ಹಂಚಿಕೆ ಮಾಡಲಾದ ವಿ಼ಯಗಳು ಅಥವಾ ಕಲಾಪ ಬಗ್ಗೆ ಅವರಿಗೆ ಇರಬೇಕಾದ ಸಂಪೂರ್ಣ ಗ್ರಹಿಕೆ ಹಾಗೂ ಪೂರಕ ಪ್ರಶ್ನೆಗಳಿಗೆ ಉತ್ತರಿಸುವಾಗ ಅವರ ಸಾಮರ್ಥ್ಯ ಹಾಗೂ ಸಮಯಪ್ರಜ್ಞೆ ಇವುಗಳಿಗೆ ಸಂಬಂಧಿಸಿದಂತೆ ಅವರ ಸತ್ವ ಪರೀಕ್ಷೆಯಾಗಿರುತ್ತದೆ. ಪ್ರಶ್ನೆಯನ್ನು, ಒಬ್ಬ ಸದಸ್ಯನು ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿವರಣೆ ಪಡೆದುಕೊಳ್ಳುವ, ವಿವರಿಸುವ ಮತ್ತು ಮಾಹಿತಿ ಪಡೆಯುವ ಒಂದು ಸಾಧನವೆಂದು ವ್ಯಾಖ್ಯಾನಿಸಲಾಗಿದೆ. ಯುವ ಸಂಸತ್ ಸ್ಪರ್ಧೆಯ ಸಮಯದಲ್ಲಿ, ಕೇಳಲಾದ ಪ್ರಶ್ನೆಗಳ ಗುಣಮಟ್ಟಕ್ಕೆ ಹಾಗೂ ಸಚಿವರು ನೀಡುವ ಉತ್ತರಗಳ ಗುಣಮಟ್ಟಕ್ಕೆ ತೀರ್ಪುಗಾರರು ಪ್ರಾಶಸ್ತ್ಯ ನೀಡುತ್ತಾರೆ.

ಯುವ ಸಂಸತ್ತಿನ ಪ್ರಭಾರ ಹೊಂದಿರುವ ಅಧ್ಯಾಪಕರಿಗೆ ಸಾಮಾನ್ಯವಾಗಿ ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ರೂಪಿಸುವಲ್ಲಿ ತೊಂದರೆಗಳು ಎದುರಾಗುತ್ತವೆ. ಪ್ರಶ್ನೆಗಳ ವಸ್ತು ವಿ಼ಯವು ಜನ ಸಾಮಾನ್ಯರು ದಿನನಿತ್ಯ ಎದುರಿಸುವಂಥ ಸಮಸ್ಯಗಳಾಗಿರಬಹುದು. ಉದಾಹರಣೆಗೆ, ದೆಹಲಿಯಲ್ಲಿ ಡಿ.ಎಂ.ಎಸ್. ಹಾಲಿನ ಬೂತುಗಳ ಮುಂದೆ ಬಹಳ ಉದ್ದನೆಯ ಕ್ಯೂ ಇರುವುದು ಸಾಮಾನ್ಯವಾಗಿ ಕಾಣಬರುವ ದೃಶ್ಯವಾಗಿದೆ. ಆ ಬೂತುಗಳಲ್ಲಿ ಅಸಮರ್ಪಕ ಮತ್ತು ಕಳಪೆ ಗುಣಮಟ್ಟದ ಹಾಲಿನ ಸರಬರಾಜಿನ ಬಗ್ಗೆ ಆಗಾಗ್ಗೆ ದೂರುಗಳು ಬರುತ್ತಿವೆ. ಇದು, ಪ್ರಶ್ನೆಯನ್ನು ಕೇಳಲು ಆಹಾರ ಸಚಿವಾಲಯದ ಕಾರ್ಯನಿರ್ವಹಣೆಗೆ ಮತ್ತು ಡಿ.ಎಂ.ಎಸ್. ನ ಅತೃಪ್ತಿಕರ ಕಾರ್ಯ ಸಾಧನೆಗೆ ಸಂಬಂಧಪಟ್ಟ ವಸ್ತು ವಿಷಯವಾಗಿರುತ್ತದೆ. ಲೋಕಸಭೆ/ರಾಜ್ಯಸಭೆಯ ಚರ್ಚೆಗಳ ಭಾಗ-ಉರ ಅವಲೋಕನವು ಪ್ರಶ್ನೆಗಳನ್ನು ಮತ್ತು ಪೂರಕ ಪ್ರಶ್ನೆಗಳನ್ನು ರೂಪಿಸುವ ಕಲೆಯ ಬಗ್ಗೆ ಉಪಯುಕ್ತ ಮಾರ್ಗದರ್ಶನವನ್ನು ಒದಗಿಸುತ್ತದೆ. ಆದರೆ ಅವು ಸಂಬಂಧಪಟ್ಟ ಮಂತ್ರಾಲಯಕ್ಕೆ ಹಂಚಿಕೆ ಮಾಡಿದ ಕಲಾಪ ವಿಷಯಗಳಿಗೆ ಸಂಬಂಧಿಸಿದ್ದಾಗಿರತಕ್ಕದ್ದು.

ಪ್ರಯಾಣಿಕರ ಅದರಲ್ಲೂ ವಿಶೇಷವಾಗಿ ಬಸ್ಸುಗಳಿಗಾಗಿ ಕಾಯುತ್ತಿರುವ ಕಚೇರಿ ಕೆಲಸಗಾರರು ಮತ್ತು ವಿದ್ಯಾರ್ಥಿಗಳ ಉದ್ದನೆಯ ಕ್ಯೂಗಳು, ಉದ್ಯೋಗ, ಪಠ್ಯಪುಸ್ತಕದ ಪಠ್ಯ ವಿಷಯಗಳು ಮತ್ತು ಶಿಸ್ತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಮಸ್ಯೆಗಳು ಹಾಗೂ ಬೆಲೆ ಏರಿಕೆ, ಅಪರಾಧಗಳ ಹೆಚ್ಚಳ ಮತ್ತು ಬರಗಾಲಗಳೇ ಮುಂತಾದ ಪ್ರಸಕ್ತ ವಿಷಯಗಳು ಪ್ರಶ್ನೆಗಳ ವಸ್ತು ವಿಷಯಗಳಾಗಿರಬಹುದು.

ಪ್ರಶ್ನೆಯು ವಿಭಿನ್ನ ವಿಷಯಗಳಿಗೆ ಸಂಬಂಧಿಸಿರಬೇಕು ಮತ್ತು ಅದು ನಮ್ಮ ರಾಷ್ಟ್ರೀಯ ಜೀವನದ ಅಥವಾ ದೈನಂದಿನ ಜೀವನದಲ್ಲಿ ಕಂಡುಬರುವ ಯಾವುವೇ ಅಂಶಗಳನ್ನು ಒಳಗೊಂಡಿರಬಹುದು. ಯುವ ಸಂಸತ್ತಿನಲ್ಲಿ ವಿದ್ಯಾರ್ಥಿಗಳು, ತಮ್ಮ ಶಾಲೆಗಳ ಕಾರ್ಯ ಚಟುವಟಿಕೆಗಳು ಮತ್ತು ತಮ್ಮ ಸ್ವಂತ ಸಮಸ್ಯೆಗಳ ಮೇಲೆಯೂ ಸಹ ಪ್ರಶ್ನೆಯನ್ನು ಕೇಳಬಹುದು.

ಸಂಸತ್ತಿನಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಉದ್ದೇಶಕ್ಕಾಗಿ, ಭಾರತ ಸರ್ಕಾರದ ಸಚಿವಾಲಯಗಳನ್ನು 5 ಗುಂಪುಗಳನ್ನಾಗಿ ವಿಂಗಡಿಸಲಾಗಿದ್ದು ಇವು, ಸಂಸತ್ ಅಧಿವೇಶನ ನಡೆಯುವಾಗ ವಾರದ ಐದು ದಿನಗಳನ್ನು ಪ್ರತಿನಿಧಿಸುತ್ತವೆ. ಸ್ಪಷ್ಟೀಕರಣ ಮತ್ತು ಗುಂಪುಗಳಾಗಿ ವಿಂಗಡಣೆಯನ್ನು ಹಿಂದಿನ ಅನುಭವದ ಆಧಾರದ ಮೇಲೆ ಮಾಡಲಾಗಿದ್ದು ಮತ್ತು ಯಾವುದೇ ನಿಯಮಿತ ದಿನದ ಪ್ರಶ್ನೆಗಳ ಪ್ರಮಾಣವು ಹೆಚ್ಚು ಕಡಿಮೆ ಸಮನಾಗಿ ವಿಸ್ತರಿಸಿರುತ್ತವೆ. ಯುವ ಸಂಸತ್ ಸಹ ಈ ಕ್ರಮವನ್ನು ಅನುಸರಿಸಬಹುದು.

ಪ್ರಶ್ನೆಗಳು "ಪ್ರಶ್ನೆಗಳ ಪಟ್ಟಿ" ಯಲ್ಲಿ ಪ್ರತ್ಯೇಕವಾಗಿ ಮುದ್ರಿತವಾಗಿರತಕ್ಕದ್ದು ಮತ್ತು ಸಭಾಧ್ಯಕ್ಷರು, ಪ್ರಶ್ನೆಯು ಯಾವ ಸದಸ್ಯನ ಹೆಸರಿನಲ್ಲಿರುವುದೋ, ಆ ಹೆಸರನ್ನು ಕರೆಯತಕ್ಕದ್ದು. ಸಭಾಧ್ಯಕ್ಷರು ಸದಸ್ಯನ ಹೆಸರನ್ನು ಕರೆದಾಗ, ಆ ಸದಸ್ಯನು ತನ್ನ ಸ್ಥಳದಲ್ಲಿ ಎದ್ದು ನಿಂತು ಪ್ರಶ್ನೆಗಳ ಮುದ್ರಿತ ಪಟ್ಟಿಯಲ್ಲಿನ ತನ್ನ ಹೆಸರಿನಡಿಯಲ್ಲಿ ನಮೂದಿಸಲಾದ ಪ್ರಶ್ನೆಯನ್ನು ಕೇಳುತ್ತಾನೆ. ತರುವಾಯ, ಸಭಾಧ್ಯಕ್ಷರು, ಪ್ರಶ್ನೆಗಳಿಗೆ ಉತ್ತರಿಸುವುದಕ್ಕಾಗಿ ಸಂಬಂಧಪಟ್ಟ ಸಚಿವರನ್ನು ಕರೆಯುತ್ತಾರೆ, ಲೋಕಸಭೆಯಲ್ಲಿ ಸದಸ್ಯನು, ಪ್ರಶ್ನೆಗಳ ಕ್ರಮ ಸಂಖ್ಯೆಗಳನ್ನು ಉಲ್ಲೇಖಿಸುವ ಮೂಲಕ ಮಾತ್ರವೇ ಪ್ರಶ್ನೆಗಳನ್ನು ಕೇಳಬೇಕು. ಯುವ ಸಂಸತ್ತಿನಲ್ಲಿ ಈ ಕ್ರಮವನ್ನು ಸ್ವಲ್ಪ ಮಟ್ಟಿಗೆ ಮಾರ್ಪಾಟು ಮಾಡಿದ್ದು, ಅದರ ಮೇರೆಗೆ, ತೀರ್ಪುಗಾರರು ಪ್ರಶ್ನೆಗಳ ವಸ್ತು ವಿಷಯವನ್ನು ತಿಳಿದುಕೊಳ್ಳಲು ಅನುಕೂಲವಾಗುವಂತೆ ಸದಸ್ಯನು ಸಂಪೂರ್ಣ ಪ್ರಶ್ನೆಯನ್ನು ಓದತಕ್ಕದ್ದು. ಸಚಿವರು ಉತ್ತರ ನೀಡಿದ ತರುವಾಯ, ಪ್ರಶ್ನೆಯನ್ನು ಕೇಳಿದ ಸದಸ್ಯನು, ಅವನು ಮೊದಲ ಪೂರಕ ಪ್ರಶ್ನೆ ಕೇಳಬೇಕೆಂದು ಇಚ್ಛಿಸಿದರೆ ಅವನ್ನು ಅದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು. ಮತ್ತು ಒಬ್ಬರಾದ ಮೇಲೆ ಒಬ್ಬರಂತೆ ಆಳುವ ಪಕ್ಷದ ಹಾಗೂ ವಿರೋಧ ಪಕ್ಷದ ಇತರ ಸದಸ್ಯರು 4 ಕ್ಕಿಂತ ಹೆಚ್ಚಲ್ಲದ ಪೂರಕ ಪ್ರಶ್ನೆಗಳನ್ನು ಕೇಳಿದರೆ, ಆದರೆ ನೀಡಲಾಗುವ ಉತ್ತರದ ಸಂಬಂಧದಲ್ಲಿನ ಯಾವುದೇ ಅಂಶಕ್ಕೆ ಸಂಬಂಧಿಸಿದ ವಿಷಯದಲ್ಲಿ ಸಭಾಧ್ಯಕ್ಷರ ಅನುಮತಿಪಡೆದು, ವಿಷದೀಕರಿಸುವಂತೆ ಕೇಳಬಹುದು ಸದಸ್ಯರು ಪ್ರಶ್ನೆಗಳ ಮೇಲೆ ಇಲ್ಲವೇ ದೀರ್ಘ ಪೂರಕ ಪ್ರಶ್ನೆಗಳ ಮೇಲೆ ಯಾವುದೇ ಚರ್ಚೆ ಮಾಡತಕ್ಕದ್ದಲ್ಲ.

***ಸಂಕ್ಷಿಪ್ತ ಸೂಚನಾ ಪ್ರಶ್ನೆ:-*** ಯಾವುದೇ ಪ್ರಶ್ನೆಯು ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ತುರ್ತು ವಿಷಯಕ್ಕೆ ಸಂಬಂಧಪಟ್ಟಿದ್ದರೆ ಲೋಕ ಸಭೆಯಲ್ಲಿ ಅನುಮತಿಸಲಾಗುವ ಕನಿಷ್ಟ ಸಮಯವಾದ 10 ದಿನಗಳಿಗಿಂತ ಕಡಿಮೆ ಸೂಚನೆಯೊಂದಿಗೆ ಒಬ್ಬ ಸದಸ್ಯನು ಮೌಖಿಕ ಉತ್ತರವನ್ನು ಕೋರಬಹುದಾಗಿದೆ. ಸಭಾಧ್ಯಕ್ಷರು ತುರ್ತು ಸ್ಥಿತಿಯನ್ನು ಒಪ್ಪಿಕೊಂಡಲ್ಲಿ ಸಚಿವರು ಆ ವಿಷಯವನ್ನು ಉತ್ತರಿಸಲು ಒಪ್ಪಿಕೊಂಡ ನಂತರ ಮಾತ್ರವೇ ಅಲ್ಪಕಾಲಿಕ ಸೂಚನೆಯೊಂದಿಗೆ ಅದನ್ನು ಅನುಮತಿಸಬಹುದು. ಅದನ್ನು ಅನುಮತಿಸಿದಾಗ

ಮತ್ತು ಕಾರ್ಯಸೂಚಿಯಲ್ಲಿ ಸೇರಿಸಿದಾಗ ಅದನ್ನು ಪ್ರಶ್ನಾವೇಳೆಯ ನಂತರ ತತ್‌ಕ್ಷಣವೇ ತೆಗೆದುಕೊಳ್ಳಲಾಗುವುದು. ಅಲ್ಪಕಾಲಿಕ ಸೂಚನಾ ಪ್ರಶ್ನೆಯನ್ನು ಕೇಳಲು ಮತ್ತು ಅದಕ್ಕೆ ಉತ್ತರಿಸಲು ಅನುಸರಿಸಬೇಕಾದ ಕ್ರಮವು ಚುಕ್ಕೆ ಗುರುತಿನ ಪ್ರಶ್ನೆಗೆ ಸಂಬಂಧಿಸಿದಂತೆ ಅನುಸರಿಸಲಾಗುವ ಕ್ರಮದಂತೆಯೇ ಇರತಕ್ಕದ್ದು.

***4. ನಿಲುವಳಿ ಸೂಚನೆ:***

ದೇಶದಲ್ಲಿ ಅಥವಾ ವಿದೇಶಗಳಲ್ಲಿ ಉದ್ಭವಿಸಿದಂಥ ಹಾಗೂ ಸರ್ಕಾರ ಮತ್ತು ಸದನವು ತಕ್ಷಣ ಗಮನ ಹರಿಸಬೇಕಾದಂಥ ಜರೂರಿನ ಅಥವಾ ತುರ್ತು ಸ್ವರೂಪದ ಕೆಲವು ವಿ್ಷಯಗಳ ಮೇಲೆ ಚರ್ಚೆ ನಡೆಸುವುದಕ್ಕೆ ಕೋರಿ ನಿಲುವಳಿ ಸೂಚನೆಯನ್ನು ತರಲಾಗುತ್ತದೆ. ಸೂಚನೆಯು ಕ್ರಮಬದ್ಧವಾಗಿದ್ದರೆ ಮತ್ತು ಅದರ ಬಗ್ಗೆ ಸಭಾಧ್ಯಕ್ಷರು ತೃಪ್ತಿ ಹೊಂದಿದರೆ, ಅವರು, ತಮ್ಮ ಒಪ್ಪಿಗೆಯನ್ನು ನೀಡುತ್ತಾರೆ ಮತ್ತು ಸಂಬಂಧಪಟ್ಟ ಸದಸ್ಯನು ಸದನದ ಅನುಮತಿಯನ್ನು ಪಡೆಯುವಂತೆ ಕೇಳುತ್ತಾರೆ. ಸದಸ್ಯನು, ತನ್ನ ಸ್ಥಾನದಲ್ಲಿ ಎದ್ದುನಿಂತು ಸದನದ ಅನುಮತಿಯನ್ನು ಈ ಮುಂದಿನಂತೆ ಕೋರುತ್ತಾರೆ. "ಮಾನ್ಯರೇ, ನಾನು ನಿಲುವಳಿ ಸೂಚನೆಯನ್ನು ತರಲು ಸದನದ ಅನುಮತಿಯನ್ನು ಕೋರುತ್ತೇನೆ" ಯುವ ಸಂಸತ್ತಿನಲ್ಲಿ ಹಾಜರಿರುವ ಕನಿಷ್ಠ 1/10 ರಷ್ಟು ಸದಸ್ಯರು ಸದನವು ಒಪ್ಪಿಗೆ ನೀಡಿದೆ ಎಂದು ನಿಲುವಳಿಯ ಪರವಾಗಿ ಎದ್ದು ನಿಂತಲ್ಲಿ ನಿಲುವಳಿಗೆ ಸಭಾಧ್ಯಕ್ಷರು ಅನುಮತಿ ನೀಡಬಹುದು, ಈ ಮೇಲಿನ ಸಂಖ್ಯೆಗಿಂತ ಕಡಿಮೆ ಸಂಖ್ಯೆಯಲ್ಲಿ ಸದಸ್ಯರು ತಮ್ಮ ಸ್ಥಾನದಲ್ಲಿ ಎದ್ದುನಿಂತಲ್ಲಿ, ಸಭಾಧ್ಯಕ್ಷರು ಸಂಬಂಧಪಟ್ಟ ಸದಸ್ಯನಿಗೆ ನಿಲುವಳಿ ಸೂಚನೆಯನ್ನು ಮಂಡಿಸಲು ಸದನವು ತನ್ನ ಅನುಮತಿಯನ್ನು ನೀಡಿಲ್ಲವೆಂಬುದಾಗಿ ತಿಳಿಸುತ್ತಾರೆ.

ನಿಲುವಳಿ ಸೂಚನೆಗೆ ಅನುಮತಿ ದೊರೆತಿಲ್ಲವೆಂಬ ಬಗ್ಗೆ ಸಭಾಧ್ಯಕ್ಷರು ತೃಪ್ತಿ ಹೊಂದಿದಲ್ಲಿ, ಅವರು, ವಿಷಯವನ್ನು ಸದನದ ಮುಂದೆ ತಾರದೇ ತಮ್ಮ ಒಪ್ಪಿಗೆ ನೀಡಲು ನಿರಾಕರಿಸುತ್ತಾರೆ ಮತ್ತು ಸಂಬಂಧಪಟ್ಟ ಸದಸ್ಯನಿಗೆ ಸಭಾಧ್ಯಕ್ಷರ ತೀರ್ಮಾನವನ್ನು ತಿಳಿಸಲಾಗುವುದು. ನಿಲುವಳಿ ಸೂಚನೆಗೆ ಸಭಾಧ್ಯಕ್ಷರು ಅನುಮತಿ ನೀಡದಿರುವುದಕ್ಕೆ ಆಧಾರವಾದ ಕೆಲವು ಕಾರಣಗಳನ್ನು ಸಂಕ್ಷಿಪ್ತವಾಗಿ ಈ ಮುಂದಿನಂತೆ ಪಟ್ಟಿ ಮಾಡಲಾಗಿದೆ:-

(i) ಅದು ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಿರುವುದಿಲ್ಲ

(ii) ವಿಷಯವು ದಿನದ ಕಲಾಪವನ್ನು ತಡೆಯುವಷ್ಟು ತುರ್ತು ಸ್ವರೂಪದ್ದಾಗಿಲ್ಲ.

(iii) ಅದು, ಸಾಕಷ್ಟು ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ವಿಷಯಕ್ಕೆ ಸಂಬಂಧಪಟ್ಟಿರುವುದಿಲ್ಲ.

(iv) ಅದು ಇತ್ತೀಚಿಗೆ ಹಠಾತ್ತಾಗಿ ಸಂಭವಿಸಿರುವ ವಿಷಯಕ್ಕೆ ಸಂಬಂಧಪಟ್ಟದ್ದಾಗಿರದೆ, ಮುಂದುವರಿಯುತ್ತಿರುವ ಒಂದು ವಿಷಯಕ್ಕೆ ಸಂಬಂಧಪಟ್ಟಿರುತ್ತದೆ.

(v) ಅದು ನಿಲುವಳಿ ಸೂಚನೆಗೆ ಸಂಬಂಧಿಸಿದ ವಿಷಯವಾಗಿರುವುದಿಲ್ಲ. ವಿಷಯವನ್ನು ಎತ್ತಲು ಇತರ

ಅವಕಾಶಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

(vi) ಅದು ಒಂದಕ್ಕಿಂತ ಹೆಚ್ಚಿನ ವಿವಾದಾಂಶಗಳಿಗೆ ಸಂಬಂಧಪಟ್ಟಿರುತ್ತದೆ.

(vii) ಆ ವಿಷಯವು ನಿಕಟ ಭವಿಷ್ಯದಲ್ಲಿ ಚರ್ಚೆಯಾಗುವ ಸಂಭವವಿರುವ ವಿಷಯಕ್ಕೆ ಸಂಬಂಧಿಸಿದ್ದಾಗಿದೆ/ಈಗಾಗಲೇ ವಿಷಯದ ಮೇಲೆ ಚರ್ಚೆಯಾಗಿದೆ.

(viii) ಅದು ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ.

(ix) ಅದು ರಾಜ್ಯದ ಒಂದು ವಿಷಯಕ್ಕೆ ಸಂಬಂಧಪಟ್ಟಿರುತ್ತದೆ.

(x) ಅದು ಒಂದು ವಿಶೇಷ ಹಕ್ಕಿನ ಬಾಧ್ಯತೆಗೆ ಸಂಬಂಧಿಸಿದ ಪ್ರಶ್ನೆಯನ್ನು ಎತ್ತುವಂತಿದೆ.

(xi) ಅದು ಶಾಸನ ರಚನೆಯನ್ನು ಅಗತ್ಯಪಡಿಸುವ ಒಂದು ವಿಷಯವಾಗಿದೆ.

(xii) ನಿಲುವಳಿ ಸೂಚನೆಯ ಮೇಲೆ ಒಂದು ವಿದೇಶಿ ಸರ್ಕಾರದ ವರ್ತನೆಯನ್ನು ಚರ್ಚಿಸಲಾಗುವುದಿಲ್ಲ.

(xiii) ಅದು ಒಂದು ವೈಯಕ್ತಿಕ ಪ್ರಕರಣಕ್ಕೆ ಸಂಬಂಧಿಸಿದ್ದಾಗಿದೆ.

(xiv) ಅದು ಒಂದು ಸ್ವಾಯತ್ತ ನಿಗಮದ/ನಿಕಾಯದ ವ್ಯವಹಾರಗಳಿಗೆ ಸಂಬಂಧಪಟ್ಟಿರುತ್ತದೆ.

(xv) ಪ್ರಶ್ನೆಯೊಂದಕ್ಕೆ ಅತೃಪ್ತಿಕರ ಉತ್ತರ ನೀಡಲಾಗಿದ್ದರೆ ಅಥವಾ ಸರ್ಕಾರವು ಉತ್ತರ ನೀಡಲು ತಿರಸ್ಕರಿಸಿದ್ದರೆ, ಆ ವಿಷಯವು ನಿಲುವಳಿ ಸೂಚನೆಗೆ ಬರುವುದಿಲ್ಲ.

ಲೋಕಸಭೆಯಲ್ಲಿ "ಈ ಸದನವನ್ನು ಈಗ ಮುಂದೂಡಲಾಗಿದೆ" ಎಂದಾಗ, ನಿಲುವಳಿ ಸೂಚನೆಯನ್ನು 1600 ವೇಳೆಯಲ್ಲಿ ಅಥವಾ ಸಭಾಧ್ಯಕ್ಷರ ಸದನದ ಕಲಾಪವನ್ನು ಪರಿಗಣಿಸಿದ ನಂತರ, ಇನ್ನು ಮೊದಲೇ ಕೈಗೆತ್ತಿಕೊಳ್ಳಬಹುದೆಂದು ನಿರ್ದೇಶಿಸಿದರೆ ಅದನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ. ಆದರೆ ಶಾಲೆಗಳ ವೈಯಕ್ತಿಕ ಯುವ ಸಂಸತ್‌ಗಳು ಅಲ್ಪಾವಧಿಯ ಅಧಿವೇಶನಗಳನ್ನು ನಡೆಸುವುದರಿಂದ, ಗಮನ ಸೆಳೆಯುವ ಸೂಚನೆಯ ನಂತರ ಅಥವಾ ಸಭಾಧ್ಯಕ್ಷರ ಅನುಕೂಲಕ್ಕೆ ತಕ್ಕಂತೆ ತತ್‌ಕ್ಷಣವೇ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳಬಹುದು.

ಗಮನ ಸೆಳೆಯುವ ಸೂಚನೆಯ ಇತ್ಯರ್ಥದ ನಂತರ ಅಥವಾ ಸಂದರ್ಭಾನುಸಾರ, ನಿಲುವಳಿ ಸೂಚನೆಯನ್ನು ಯಾವ ಸದಸ್ಯನ ಹೆಸರಿನಲ್ಲಿ ಅನುಮತಿಸಲಾಗಿದೆಯೋ ಆತನನ್ನು ಸೂಚನೆಯನ್ನು ಮಂಡಿಸುವಂತೆ ಸಭಾಧ್ಯಕ್ಷರು ಕೇಳುತ್ತಾರೆ. ಸದಸ್ಯನು ತನ್ನ ಸ್ಥಾನದಲ್ಲಿ ಎದ್ದು ನಿಂತು ಈ ಮುಂದಿನ ಸೂಚನೆಗಳನ್ನು ಮಂಡಿಸುತ್ತಾನೆ, "ಈ ಸದನವನ್ನು ಈಗ ಮುಂದೂಡಲಾಗಿದೆ, ಸದಸ್ಯನು ತರುವಾಯ ಸದನವು ಪರಿಗಣಿಸುವುದಕ್ಕಾಗಿ ಒಂದು ನಿರ್ದಿಷ್ಟ ವಿಷಯದ ಮೇಲೆ ಮಾತನಾಡುತ್ತಾನೆ. ತರುವಾಯ ಆಡಳಿತ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ಸೂಚನೆಯ ವಸ್ತು ವಿಷಯದ ಮೇಲೆ ಸಂಕ್ಷಿಪ್ತ ಭಾಷಣಗಳನ್ನು ಮಾಡುತ್ತಾರೆ. ತರುವಾಯ, ಸಂಬಂಧಪಟ್ಟ ಸಚಿವರು ಚರ್ಚೆಯಲ್ಲಿ ಪಾಲ್ಗೊಳ್ಳುವರು. ಇದಕ್ಕೆ ಸೂಚನೆಯನ್ನು ಮಂಡಿಸಿದವರು ಉತ್ತರವನ್ನು ನೀಡುವರು. ನಂತರ, ಸಭಾಧ್ಯಕ್ಷರು, ಔಪಚಾರಿಕವಾಗಿ, ಸೂಚನೆಯನ್ನು ಸದನದ ಮತಕ್ಕೆ ಹಾಕುತ್ತಾರೆ".

ವಸ್ತು ವಿಷಯದ ತುರ್ತು ಸ್ಥಿತಿ ಮತ್ತು ಪ್ರಾಮುಖ್ಯತೆಯಿಂದಾಗಿ ಅದೇ ದಿನ ನಿಲುವಳಿ ಸೂಚನೆಯ ನೋಟೀಸನ್ನು ನೀಡಲಾಗುವ ಕಾರಣ ಮತ್ತು ಅದನ್ನು ಅಂದೇ ಅಂಗೀಕರಿಸಲಾಗುವುದರಿಂದ ಅದರ ಬಗ್ಗೆ ಸದನದ ಆ ದಿನದ ಕಾರ್ಯ ಸೂಚಿಯಲ್ಲಿ ತೋರಿಸಲಾಗುವುದಿಲ್ಲ. ಆದಾಗ್ಯೂ, ಪ್ರಶ್ನಾವಳಿಯ ನಂತರ ಕೂಡಲೇ ನಿಲುವಳಿ ಸೂಚನೆಯನ್ನು ಅಂಗೀಕರಿಸುವುದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಎತ್ತಲಾಗುವುದು.

*5. ಹಕ್ಕುಚ್ಯುತಿಯನ್ನು ಒಳಗೊಳ್ಳುವ ಪ್ರಶ್ನೆಗಳು:*

ಸಂಸತ್ ಸದಸ್ಯರು, ತಮ್ಮ ಕಾರ್ಯಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ವೈಯಕ್ತಿಕವಾಗಿ ಮತ್ತು ಸಂಸತ್ ಸದನದ ಘನತೆ ಮತ್ತು ಅಧಿಕಾರವನ್ನು ರಕ್ಷಿಸಲು ಸಾಮೂಹಿಕವಾಗಿಯೂ ಕೆಲವು ಸೌಲಭ್ಯಗಳು, ವಿನಾಯಿತಿಗಳು ಮತ್ತು ಹಕ್ಕುಬಾಧ್ಯತೆಗಳನ್ನು ಅವರಿಗೆ ನೀಡಲಾಗಿದೆ. ಮುಖ್ಯವಾಗಿ, ಸಂಸತ್ತಿನ ಸ್ವಾತಂತ್ರ್ಯ ಮತ್ತು ಘನತೆಯ ರಕ್ಷಣೆ ಮತ್ತು ನಿರ್ವಹಣೆಯ ಸಲುವಾಗಿಯೇ ವಿಶೇಷ ಹಕ್ಕುಗಳು ಅಸ್ತಿತ್ವದಲ್ಲಿರುತ್ತವೆ. ನಿರ್ದಿಷ್ಟ ಹಕ್ಕುಗಳು, ಸದನದ ಹೊರಗಿನ ಯಾರೇ ವ್ಯಕ್ತಿಯ, ಅಷ್ಟೇ ಏಕೆ ಸ್ವತಃ ಚಕ್ರವರ್ತಿಯ ಯಾವುದೇ ಕೃತ್ಯ ಅಥವಾ ಬೆದರಿಕೆ ಅಥವಾ ವ್ಯವಹರಣೆಗಳ, ಭಯವೂ ಇಲ್ಲದೆ, ತನ್ನ ಪ್ರತಿಯೊಬ್ಬ ಸದಸ್ಯನು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು, ಪಡೆಯುವುದಕ್ಕೆ ಸಂಬಂಧಿಸಿದ ಲೋಕಸಭೆಯ ಅಧಿಕಾರಕ್ಕೆ ಸಂಬಂಧಪಟ್ಟಿರುತ್ತದೆ. (ಸಂಸದೀಯ ಹಕ್ಕುಬಾಧ್ಯತೆಗಳ ಕಾನೂನು ವಿಸ್‌ಕೌಂಟ್ ಕಿಲ್‌ಮ್ಯೂ)

ಯಾವುದೇ ಹೇಳಿಕೆ ಅಥವಾ ಕಾರ್ಯವು, ಅಂದರೆ, ಸದನದ ಆದೇಶಗಳಿಗೆ ಅಥವಾ ಅಧಿಕಾರಕ್ಕೆ ಅವಿಧೇಯತೆಯನ್ನುಂಟು ಮಾಡುವುದೆನ್ನಲಾಗುವ ಅಥವಾ ಅದರ ಘನತೆಗೆ ಹಾನಿಯನ್ನುಂಟು ಮಾಡುವ ಅಥವಾ ಅವಮಾನ ಅಥವಾ ಕುಂದನ್ನುಂಟು ಮಾಡುವ ಅಥವಾ ನಿಂದನೆ ಅಥವಾ ಅವಹೇಳನ ಮಾಡುವ ಯಾವುದನ್ನಾದರೂ ಹೇಳಿದರೆ ಅಥವಾ ಮಾಡಿದರೆ, ಅದು "ಸದನದ ನಿಂದನೆ" ಯಾಗುತ್ತದೆ ಮತ್ತು ಅದು ವಾಗ್ದಂಡನೆಯಿಂದ ಶಿಕ್ಷಿತವಾಗುತ್ತದೆ ಹಾಗೂ ಅಸಾಧಾರಣ ಸಂದರ್ಭದಲ್ಲಿ ಕಾರಾವಾಸದಿಂದ ಅಥವಾ ಬಂಧನದಿಂದ ಶಿಕ್ಷಾರ್ಹವಾಗುತ್ತದೆ.

ಸಂಕ್ಷಿಪ್ತವಾಗಿ, ಹಕ್ಕುಚ್ಯುತಿ ಪ್ರಶ್ನೆಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಡೆಸುವಲ್ಲಿ ಅನುಸರಿಸಬೇಕಾದ ಕ್ರಮವು ಈ ಮುಂದಿನಂತಿದೆ:-

ಒಬ್ಬ ಸದಸ್ಯನು, ಹಕ್ಕುಚ್ಯುತಿ ಪ್ರಶ್ನೆಯನ್ನು ಎತ್ತಲು ಇಚ್ಛಿಸಿದಲ್ಲಿ ಅವನು ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ ಸಭಾಧ್ಯಕ್ಷರಿಗೆ ನೋಟೀಸು ನೀಡುವುದು ಅಗತ್ಯವಾಗಿರುತ್ತದೆ. ಅದು ಇತ್ತೀಚಿಗೆ ನಿರ್ದಿಷ್ಟ ನಡೆದಿರುವ ವಿಷಯವಾಗಿದ್ದಲ್ಲಿ ಮತ್ತು ಸಭಾಧ್ಯಕ್ಷರು, ಈ ವಿಷಯದಲ್ಲಿ ಸದನದ ಪಾಲ್ಗೊಳ್ಳುವಿಕೆಯು ಅವಶ್ಯಕವೆಂದು ಮನಗಂಡರೆ, ಅವರು ತನ್ನ ಒಪ್ಪಿಗೆಯನ್ನು ನೀಡಬಹುದು. ಸದಸ್ಯನು ತರುವಾಯ, ಪ್ರಶ್ನೆಯನ್ನು ಎತ್ತುವುದಕ್ಕೆ ಅನುಮತಿ ಕೋರುತ್ತಾನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಹೇಳಿಕೆಯನ್ನು ನೀಡುತ್ತಾನೆ. ಅನುಮತಿ ನೀಡುವುದಕ್ಕೆ ಆಕ್ಷೇಪಣೆಗಳಿದ್ದರೆ, ಸಭಾಧ್ಯಕ್ಷರು, ಅನುಮತಿ ನೀಡುವುದರ

ಪರವಾಗಿರುವ ಸದಸ್ಯರನ್ನು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲುವಂತೆ ಕೋರುತ್ತಾರೆ ಮತ್ತು ಯುವ ಸಂಸತ್ತಿನಲ್ಲಿ ಹಾಜರಿದ್ದ ಸದಸ್ಯರ ಶೇಕಡಾ 10 ರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು ಎದ್ದು ನಿಂತರೆ, ಅನುಮತಿಯನ್ನು ಮಂಜೂರು ಮಾಡಲಾಗಿದೆ ಎಂದು ಸಭಾಧ್ಯಕ್ಷರು ಘೋಷಿಸುತ್ತಾರೆ. ಸಭಾಧ್ಯಕ್ಷರು ಅನುಮತಿಯನ್ನು ನಿರಾಕರಿಸಿದರೆ, ಅವರು ಆ ಬಗ್ಗೆ ಸದನದಲ್ಲಿ ತಿಳಿಸುತ್ತಾರೆ ಮತ್ತು ಅಲ್ಲಿಗೆ ವಿಷಯವು ಮುಕ್ತಾಯವಾಗುತ್ತದೆ. ಹಕ್ಕುಚ್ಯುತಿಯ ಪ್ರಶ್ನೆಗಳು ಆದ್ಯತೆಗೆ ಅರ್ಹವಾಗಿರುತ್ತವೆ ಮತ್ತು ಪ್ರಶ್ನೋತ್ತರ ವೇಳೆಯ ನಂತರ ಕೂಡಲೇ ಅವುಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಅನುಮತಿಯನ್ನು ನೀಡಿದಾಗ, ಸದನವು ಪ್ರಶ್ನೆಯನ್ನು ಪರಿಗಣಿಸಬಹುದು ಮತ್ತು ಒಂದು ತೀರ್ಮಾನಕ್ಕೆ ಬರಬಹುದು ಅಥವಾ ಒಬ್ಬ ಸದಸ್ಯನು ಹಕ್ಕುಬಾಧ್ಯತಾ ಸಮಿತಿಗೆ ವಿಷಯವನ್ನು ಉಲ್ಲೇಖಿಸಬೇಕೆಂದು ಮಾಡಿದ ಸೂಚನೆಯ ಮೇಲೆ ಹಾಗೆ ಉಲ್ಲೇಖಿಸಬಹುದು. ಸಭಾಧ್ಯಕ್ಷರು ತಾವೇ ಸ್ವತಃ, ಯಾವುದೇ ಹಕ್ಕುಬಾಧ್ಯತಾ ಪ್ರಶ್ನೆಯನ್ನು ಪರೀಕ್ಷಿಸುವುದಕ್ಕಾಗಿ ತನಿಖೆ ನಡೆಸುವುದಕ್ಕಾಗಿ ಅಥವಾ ವರದಿ ಸಲ್ಲಿಸುವುದಕ್ಕಾಗಿ ಹಕ್ಕುಬಾಧ್ಯತಾ ಸಮಿತಿಗೆ ಉಲ್ಲೇಖಿಸಬಹುದು.

### *6. ಸಭೆಯ ಮುಂದೆ ಮಂಡಿಸಬೇಕಾಗಿರುವ ಪತ್ರಗಳು:*

ಸಂವಿಧಾನದ ಉಪಬಂಧಗಳ ಅಥವಾ ಪ್ರಕ್ರಿಯಾ ನಿಯಮಗಳ ಅಥವಾ ಸಭಾಧ್ಯಕ್ಷರ ನಿರ್ದೇಶನಗಳ ಅಥವಾ ಸಂಸತ್ತು ರಚಿಸಿದ ಯಾವುದೇ ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು ಮತ್ತು ವಿನಿಯಮಗಳ ಅನುಸರಣೆಯಲ್ಲಿ, ಸಭಾಧ್ಯಕ್ಷರ ಅನುಮತಿಯೊಂದಿಗೆ ಸಚಿವರಿಂದ ಅಥವಾ ಖಾಸಗೀ ಸದಸ್ಯರಿಂದ ಅಥವಾ ಸದನದ ಕಾರ್ಯದರ್ಶಿಯವರಿಂದ, ಅವುಗಳನ್ನು ಸದನದ ದಾಖಲೆಯಲ್ಲಿ ತರುವ ಉದ್ದೇಶಕ್ಕಾಗಿ ಆ ಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಸದನದ ಮುಂದೆ ಮಂಡಿಸುವುದು ಎಂದು ಅರ್ಥ. ಹಾಗೆ ಮಂಡಿಸಲಾದ ಎಲ್ಲಾ ಪತ್ರಗಳನ್ನು ಸದನದ ವ್ಯವಹರಣೆಗಳ ಒಂದು ಭಾಗವೆಂಬುದಾಗಿ ಮುದ್ರಿಸಲಾಗುತ್ತದೆ, ಇಲ್ಲವೇ ಗ್ರಂಥಾಲಯದಲ್ಲಿ ಇಡಲಾಗುತ್ತದೆ. ಸದನದ ಮುಂದೆ ಮಂಡಿಸಲು ವ್ಯವಹಾರಗಳ ಪಟ್ಟಿಯಲ್ಲಿ ನಮೂದಿಸಿದ ಪತ್ರಗಳಿಗೆ ಸಂಬಂಧಪಟ್ಟಂತೆ ಸಚಿವರಿಂದ ಮಾಹಿತಿಗಳನ್ನು ಪಡೆಯಲು ಇಚ್ಛಿಸುವ ಸದಸ್ಯರು, ಸಂಬಂಧಪಟ್ಟ ಸಚಿವರಿಂದ ಅಗತ್ಯವಿರುವ ಮಾಹಿತಿಯ ಯಾವ ನಿರ್ದಿಷ್ಟ ಅಂಶದ ಬಗ್ಗೆ ಮಾಹಿತಿ ಬೇಕೆಂಬುದನ್ನು ಸೂಚಿಸಿ ಸಭಾಧ್ಯಕ್ಷರಿಗೆ ಮುಂಗಡ ಸೂಚನೆಯನ್ನು ನೀಡತಕ್ಕದ್ದು. ಇದರಿಂದಾಗಿ ಸಂಬಂಧಪಟ್ಟ ಸಚಿವರು ಮಾಹಿತಿಯೊಂದಿಗೆ ಸಿದ್ಧವಾಗಿ ಬರಲು ಸಾಧ್ಯವಾಗುತ್ತದೆ.

### *7. ಗಮನ ಸೆಳೆಯುವ ಸೂಚನೆಗಳು:*

ವಸ್ತು ವಿಷಯದ ತುರ್ತುಸ್ವರೂಪ ಮತ್ತು ಸಾರ್ವಜನಿಕ ಪ್ರಾಮುಖ್ಯತೆಯನ್ನು ಗಮನಿಸಿ ಸಭಾಧ್ಯಕ್ಷರು ಅಂಗೀಕಾರಾರ್ಹತೆಯನ್ನು ತೀರ್ಮಾನಿಸುತ್ತಾರೆ. ಅದರ ನೋಟೀಸನ್ನು ಸಾಧ್ಯವಾದಷ್ಟು ಮಟ್ಟಿಗೆ ನಿಲುವಳಿಯ ವಸ್ತು ವಿಷಯ ಉದ್ಭವಿಸಿದ ದಿನವೇ ನೀಡತಕ್ಕದ್ದು, ಸಭಾಧ್ಯಕ್ಷರು, ಸದಸ್ಯರನ್ನು ಕರೆದಾಗ, ಅವನು ತನ್ನ ಸ್ಥಳದಲ್ಲಿ ಎದ್ದು ನಿಲ್ಲುವುದು ಮತ್ತು ವಿಷಯಕ್ಕೆ ಸಂಬಂಧಪಟ್ಟ ಸಚಿವರ ಗಮನ ಸೆಳೆಯುವುದು ಹಾಗೂ ಒಂದು ಹೇಳಿಕೆ ನೀಡುವಂತೆ ಅವರನ್ನು ಕೋರಿಕೊಳ್ಳುವುದು ಪದ್ಧತಿಯಾಗಿರುತ್ತದೆ. ಸಚಿವರು ಹೇಳಿಕೆಯನ್ನು ಓದುತ್ತಾರೆ ಅಥವಾ ಹೇಳಿಕೆಯು ಬಹಳ ದೊಡ್ಡದಾಗಿದ್ದರೆ, ಅವರು, ಅದನ್ನೇ ಸದನದ ಮುಂದೆ

ಮಂಡಿಸಬಹುದು. ದೀರ್ಘ ಹೇಳಿಕೆಯ ಪ್ರಕರಣದಲ್ಲಿ ಹೇಳಿಕೆಯನ್ನು ಓದಿ ತಿಳಿದುಕೊಳ್ಳಲು ಮತ್ತು ಅವರು ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಸಮಯಾವಕಾಶವನ್ನು ನೀಡಲಾಗುತ್ತದೆ, ಅದಕ್ಕೆ ಸಚಿವರು ಸ್ಥಳದಲ್ಲಿಯೇ ಉತ್ತರಿಸುವರು. ಹೇಳಿಕೆಯ ಮೇಲೆ ಯಾವುದೇ ಚರ್ಚೆ ಇರುವುದಿಲ್ಲ, ಆದರೆ, ಸ್ಪಷ್ಟನೆಗಾಗಿ ಸದಸ್ಯರು ಪ್ರಶ್ನೆಗಳನ್ನು ಕೇಳಬಹುದು.

ನಿಲುವಳಿ ಸೂಚನೆಯು ಯುವ ಸಂಸತ್ತಿನ ಕಾರ್ಯಸೂಚಿಯಲ್ಲಿ ಒಂದು ಪ್ರಮುಖ ವಿಷಯವಾಗಿರುತ್ತದೆ ಮತ್ತು ಇದು ಒಂದು ದೀರ್ಘಾವಧಿ ಚರ್ಚೆಯಾಗಿ ಪರಿಣಮಿಸದಂತೆ ನೋಡಿಕೊಳ್ಳತಕ್ಕದ್ದು. ಸಚಿವರು, ತಮ್ಮ ಹೇಳಿಕೆಯನ್ನು ಓದಿದ ತರುವಾಯ ಆ ಬಗ್ಗೆ ಸ್ಪಷ್ಟೀಕರಣವನ್ನು ಅಥವಾ ಒಂದು ಅಂಶವನ್ನು ವಿಶದೀಕರಿಸಲು ಪ್ರಥಮ ಅವಕಾಶವನ್ನು ನಿಲುವಳಿ ಸೂಚನೆಯನ್ನು ಮಂಡಿಸಿದ ಸದಸ್ಯನಿಗೆ ನೀಡಲಾಗುತ್ತದೆ. ತದನಂತರ ಸಭಾಧ್ಯಕ್ಷರ ಅನುಮತಿಯೊಂದಿಗೆ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಇತರ ಸದಸ್ಯರಿಗೆ, ಪ್ರಶ್ನೆ ಕೇಳಲು ಅಥವಾ ಸ್ಪಷ್ಟೀಕರಣ ಕೋರಲು ಅವಕಾಶವಿರುತ್ತದೆ. ಎಲ್ಲಾ ಸದಸ್ಯರು ತಮ್ಮ ವಾದಗಳನ್ನು ಮಂಡಿಸಿದಾಗ ಸದಸ್ಯರು ಎತ್ತಿದ ಅಂಶಗಳಿಗೆ ಉತ್ತರಿಸಲು ಸಂಬಂಧಿಸಿದ ಸಚಿವರನ್ನು ಸಭಾಧ್ಯಕ್ಷರು ಆಹ್ವಾನಿಸುತ್ತಾರೆ.

ಈ ಬಾಬಿಗೆ ಸಂಬಂಧಪಟ್ಟ ನಮೂದುಗಳನ್ನು ಈ ಮುಂದಿನ ಕ್ರಮದಲ್ಲಿ ಕಲಾಪಗಳ ಪಟ್ಟಿಯಲ್ಲಿ ನೀಡಲಾಗಿದೆ:-

ಗಮನ ಸೆಳೆಯುವ ಸೂಚನೆ:

ಶ್ರೀ ಆನಂದಕುಮಾರ್;

ಶ್ರೀ ಜಾರ್ಜ್ ಮ್ಯಾಥ್ಯೂ;

ಶ್ರೀ ಸುರೇಶ್ ಸಿಂಗ್;

ಶ್ರೀ ಮೊಹಮ್ಮದ್ ಖಾನ್.

ದೇಶದ ವಿವಿಧ ಭಾಗಗಳಲ್ಲಿ, ನ್ಯಾಯವಾದಿಗಳು ಹೂಡಿದ ಮುಷ್ಕರಗಳು ಮುಂದುವರಿದುದರಿಂದ ಉದ್ಭವಿಸಿದ ಪರಿಸ್ಥಿತಿಯ ಬಗ್ಗೆ ಮತ್ತು ವಿಷಯವನ್ನು ಇತ್ಯರ್ಥಗೊಳಿಸಲು ಸರ್ಕಾರವು ಕೈಗೊಂಡ ಕ್ರಮದ ಬಗ್ಗೆ ಗೃಹ ಸಚಿವರ ಗಮನ ಸೆಳೆಯುವುದು.

ಇತ್ತೀಚಿಗೆ ಯಾವ ಕೆಲವು ವಿಷಯಗಳ ಮೇಲೆ ಸಂಸತ್ತಿನಲ್ಲಿ ಗಮನ ಸೆಳೆಯುವ ಸೂಚನೆಗಳನ್ನು ಅನುಸರಿಸಲಾಗಿತ್ತೋ ಅವುಗಳು ಈ ಮುಂದಿನಂತಿವೆ:-

1. ದೆಹಲಿ ಸಾರಿಗೆ ಸಂಸ್ಥೆಯ ಉದ್ಯೋಗಿಗಳು ಹೂಡಿದ ದೆಹಲಿ ಸಾರಿಗೆ ಸಂಸ್ಥೆಯ ಮುಷ್ಕರದಿಂದಾಗಿ ಉದ್ಭವಿಸಿದ ಪರಿಸ್ಥಿತಿ.

2. ಕಬ್ಬು ಬೆಳೆಗಾರರಿಗೆ ಅವರ ಉತ್ಪನ್ನಕ್ಕಾಗಿ ಲಾಭದಾಯಕ ದರ ಸಿಗುವಂತೆ ಮಾಡುವ ಅಗತ್ಯತೆ.

3. ಜವಳಿ ಕೈಗಾರಿಕೆಯಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ಹತ್ತಿ ಬೆಳೆಗಾರರ ಮತ್ತು ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಮೇಲೆ ಉಂಟಾಗಿರುವ ಪರಿಣಾಮ ಮತ್ತು ಈ ವಿಷಯದಲ್ಲಿ ಸರ್ಕಾರವು ಕೈಗೊಂಡ ಕ್ರಮ.

***8. ಶಾಸನ ರಚನಾ ವ್ಯವಹಾರ:***

ಈ ಸಂಬಂಧದಲ್ಲಿ, "ಶಾಸನ ರಚನೆ" ಎಂಬುದರ ಬಗ್ಗೆ ಯುವ ಸಂಸತ್ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವ ಅಭ್ಯರ್ಥಿಗಳಿಗೆ ಕೆಲವು ಸ್ಪಷ್ಟೀಕರಣ ನೀಡುವುದು ಅವಶ್ಯಕವಾಗಿದೆ. ಅದಕ್ಕೆ ಮೂರುನ ಅರ್ಥಗಳಿವೆ.

(ಎ) ಕಾನೂನಿನ ನಿಯಮಗಳನ್ನು ಅಧಿನಿಯಮಿಸುವ ಪ್ರಕ್ರಿಯೆ ಮತ್ತು ಅವುಗಳನ್ನು ಅಧಿನಿಯಮಿಸುವ ಪ್ರಾಧಿಕಾರ.

(ಬಿ) ಈ ಪ್ರಕ್ರಿಯೆಯ ಫಲಿತಾಂಶ ಅಥವಾ ಪ್ರಯೋಜನವೆಂದೂ ತಿಳಿಯಬಹುದು ಮತ್ತು

(ಸಿ) ಅದು, ಪ್ರಸಕ್ತ ಇರುವ ಶಾಸನಗಳ ಮೂಲಕ ಅಧಿಕಾರ ನೀಡಲಾದ ಪ್ರಾದೇಶಿಕ ಅಥವಾ ಸ್ಥಳೀಯ ಆಡಳಿತಾತ್ಮಕ ಏಜೆನ್ಸಿಗಳ ಮೂಲಕ ರಚಿಸಲಾದ ನಿಯಮಗಳ ಮತ್ತು ವಿನಿಯಮಗಳ ವ್ಯಾಪಕ ವ್ಯವಸ್ಥೆ ಎಂದು ಸಹ ಉಲ್ಲೇಖಿಸಬಹುದು.

ಕಾನೂನುಗಳು ಮೂಲತಃ ನಡವಳಿಕೆಯ ನಿಯಮಗಳು ಅಥವಾ ಸೂತ್ರಗಳು, ಅವುಗಳು ನಿಷೇಧಗಳು, ವಿಧಿವಿಧಾನಗಳು ಮತ್ತು ಅನುಮತಿಗಳ ಒಂದು ಸರಣಿಯಾಗಿದೆ. ಅವುಗಳು ನಿರ್ದಿಷ್ಟ ಸಂದರ್ಭದಲ್ಲಿ ಏನು ಮಾಡಬೇಕು, ಏನು ಮಾಡಬಾರದು ಅಥವಾ ಏನನ್ನು ಮಾಡಬಹುದು ಎಂಬುದನ್ನು ನಮಗೆ ತಿಳಿಸುತ್ತವೆ. ನಿಷೇಧಿಸಬಹುದಾದವುಗಳ ಅಥವಾ ನಿಯಮಿಸಬಹುದಾದವುಗಳ ಉಲ್ಲಂಘನೆಗಾಗಿ ಕಾನೂನು ದಂಡವನ್ನು ವಿಧಿಸಬಹುದು. ಕಾನೂನುಗಳು ಅವಶ್ಯಕವಾಗಿ ಸಾಮಾಜಿಕ ಅಗತ್ಯತೆಗಳನ್ನು ಪೂರೈಸುವಂತಿರಬೇಕು. ಇಲ್ಲದಿದ್ದಲ್ಲಿ, ಅವುಗಳು ಅರ್ಥಹೀನವಾಗುತ್ತವೆ ಮತ್ತು ಅನವಶ್ಯಕವಾಗುತ್ತವೆ.

ಕಾನೂನುಗಳು ತಮ್ಮ ಸ್ವರೂಪದಿಂದಾಗಿ ಬಹಳ ಅಮೂರ್ತ ರಚನೆಗಳಾಗಿವೆ. ಇಂದಿನ ಆಧುನಿಕ ಸ್ಥಿತಿಯಲ್ಲಿ ಕಾನೂನನ್ನು ರಚಿಸುವುದು ಬಹಳ ಸಂಕೀರ್ಣ ಮತ್ತು ಜಟಿಲವಾದ ಕಾರ್ಯವಾಗಿದೆ. ಅದಕ್ಕೆ ಅಪಾರ ದತ್ತಾಂಶಗಳ ಸಂಶೋಧನೆ, ಸಂಗ್ರಹಣೆ, ಸಹಯೋಗ ಮತ್ತು ವಿಶ್ಲೇಷಣೆಯ ಅವಶ್ಯಕತೆ ಇದೆ. ಪ್ರಾರೂಪಣಾ ಕೌಶಲ್ಯ, ಉತ್ತಮ ಸಮಾಲೋಚನೆ ಮತ್ತು ಕಾನೂನಿನಿಂದ ಬಾಧಿತರಾಗಬಹುದಾದಂಥ ಅಥವಾ ಕಾನೂನನ್ನು ಒತ್ತಾಯಪಡಿಸುವಂಥ ಆಸಕ್ತ ಗುಂಪುಗಳೊಂದಿಗೆ ಚರ್ಚೆ ನಡೆಸುವುದು ಅಗತ್ಯವಿರುತ್ತದೆ ಹಾಗೂ ಸಹಕಾರವನ್ನು ಖಚಿತಪಡಿಸಿಕೊಳ್ಳಲು ಮತ್ತು ಘರ್ಷಣೆಯನ್ನು ತಪ್ಪಿಸಲು ಅನುಕೂಲಕರ ರಾಜಿ

ಮನೋಭಾವದ ಅವಶ್ಯಕತೆ ಇರುತ್ತದೆ. ಎಲ್ಲಾ ಕಾನೂನುಗಳು ಒಂದಲ್ಲ ಒಂದು ರೀತಿಯಲ್ಲಿ ನಾಗರಿಕ ಜೀವನ, ಸ್ವಾತಂತ್ರ್ಯ ಅಥವಾ ಸ್ವತ್ತಿಗೆ ಬಾಧಕವಾಗಿರುತ್ತವೆ. ವ್ಯಾಪಾರ, ಕಾರ್ಮಿಕ, ಕೃಷಿ ಕೈಗಾರಿಕೆಗಳಂಥ ವೃತ್ತಿಪರ, ಉದ್ಯೋಗಸ್ಥ ಮತ್ತು ವಿಶೇಷ ಆಸಕ್ತಿಗಳು/ಗುಂಪುಗಳು ಪರಸ್ಪರ ವಿರೋಧಿ ಆಸಕ್ತಿಗಳನ್ನು ಹೊಂದಿರುತ್ತವೆ. ಆ ಕಾರಣದಿಂದಾಗಿ ಅವು ಇತರ ಗುಂಪುಗಳೊಂದಿಗೆ ಅಥವಾ ಸರ್ಕಾರದೊಂದಿಗೆ ವ್ಯವಹರಿಸುವಲ್ಲಿ ಸಂಸ್ಥೆಗಳು ತಮ್ಮನ್ನು ತಾವು ಬಲಪಡಿಸುವುದಕ್ಕಾಗಿ ಒಕ್ಕೂಟಗಳು ಮುಂತಾದವುಗಳನ್ನು ಸಂಘಟಿಸಿಕೊಂಡಿವೆ.

ಅದರಿಂದಾಗಿ, ಒಂದು ಶಾಸನವು ಆಡಳಿತಾತ್ಮಕ ಸಮಸ್ಯೆಗಳಲ್ಲಿ ಮತ್ತು ಅನುಭವದಲ್ಲಿ ಅಥವಾ ರಾಜಕೀಯ ಮತ್ತು ಸಾಮಾಜಿಕ ತತ್ವದ ತಾಂತ್ರಿಕ ಮೌಲ್ಯ ನಿರ್ಣಯದಲ್ಲಿ ತನ್ನ ಮೂಲವನ್ನು ಹೊಂದಿರಬಹುದು. ಮೂಲವು ಯಾವುದೇ ಆಗಿದ್ದರೂ, ಅದು ಒಂದು ಪ್ರಸ್ತಾವನೆಯಾಗಿ ಹೊರ ಬಂದಾಗ ಅದರ ಮೇಲೆ ಚರ್ಚೆ, ವಿಮರ್ಶೆ ಅಥವಾ ಹಲವಾರು ಪಂಗಡಗಳೊಂದಿಗೆ ಸಮಾಲೋಚನೆಗಳು ನಡೆಯುತ್ತವೆ.

ಆ ತರುವಾಯ ಪ್ರಸ್ತಾವವು ಸಚಿವ ಸಂಪುಟದ ಮುಂದೆ ಬಂದಾಗ ಸಚಿವ ಸಂಪುಟವು ಅದರ ಅವಶ್ಯಕ ಸಾರ, ಸ್ವರೂಪ ಮತ್ತು ಸಮಯಾಯೋಚನೆ ಇವುಗಳ ಬಗ್ಗೆ ನಿರ್ಧರಿಸುತ್ತದೆ. ಆ ತರುವಾಯ ಸರ್ಕಾರಿ ಪ್ರಾರೂಪಕರು, ತಜ್ಞರು ಮತ್ತು ಉದ್ಯೋಗಿಗಳು ಅದಕ್ಕೆ ಒಂದು ವಿಧೇಯಕದ ರೂಪ ನೀಡಿದ ಮೇಲೆ ಅದನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ.

ಸಂಸತ್ತಿಗೆ, ಸಂವಿಧಾನದ ಏಳನೇ ಅನುಸೂಚಿಯಲ್ಲಿ ಒಕ್ಕೂಟ ಪಟ್ಟಿ ಎಂದು ಕರೆಯಲಾದ ಪಟ್ಟಿ I ರಲ್ಲಿ ನಮೂದಿಸಿದ ವಿಷಯಗಳ ಬಗ್ಗೆ ಕಾನೂನು ರಚಿಸಲು ರಾಜ್ಯ ಸಂಸತ್ತಿಗೆ ಅನನ್ಯ ಅಧಿಕಾರವಿರುತ್ತದೆ. ಅದರಂತೆಯೇ, ರಾಜ್ಯ ಪಟ್ಟಿಯೆಂದು ಕರೆಯಲಾದ ಪಟ್ಟಿ IIರಲ್ಲಿ ನಮೂದಿಸಿದ ವಿಷಯಗಳ ಬಗ್ಗೆ ಕಾನೂನು ರಚಿಸಲು ವಿಧಾನ ಮಂಡಲಗಳಿಗೆ ಅನನ್ಯ ಅಧಿಕಾರವಿರುತ್ತದೆ. ಪಟ್ಟಿ IIIನ್ನು ಸಮವರ್ತಿ ಪಟ್ಟಿಯೆಂದು ಕರೆಯಲಾಗುತ್ತಿದ್ದು, ಅದು ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳು ಕಾನೂನು ರಚಿಸಲು ಸಮವರ್ತಿ ಅಧಿಕಾರವನ್ನು ಹೊಂದಿರುವ ವಿಷಯಗಳನ್ನು ಒಳಗೊಂಡಿರುತ್ತದೆ.

(i) ವಿಧೇಯಕಗಳ ವರ್ಗೀಕರಣ:

ವಿಧೇಯಕಗಳನ್ನು ಸ್ಥೂಲವಾಗಿ (1) ಸಚಿವರಿಂದ ಪ್ರಾಯೋಜಿಸಲ್ಪಡುವ ಸರ್ಕಾರಿ ವಿಧೇಯಕಗಳು ಮತ್ತು (2) ಸಚಿವರನ್ನು ಹೊರತುಪಡಿಸಿ ವೈಯಕ್ತಿಕ ಸದಸ್ಯರಿಂದ ಪ್ರಾಯೋಜಿಸಲ್ಪಡುವ ಖಾಸಗಿ ಸದಸ್ಯರ ವಿಧೇಯಕಗಳು ಎಂಬುದಾಗಿ ವಿಭಜನೆ ಮಾಡಲಾಗಿದೆ. ವಿಧೇಯಕಗಳನ್ನು ಅವುಗಳು ಒಳಗೊಂಡಿರುವ ವಿಷಯಗಳ ಆಧಾರದ ಮೇಲೆ ಈ ಮುಂದಿನಂತೆ ವರ್ಗೀಕರಿಸಲಾಗಿದೆ:-

(ಎ) ಮೂಲ ವಿಧೇಯಕಗಳು, ಅಂದರೆ, ಹೊಸ ಪ್ರಸ್ತಾವನೆ, ವಿಚಾರ ಅಥವಾ ಕಾರ್ಯನೀತಿಯನ್ನು ಒಳಗೊಂಡ ವಿಧೇಯಕಗಳು.

(ಬಿ) ತಿದ್ದುಪಡಿ ವಿಧೇಯಕಗಳು, ಅಂದರೆ ಈಗಿರುವ ಅಧಿನಿಯಮಗಳನ್ನು ಮಾರ್ಪಾಡು ಮಾಡಲು, ತಿದ್ದುಪಡಿ ಮಾಡಲು ಅಥವಾ ಪರಿಷ್ಕರಿಸಲು ಬಯಸುವ ವಿಧೇಯಕಗಳು.

(ಸಿ) ಕ್ರೋಢೀಕರಣ ವಿಧೇಯಕಗಳು, ಅಂದರೆ ಅನೇಕ ಅಧಿನಿಯಮಿತಿಗಳಲ್ಲಿ ಹಂಚಿ ಹೋಗಿರುವ ಉಪಬಂಧಗಳನ್ನು ಒಂದೇ ಅಧಿನಿಯಮಿತಿಯಲ್ಲಿ ಒಟ್ಟುಗೂಡಬಯಸುವ ವಿಧೇಯಕಗಳು.

(ಡಿ) ಅವಧಿ ಮುಕ್ತಾಯವಾಗುತ್ತಿರುವ ಅಧಿನಿಯಮಿತಿಗಳನ್ನು ಮುಂದುವರಿಸುವ ಅಥವಾ ಜೀವಂತವಾಗಿರಿಸುವ ವಿಧೇಯಕಗಳು.

(ಇ) ಅಂಗೀಕೃತವಾದ ಅಧ್ಯಾದೇಶಗಳನ್ನು ಪ್ರತಿಸ್ಥಾಪಿಸುವ ವಿಧೇಯಕಗಳು.

(ಎಫ್) ಸಂವಿಧಾನದ ತಿದ್ದುಪಡಿ ವಿಧೇಯಕಗಳು.

(ii) ವಿಧೇಯಕದ ಹಂತ:

ಒಂದು ವಿಧೇಯಕವು, ವಿಧೇಯಕದ ಮೂರು ಪರಿಚಯಗಳೆಂದು ಕರೆಯಲಾಗುವ ಮೂರು ಹಂತಗಳನ್ನು ಹಾದು ಹೋಗಬೇಕಾಗುತ್ತದೆ,-

ವಿಧೇಯಕದ ಮೊದಲ ಹಂತದ ಪರಿಚಯ:

ವಿಧೇಯಕದ ಮಂಡನೆಗೆ ಗೊತ್ತುಪಡಿಸಿದ ದಿನದಂದು ವಿಧೇಯಕವನ್ನು ಮಂಡಿಸುವುದಕ್ಕೆ ಅನುಮತಿಗಾಗಿ ಸೂಚನೆಯನ್ನು ಮಂಡಿಸುವಂತೆ ಸಭಾಧ್ಯಕ್ಷರು ಪ್ರಭಾರದಲ್ಲಿರುವ ಸಚಿವರನ್ನು ಕರೆಯುತ್ತಾರೆ. ಸೂಚನೆಯು ಹೀಗಿರುತ್ತದೆ.

"ನಾನು............ (ವಿಧೇಯಕದ ಶೀರ್ಷಿಕೆ). ವಿಧೇಯಕವನ್ನು ಮಂಡಿಸುವುದಕ್ಕೆ ಅನುಮತಿಕೊಡುವ ಸೂಚನೆಯನ್ನು ಮಂಡಿಸಲು ಇಚ್ಛಿಸುತ್ತೇನೆ.

ತರುವಾಯ ಸಭಾಧ್ಯಕ್ಷರು ಪ್ರಶ್ನೆಯನ್ನು ಮತಕ್ಕಾಗಿ ಈ ಮುಂದಿನ ಪದಗಳಲ್ಲಿ ಸದನದ ಮುಂದೆ ಇಡುತ್ತಾರೆ. "............... ಸಚಿವರಿಗೆ ................ (ವರ್ಷ) ................... ವಿಧೇಯಕವನ್ನು

ಮಂಡಿಸುವುದಕ್ಕಾಗಿ ಅನುಮತಿ ನೀಡಬೇಕೆಂಬುದು ಪ್ರಶ್ನೆಯಾಗಿದೆ. ಪರವಾಗಿರುವವರು ಹೌದು" ಎಂದು ಹೇಳಬೇಕು, ವಿರೋಧಿಸುವವರು "ಇಲ್ಲ" ಎಂದು ಹೇಳಬೇಕು.

ಸದನದ ತೀರ್ಮಾನವೇನೆಂಬುದನ್ನು ನಿರ್ಧರಿಸಿದ ತರುವಾಯ ಸಭಾಧ್ಯಕ್ಷರು ಮೂರು ಬಾರಿ "ಹೌದು (ಇಲ್ಲ) ಎಂದವರು ಗೆದ್ದಿದ್ದಾರೆ; ಹೌದು (ಇಲ್ಲ) ಎಂದವರು ಗೆದ್ದಿದ್ದಾರೆ, ಹೌದು (ಇಲ್ಲ) ಎಂದವರು ಗೆದ್ದಿದ್ದಾರೆ" ಎಂದು ಹೇಳುತ್ತಾರೆ.

ಆಗ ಅವರು, ಸಂದರ್ಭಾನುಸಾರ "ಅನುಮತಿಯನ್ನು ನೀಡಲಾಗಿದೆ (ಅಥವಾ ನೀಡಲಾಗಿಲ್ಲ) ಎಂದು ಘೋಷಿಸುತ್ತಾರೆ. ಅನುಮತಿಯನ್ನು ನೀಡಲಾಗಿದ್ದರೆ, ಅವರು ಸಂಬಂಧಿಸಿದ ಸಚಿವರಿಗೆ ವಿಧೇಯಕವನ್ನು ಮಂಡಿಸುವಂತೆ ಕೇಳುತ್ತಾರೆ. ಸಚಿವರು ಆಗ ತಮ್ಮ ಆಸನದಲ್ಲಿ ಎದ್ದು ನಿಂತು "ನಾನು ............. ವಿಧೇಯಕವನ್ನು ಮಂಡಿಸುತ್ತೇನೆ" ಎಂದು ಹೇಳುತ್ತಾರೆ. ಅದು ದಿನ ನಿತ್ಯದ ವ್ಯವಹಾರ ಪಟ್ಟಿಯಲ್ಲಿ ಕಾಣಿಸತಕ್ಕ ನಮೂನೆಯು ಈ ಮುಂದೆ ಕೊಡಲಾದ ನಿದರ್ಶನದಂತೆ ಇರತಕ್ಕದ್ದು.

***ಶಾಸನ ರಚನಾ ಕಲಾಪಗಳು***

***ಮಂಡನೆಗಾಗಿ ವಿಧೇಯಕ***

***ಲೇಖಾನುದಾನ ವಿಧೇಯಕ,2014***

ಶ್ರೀ .................... (ಹಣಕಾಸು ಸಚಿವರು) ಲೇಖಾನುದಾನ ವಿಧೇಯಕ, 2014ನ್ನು ಮಂಡಿಸುವುದಕ್ಕಾಗಿ ಅನುಮತಿ ಕೋರುವ ಸೂಚನೆ ಪ್ರಸ್ತಾಪಿಸುವರು "ಹಾಗೂ ವಿಧೇಯಕವನ್ನು ಮಂಡಿಸುವರು". ಸೂಚನೆಯನ್ನು ಅಂಗೀಕರಿಸಿದ ಮೇಲೆ ಸಚಿವರು ವಿಧೇಯಕವನ್ನು ಮಂಡಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ.

ಸಂಪ್ರದಾಯದಂತೆ, ಅಂಥ ಸೂಚನೆಯನ್ನು ಅದು ಸದನದ ಸಕ್ಷಮತೆಯ ವ್ಯಾಪ್ತಿಯೊಳಗೆ ಇಲ್ಲವೆಂದು, ಒಬ್ಬ ಅಥವಾ ಹೆಚ್ಚು ಸದಸ್ಯರು ಅಭಿಪ್ರಾಯಪಟ್ಟ ಹೊರತು, ವಿರೋಧಿಸುವುದಿಲ್ಲ. ವಿರೋಧಿಸಿದ ಸಂದರ್ಭದಲ್ಲಿ, ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಅವರು ತಮ್ಮ ಅಭಿಪ್ರಾಯವನ್ನು ಲಿಖಿತದಲ್ಲಿ ಸದನದ ಮಹಾಕಾರ್ಯದರ್ಶಿಗೆ ತಿಳಿಸಬೇಕಾಗುತ್ತದೆ.

**ವಿಧೇಯಕದ ಎರಡನೇ ಹಂತದ ಪರಿಚಯ:**

ವಿಧೇಯಕದ ಎರಡನೇ ಹಂತದ ಪರಿಚಯವು ಎರಡು ಹಂತಗಳನ್ನು ಒಳಗೊಂಡಿರುತ್ತದೆ. ಮೊದಲ ಹಂತದಲ್ಲಿ ಈ ಮುಂದಿನ ಸೂಚನೆಗಳಲ್ಲಿ ಯಾವುದಾದರೂ ಒಂದನ್ನು ಮಂಡಿಸಬಹುದು. ಅದರ ನಂತರ 1 ವಿಧೇಯಕದ ಮುಖ್ಯಾಂಶಗಳ ಮೇಲೆ ಚರ್ಚೆ ನಡೆಯುವುದು. ಸೂಚನೆಯು ಹೀಗಿರಬಹುದು ............. (i) ಅದನ್ನು ಪರಿಗಣನೆಗಾಗಿ ತೆಗೆದುಕೊಳ್ಳಬಹುದು (ii) ಅದನ್ನು ಸದನದ ಪರಿಶೀಲನಾ ಸಮಿತಿಗೆ

ಒಪ್ಪಿಸಬಹುದು (iii) ಅದನ್ನು ಸಂಸತ್ತಿನ ಉಭಯ ಸದನಗಳ ಜಂಟಿ ಸಮಿತಿಗೆ ಒಪ್ಪಿಸಬಹುದು ಮತ್ತು (iv) ಅದನ್ನು ಸಾರ್ವಜನಿಕ ಅಭಿಪ್ರಾಯ ಪಡೆಯಲು ಪರಿಚಲಿಸಬಹುದು.

ಎರಡನೇ ಸೂಚನೆಯನ್ನು ಅಂದರೆ, “ವಿಧೇಯಕವನ್ನು ಪರಿಗಣನೆಗಾಗಿ ತೆಗೆದುಕೊಳ್ಳಬಹುದು” ಎಂಬುದನ್ನು ಮಂಡಿಸಿದ ಸಂದರ್ಭದಲ್ಲಿ ಮತ್ತು ಸದನವು ಸಮ್ಮತಿಸಿದಲ್ಲಿ, ಅದು ಸಾಮಾನ್ಯ ಮುಖ್ಯಾಂಶಗಳನ್ನು ಮತ್ತು ಉಪಬಂಧಗಳನ್ನು ಚರ್ಚಿಸಲು ಪ್ರಾರಂಭಿಸುತ್ತದೆ. ಮುಖ್ಯಾಂಶಗಳ ನಿರೂಪಣೆಗೆ ಅಗತ್ಯವಾದ ವಿವರಗಳ ಹೊರತು, ವಿಧೇಯಕದ ಇತರ ವಿವರಗಳನ್ನು ಈ ಹಂತದಲ್ಲಿ ಸಾಮಾನ್ಯವಾಗಿ ಚರ್ಚಿಸಲಾಗುವುದಿಲ್ಲ.

ಎರಡನೇ ಹಂತದ ಪರಿಚಯದ ಎರಡನೇ ಹಂತವು ಮಂಡಿಸಿದಂಥ ಅಥವಾ ಜಂಟಿ ಅಥವಾ ಪರಿಶೀಲನಾ ಸಮಿತಿಯಿಂದ ವರದಿ ಮಾಡಿದಂಥ ವಿಧೇಯಕಗಳ ಖಂಡಾನು ಖಂಡವಾದ ಪರಿಶೀಲನೆಯಾಗಿರುತ್ತದೆ. ವಿಧೇಯಕವನ್ನು ಮಂಡಿಸಿದ ನಂತರ, ತಿದ್ದುಪಡಿಯ ಸೂಚನೆಗಳನ್ನು ಯಾವುದೇ ಸಮಯದಲ್ಲಾದರೂ ಕೊಡಬಹುದು. ಆದರೆ, ಎಲ್ಲಾ ತಿದ್ದುಪಡಿಗಳನ್ನು ವಿಧೇಯಕದ ಪರಿಶೀಲನೆಗೆ ಕನಿಷ್ಠ ಒಂದು ದಿನ ಮುಂಚಿತವಾಗಿಯಾದರೂ ಕೊಡತಕ್ಕದ್ದು. ಸಭಾಧ್ಯಕ್ಷರು, ಸದನದ ಒಪ್ಪಿಗೆಯೊಂದಿಗೆ ಒಂದು ದಿನಕ್ಕಿಂತ ಕಡಿಮೆ ಅವಧಿಯ ಯಾವುದೇ ಸೂಚನೆಯನ್ನು ಬಿಟ್ಟುಬಿಡಬಹುದು. ಸ್ವೀಕಾರಾರ್ಹತೆಗೆ ತಿದ್ದುಪಡಿಯು ವಿಧೇಯಕದ ವ್ಯಾಪ್ತಿಯಲ್ಲಿ ಇರತಕ್ಕದ್ದು, ಸದನದ ಮುಂಚಿನ ತೀರ್ಮಾನಕ್ಕೆ ಸುಸಂಗತವಾಗಿರತಕ್ಕದ್ದಲ್ಲ. ಕ್ಷುಲ್ಲಕ ಅಥವಾ ಅರ್ಥಹೀನ ಅಥವಾ ವಿಷಯಕ್ಕೆ ದೂರವಾಗಿರತಕ್ಕದ್ದಲ್ಲ.

**ವಿಧೇಯಕದ ಮೂರನೇ ಹಂತದ ಪರಿಚಯ:**

ವಿಧೇಯಕವನ್ನು ಖಂಡಾನುಖಂಡವಾಗಿ ಪರಿಶೀಲನೆ ಮಾಡುವಾಗ ಮತ್ತು ಅದರ ಎಲ್ಲಾ ಅನುಸೂಚಿಗಳನ್ನು ಮತ್ತು ಇತರ ಭಾಗಗಳನ್ನು ಪರಿಶೀಲಿಸಿ ಅಂಗೀಕರಿಸಿದಾಗ, ಪ್ರಭಾರದಲ್ಲಿರುವ ಸಚಿವರು ವಿಧೇಯಕವನ್ನು ಅಂಗೀಕೃತಗೊಳಿಸುವಂತೆ ಸೂಚಿಸಬಹುದು. ಒಮ್ಮೆ ಸೂಚನೆಯನ್ನು ಮಂಡಿಸಿದ ಮೇಲೆ ಔಪಚಾರಿಕವಾದ ಮೌಖಿಕ ಅಥವಾ ನಿಷ್ಪರಿಣಾಮಕಾರಿಯಾದವುಗಳನ್ನು ಹೊರತುಪಡಿಸಿ ಯಾವುದೇ ತಿದ್ದುಪಡಿಯನ್ನು ಪರಿಗಣಿಸತಕ್ಕದ್ದಲ್ಲ. ಈ ಹಂತದಲ್ಲಿನ ಚರ್ಚೆಯು, ವಿಧೇಯಕವನ್ನು ಅದು ಇರುವಂತೆಯೇ ಅಂಗೀಕರಿಸುವುದು ಅಥವಾ ತಿರಸ್ಕರಿಸುವುದೇ ಆಗಿರತಕ್ಕದ್ದು. ಸಾಮಾನ್ಯ ವಿಧೇಯಕವನ್ನು ಅಂಗೀಕರಿಸುವಲ್ಲಿ, ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಸರಳ ಬಹುಮತ ಅವಶ್ಯಕವಾಗಿರುತ್ತದೆ. ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕಕ್ಕೆ ಸದನದ ಒಟ್ಟು ಸದಸ್ಯತ್ವದ ಬಹುಮತದ ಮತ್ತು ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ 2/3 ರಷ್ಟಕ್ಕಿಂತ ಕಡಿಮೆ ಇಲ್ಲದ ಬಹುಮತದ ಅಗತ್ಯವಿದೆ.

ವಿಧೇಯಕವು, ಎರಡನೇ ಮತ್ತು ಮೂರನೇ ಹಂತದ ಪರಿಚಯದಲ್ಲಿ ಯಾವ ನಮೂನೆಯಲ್ಲಿರತಕ್ಕದ್ದೆಂಬುದು ಈ ಮುಂದೆ ಕೊಡಲಾದ ನಿದರ್ಶನದಂತೆ ಇರತಕ್ಕದ್ದು:

***ಶಾಸನ ರಚನಾ ಕಲಾಪಗಳು:***

ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ವಿಧೇಯಕ.

ಶ್ರೀ ........................ (ಹೆಸರು) ..................... ವಿದೇಶಾಂಗ ಸಚಿವರು, 1967ರ ಪಾಸ್‌ಪೋರ್ಟ್ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕವನ್ನು ಪರಿಶೀಲನೆಗಾಗಿ ತೆಗೆದುಕೊಳ್ಳಲು ಮಂಡಿಸುತ್ತಾರೆ. ಹಾಗೂ ವಿಧೇಯಕವನ್ನು ಅಂಗೀಕರಿಸಲು ಮಂಡಿಸುತ್ತಾರೆ. ಖಾಸಗಿ ಸದಸ್ಯರ ವಿಧೇಯಕಗಳು: ಖಾಸಗಿ ಸದಸ್ಯರು ತಮ್ಮ ವಿಧೇಯಕಗಳ ಬಗ್ಗೆ ಅನುಸರಿಸಬೇಕಾದ ಸಾಮಾನ್ಯ ಕಾರ್ಯವಿಧಾನವು ಸರ್ಕಾರಿ ವಿಧೇಯಕಗಳಂತೆಯೇ ಇರುವುವು: ಇದಕ್ಕೆ ಹೊರತೆಂದರೆ;

(ಎ) ಸೂಚನೆಯ ಕಾಲಾವಧಿ ಒಂದು ತಿಂಗಳು

(ಬಿ) ಒಂದು ಅಧಿವೇಶನದಲ್ಲಿ ಯಾವೊಬ್ಬ ಸದಸ್ಯನು ನಾಲ್ಕು ವಿಧೇಯಕಗಳಿಗಿಂತ ಹೆಚ್ಚಿಗೆಯಾಗಿ ಸೂಚನೆ ನೀಡತಕ್ಕದ್ದಲ್ಲ.

(ಸಿ) ಮಂಡನೆಯ ನಂತರ ಪರಸ್ಪರ ಆದ್ಯತೆಯನ್ನು ಮತದಾನದ ಮೂಲಕ ನಿರ್ಧರಿಸಲಾಗುವುದು.

***9. ಪ್ರಸ್ತಾವಗಳು:***

ಸದನವು, ಯಾವುದೇ ವಿಷಯವನ್ನು, ಅದಕ್ಕಾಗಿ ಮಾಡಲಾದ ಪ್ರಸ್ತಾವದ ಹೊರತು ಪರಿಶೀಲಿಸತಕ್ಕದ್ದಲ್ಲ. ಸದನವು ಅದರ ಇಚ್ಛೆಯನ್ನು ಆದೇಶಗಳ ರೂಪದಲ್ಲಿ ಮತ್ತು ಅದರ ಅಭಿಪ್ರಾಯವನ್ನು ಗೊತ್ತುವಳಿಯ ರೂಪದಲ್ಲಿ ವ್ಯಕ್ತಪಡಿಸುತ್ತದೆ. ಆದರೆ ಅವೆರಡರ ಮೂಲವು ಪ್ರಸ್ತಾವದಲ್ಲಿರುತ್ತದೆ. ಪ್ರಸ್ತಾವವನ್ನು ಪರಿಶೀಲನೆಗಾಗಿ ಮತ್ತು ತೀರ್ಮಾನಕ್ಕಾಗಿ ಸದನಕ್ಕೆ ಒಪ್ಪಿಸಿದ ಪ್ರಸ್ತಾವನೆಯೆಂದು ವ್ಯಾಖ್ಯಾನಿಸಲಾಗಿದೆ. "ಪ್ರಸ್ತಾವವು ಸದನದ ಸದಸ್ಯನು, ಸದನದ ಮುಂದಿಟ್ಟ ಕೇವಲ ಅಭಿಪ್ರಾಯದ ಅಥವಾ ಇಚ್ಛೆಯ ಅಭಿವ್ಯಕ್ತಿಯಾಗಿದ್ದು, ಸದನವು ಅದನ್ನು ಅಂಗೀಕರಿಸಿದಾಗ, ಅದು ಸಮಗ್ರ ಸದನದ ಅಭಿಪ್ರಾಯ ಅಥವಾ ಇಚ್ಛೆಯಾಗುತ್ತದೆ". (ಇರಿಯೋ ಟೇಲರ್ – ಹೌಸ್ ಆಫ್ ಕಾಮನ್ಸ್, ಆಟ್‌ವರ್ಕ್ – ಎಂಬ ತನ್ನ ಪುಸ್ತಕದಲ್ಲಿ).

ಸದನದ ತೀರ್ಮಾನವು ಅಗತ್ಯವಿರುವ ವಿಷಯವನ್ನು, ಸದಸ್ಯನು ಮಾಡಿದ ಪ್ರಸ್ತಾವದ ಮೇಲೆ ಸಭಾಧ್ಯಕ್ಷರು ಮುಂದಿಟ್ಟ ಪ್ರಶ್ನೆಯ ಮೂಲಕ ತೀರ್ಮಾನಿಸಲಾಗುವುದು. ಪ್ರಸ್ತಾವದ ಮೇಲಿನ ಚರ್ಚೆಯು ಈ ಮುಂದಿನ ನಾಲ್ಕು ಹಂತಗಳನ್ನು ದಾಟಬೇಕಾಗುತ್ತದೆ.

(ಎ) ಪ್ರಸ್ತಾವವನ್ನು ಮಂಡಿಸುವುದು

(ಬಿ) ಸಭಾಧ್ಯಕ್ಷರು ಪ್ರಶ್ನೆಯನ್ನು ಪ್ರಸ್ತಾಪಿಸುವುದು

(ಸಿ) ಅನುಮತಿಸಬಹುದಾಗಿದ್ದಲ್ಲಿ ವಿಚಾರವಿನಿಮಯ ಅಥವಾ ಚರ್ಚೆ; ಮತ್ತು

(ಡಿ) ಸಭಾಧ್ಯಕ್ಷರು ಪ್ರಶ್ನೆಯನ್ನು ಮುಂದಿಟ್ಟ ನಂತರ, ತೀರ್ಮಾನಕ್ಕಾಗಿ ಮತದಾನ, ಪ್ರಶ್ನೆಯ ಮೇಲೆ

ಹೌದು ಅಥವಾ ಇಲ್ಲ ಎಂಬ ಧ್ವನಿ ಮತ ಸಂಗ್ರಹಣೆಯನ್ನು ಸಭಾಧ್ಯಕ್ಷರು ಮಾಡಿದ ಮೇಲೆ ಸದಸ್ಯನು ಮಾತನಾಡತಕ್ಕದ್ದಲ್ಲ.

ಪ್ರಸ್ತಾವಗಳು, ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ಉದ್ದೇಶಗಳಿಗಾಗಿ ಮಂಡಿಸಲಾದ ಬೇರೆ ಬೇರೆ ರೀತಿಯ ಪ್ರಸ್ತಾವಗಳಾಗಿರಬಹುದು. ಅವುಗಳನ್ನು ಸರ್ಕಾರದ ಸಚಿವರು ಅಥವಾ ಖಾಸಗಿ ಸದಸ್ಯರು ಮಂಡಿಸಬಹುದು. ಸಾಮಾನ್ಯವಾಗಿ ಹೇಳುವುದಾದರೆ, ಸರ್ಕಾರದ ಪ್ರಸ್ತಾವಗಳು, ಸರ್ಕಾರದ ನೀತಿಯನ್ನು ಅಥವಾ ಕ್ರಮವನ್ನು ಸದನವು ಅನುಮೋದಿಸಬೇಕಾದ ಸಂದರ್ಭಗಳಿಗೆ ಸೀಮಿತವಾಗಿರುತ್ತವೆ. ಸರ್ಕಾರದ ವಿಧೇಯಕವು ಸಹ ಪ್ರಸ್ತಾವಗಳ ಸರಣಿಯಲ್ಲಿ ಮುಂದುವರಿಯಬೇಕಾಗಿರುತ್ತದೆ. ಇದಕ್ಕೆ ಪ್ರತಿಯಾಗಿ ಖಾಸಗಿ ಸದಸ್ಯರ ಪ್ರಸ್ತಾವಗಳು ಸಾಮಾನ್ಯವಾಗಿ ಸಂಬಂಧಪಟ್ಟ ಪ್ರಸ್ತಾವನೆಗಳು, ವಿಧೇಯಕಗಳು ಮತ್ತು ತೀರ್ಮಾನಗಳಿಗೆ ಸಂಬಂಧಿಸಿರುತ್ತವೆ.

***ಕೆಲವು ಪ್ರಮುಖ ಪ್ರಸ್ತಾವಗಳ ಉದಾಹರಣೆಗಳು:***

ಕೆಲವು ವಿಶಿಷ್ಟ ರೀತಿಯ ಪ್ರಸ್ತಾವಗಳಿರುತ್ತವೆ. ಅವುಗಳನ್ನು ಯುವ ಸಂಸತ್ತಿನ ಸ್ಪರ್ಧೆಗಳಲ್ಲಿ ಭಾಗವಹಿಸುವ ಶಾಲೆಗಳು ತಮ್ಮ ಕಲಾಪಗಳ ಪಟ್ಟಿಯಲ್ಲಿ ಸೇರಿಸಿದರೆ, ಅವುಗಳು ಚರ್ಚೆಗೆ ವೈವಿಧ್ಯತೆಯನ್ನು ನೀಡುತ್ತವೆ.

ಈ ಮುಂದಿನವು ಈ ರೀತಿಯ ಪ್ರಸ್ತಾವಗಳಿಗೆ, ಕೆಲವು ಉದಾಹರಣೆಗಳಾಗಿರುತ್ತವೆ.

(1) ನಿಲುವಳಿ ಸೂಚನೆಗಳು
(2) ಸಚಿವ ಸಂಪುಟದಲ್ಲಿ ಅವಿಶ್ವಾಸ ಸೂಚನೆಗಳು
(3) ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿಯು ಸಂವಿಧಾನದ 87(1)ನೇ ಅನುಚ್ಛೇದದ ಮೇರೆಗೆ ಮಾಡಿದ ಭಾಷಣದ ಮೇಲಿನ ವಂದನಾ ಸೂಚನೆ.

(1) ನಿಲುವಳಿ ಸೂಚನೆಗಳು:

ಈ ರೀತಿಯ ಸೂಚನೆಗಳ ಬಗ್ಗೆ ಮೇಲಿನ 4 ರಲ್ಲಿ ಈಗಾಗಲೇ ಸುದೀರ್ಘವಾಗಿ ವಿವರಿಸಲಾಗಿದೆ.

(2) ಸಚಿವ ಸಂಪುಟದಲ್ಲಿ ಅವಿಶ್ವಾಸ ಸೂಚನೆಗಳು:

ಕೆಲವು ವೇಳೆ, ವಿರೋಧ ಪಕ್ಷದ ಸದಸ್ಯರು ಸಚಿವ ಸಂಪುಟದಲ್ಲಿನ ಅವಿಶ್ವಾಸ ಸೂಚನೆಯನ್ನು ಈ ಮುಂದಿನ ಪದಗಳಲ್ಲಿ ಮಂಡಿಸುತ್ತಾರೆ. "ಈ ಸದನವು ಸಚಿವ ಸಂಪುಟದಲ್ಲಿ ತನಗೆ ವಿಶ್ವಾಸವಿಲ್ಲದಿರುವುದನ್ನು ವ್ಯಕ್ತಪಡಿಸುತ್ತದೆ". ಇದು, ಸರ್ಕಾರದ ಸಂಪೂರ್ಣ ಕಾರ್ಯನೀತಿಯನ್ನು ಮತ್ತು ಕಾರ್ಯಪದ್ಧತಿಯನ್ನು ಟೀಕಿಸಲು ಸದಸ್ಯರಿಗೆ ವ್ಯಾಪಕ ಅವಕಾಶವನ್ನು ಒದಗಿಸುತ್ತದೆ. ಸದನದಲ್ಲಿ ಈ ಸೂಚನೆಯನ್ನು ಮಂಡಿಸುವುದಕ್ಕಾಗಿ, ಆ ದಿನದ ಉಪವೇಶನವು ಆರಂಭವಾಗುವುದಕ್ಕೆ ಮುಂಚೆ ಸದಸ್ಯರು ಪ್ರಧಾನ

ಕಾರ್ಯದರ್ಶಿಗೆ ತನ್ನ ಪ್ರಸ್ತಾವದ ಬಗ್ಗೆ ಲಿಖಿತ ನೋಟೀಸನ್ನು ಕೊಡಬೇಕಾಗುತ್ತದೆ. ಸೂಚನೆಯು ಕ್ರಮಬದ್ಧವಾಗಿದೆ ಎಂದು ಸಭಾಧ್ಯಕ್ಷರು ಅಭಿಪ್ರಾಯಪಟ್ಟರೆ, ಸದನದ ಅನುಮತಿ ಪಡೆಯುವಂತೆ ಅವರು ಸದಸ್ಯನಿಗೆ ಆದೇಶಿಸುತ್ತಾರೆ. ಸದಸ್ಯ ಆಗ ಈ ಮುಂದಿನ ಪ್ರಸ್ತಾವವನ್ನು ಮಂಡಿಸುತ್ತಾನೆ. "ಅವಿಶ್ವಾಸ ಸೂಚನೆಯನ್ನು ಮಂಡಿಸಲು ನಾನು ಸದನದ ಅನುಮತಿಯನ್ನು ಕೋರುತ್ತೇನೆ". ಸಭಾಧ್ಯಕ್ಷರು ಸದನಕ್ಕೆ ಪ್ರಸ್ತಾವವನ್ನು ಓದಿಹೇಳುತ್ತಾರೆ. ಮತ್ತು ಅನುಮತಿ ನೀಡಲು ಪರವಾಗಿರುವ ಸದಸ್ಯರು ತಮ್ಮ ಸ್ಥಾನದಲ್ಲಿ ಎದ್ದು ನಿಲ್ಲುವಂತೆ ಕೋರುತ್ತಾರೆ. ಸದನದ ಒಟ್ಟು ಸದಸ್ಯರ ಶೇಕಡಾ ಹತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಎದ್ದು ನಿಂತರೆ, ಸದನದಿಂದ ಅನುಮತಿ ನೀಡಲಾಗುವುದು. ಆದರೆ, ಶೇಕಡಾ ಹತ್ತಕ್ಕಿಂತ ಕಡಿಮೆ ಸದಸ್ಯರು ಎದ್ದು ನಿಂತ ಸಂದರ್ಭದಲ್ಲಿ ಸದನದಿಂದ ಅನುಮತಿ ನೀಡಲಾಗುವುದಿಲ್ಲ. ಅವಿಶ್ವಾಸ ಸೂಚನೆಯನ್ನು ಚರ್ಚೆಗಾಗಿ ತೆಗೆದುಕೊಳ್ಳಲಾಗುವುದಿಲ್ಲ.

ಆದರೆ, ಅವಿಶ್ವಾಸ ಸೂಚನೆಯನ್ನು ಮಂಡಿಸುವುದಕ್ಕಾಗಿ ಅನುಮತಿ ನೀಡಿದಲ್ಲಿ, ಅದನ್ನು ಚರ್ಚೆಗಾಗಿ ಯಾವ ಸಮಯದಲ್ಲಿ ತೆಗೆದುಕೊಳ್ಳಲಾಗುವುದೆಂದು ಸಭಾಧ್ಯಕ್ಷರು ಪ್ರಕಟಿಸುತ್ತಾರೆ. ಗೊತ್ತುಪಡಿಸಿದ ವೇಳೆಯಲ್ಲಿ ಸಭಾಧ್ಯಕ್ಷರು ಸದಸ್ಯನನ್ನು ಕರೆಯುತ್ತಾರೆ. ಅವನು ಸೂಚನೆಯನ್ನು ಈ ಮುಂದಿನ ಪದಗಳಲ್ಲಿ ಮಂಡಿಸುತ್ತಾನೆ.

"ಈ ಸದನವು ಸಚಿವ ಸಂಪುಟದಲ್ಲಿ ತನಗೆ ವಿಶ್ವಾಸವಿಲ್ಲದಿರುವುದನ್ನು ವ್ಯಕ್ತಪಡಿಸುತ್ತದೆ".

ಪ್ರಸ್ತಾವವನ್ನು ಮಂಡಿಸಿದ ನಂತರ, ಪ್ರಸ್ತಾವಿಸಿದ ಸದಸ್ಯನು ಚಿಕ್ಕ ಭಷಣವನ್ನು ಮಾಡುತ್ತಾನೆ. ಅದನ್ನು ಮುಂದುವರಿಸಿ, ವಿರೋಧಪಕ್ಷಕ್ಕೆ ಹಾಗೂ ಆಳುವ ಪಕ್ಷಕ್ಕೆ ಸೇರಿದ ಸದನದ ಇತರ ಸದಸ್ಯರು ಮಾತನಾಡುತ್ತಾರೆ. ಅವಿಶ್ವಾಸ ಸೂಚನೆಯ ಮೇಲಿನ ಚರ್ಚೆಯು ಯಾವುದೇ ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗಿರುವುದಿಲ್ಲ. ಚರ್ಚೆಯ ಸಮಯದಲ್ಲಿ ಯಾರೇ ಸದಸ್ಯನು ಯಾವುದೇ ವಿಷಯವನ್ನು ಪ್ರಸ್ತಾಪಿಸಬಹುದು ಅಥವಾ ಸರ್ಕಾರದ ಯಾವುದೇ ನೀತಿಯ ಅಥವಾ ಕ್ರಮದ ಬಗ್ಗೆ ಟೀಕಿಸಬಹುದು. ಆಳುವ ಪಕ್ಷದ ಹಾಗೂ ವಿರೋಧ ಪಕ್ಷಗಳ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುತ್ತಾರೆ.

ಅವಿಶ್ವಾಸ ಸೂಚನೆಯ ಮೇಲೆ ಸದಸ್ಯರು ಮಾತನಾಡಿದ ನಂತರ ಪ್ರಧಾನ ಮಂತ್ರಿಗಳು ತನ್ನ ಸರ್ಕಾರದ ವಿರುದ್ಧ ಮಾಡಲಾದ ಆರೋಪಗಳಿಗೆ ಉತ್ತರ ನೀಡುತ್ತಾರೆ. ಆ ನಂತರ ಅವಿಶ್ವಾಸ ಸೂಚನೆಯನ್ನು ಮಂಡಿಸಿದವನಿಗೆ ಪ್ರತ್ಯುತ್ತರ ನೀಡಲು ಅವಕಾಶ ಕೊಡಲಾಗುತ್ತದೆ. ಸಭಾಧ್ಯಕ್ಷರು ಆಗ ಅವಿಶ್ವಾಸ ಸೂಚನೆಯನ್ನು ಸದನದ ಮುಂದೆ ಇಡುತ್ತಾರೆ ಮತ್ತು ಸದನದ ತೀರ್ಮಾನವನ್ನು ಧ್ವನಿ ಮತದ ಮೂಲಕ ಪಡೆಯುತ್ತಾರೆ.

(3) ರಾಷ್ಟ್ರಪತಿಯವರ ಭಾಷಣದ ಮೇಲೆ ವಂದನಾ ಸೂಚನೆ:

ಇದು, ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಯವರು, ಸಂವಿಧಾನದ ಅನುಚ್ಛೇದ 87(1)ರ ಮೇರೆಗೆ ಮಾಡಿದ ಭಾಷಣಕ್ಕೆ ಕೃತಜ್ಞತೆ ಅರ್ಪಿಸುವ ಔಪಚಾರಿಕ

ಪ್ರಸ್ತಾವವಾಗಿರುತ್ತದೆ. ಭಾಷಣದಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು ಕುರಿತು ಚರ್ಚಿಸಲು ಇದು ಅವಕಾಶ ಒದಗಿಸುತ್ತದೆ. ಇದನ್ನು ಆಳುವ ಪಕ್ಷದ ಹಿರಿಯ ಸದಸ್ಯನು, ಈ ಮುಂದಿನ ರೂಪದಲ್ಲಿ ಮಂಡಿಸುತ್ತಾನೆ:

"ಈ ಮುಂದಿನಂತೆ ರಾಷ್ಟ್ರಪತಿಯವರಿಗೆ ವಂದನಾರ್ಪಣೆ ಮಾಡಬಹುದು.

ಈ ಅಧಿವೇಶನದಲ್ಲಿ ಸೇರಿರುವ ಯುವ ಸಂಸತ್ತಿನ ಸದಸ್ಯರು, ರಾಷ್ಟ್ರಪತಿಯವರು ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ............. (ದಿನಾಂಕ) ................ ರಂದು ಮಾಡಿದ ಭಾಷಣಕ್ಕೆ ತುಂಬಾ ಕೃತಜ್ಞರಾಗಿರುತ್ತಾರೆ."

ಆಳುವ ಪಕ್ಷದ ಇನ್ನೊಬ್ಬ ಸದಸ್ಯನು ಸೂಚನೆಯನ್ನು ಅನುಮೋದಿಸುತ್ತಾನೆ.

ಸಂವಿಧಾನದ 87(1)ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯವರು ಸದನದಲ್ಲಿ ಮಾಡಿದ ಭಾಷಣದಲ್ಲಿ ಉಲ್ಲೇಖಿಸಿದ ವಿಷಯಗಳ ಕುರಿತು ಚರ್ಚೆಗೆ ಸಮಯವನ್ನು ಸದನದ ನಾಯಕನೊಂದಿಗೆ ಸಮಾಲೋಚಿಸಿ ಸಭಾಧ್ಯಕ್ಷರು ನಿಗದಿಪಡಿಸುತ್ತಾನೆ. ಅಂಥ ದಿನ, ಭಾಷಣದಲ್ಲಿ ಉಲ್ಲೇಖಿಸಿದ ವಿಷಯಗಳನ್ನು ಒಬ್ಬ ಸದಸ್ಯನು ಮಂಡಿಸಿದ ಮತ್ತು ಮೇಲೆ ಹೇಳಿದಂತೆ ಇನ್ನೊಬ್ಬ ಸದಸ್ಯನು ಅನುಮೋದಿಸಿದ ವಂದನಾ ಸೂಚನೆಯ ಮೇಲೆ ಚರ್ಚಿಸಲು ಸದನಕ್ಕೆ ಸ್ವಾತಂತ್ರ್ಯವಿರುತ್ತದೆ.

*10. ನಿರ್ಣಯಗಳು:*

ನಿರ್ಣಯಗಳು ಅಭಿಪ್ರಾಯದ ಅಥವಾ ಶಿಫಾರಸ್ಸಿನ ಸ್ವರೂಪದಲ್ಲಿ ಇರಬಹುದು ಅಥವಾ ಸರ್ಕಾರದ ಕ್ರಮವನ್ನು ಅಥವಾ ನೀತಿಯನ್ನು ಸದನವು ಅನುಮೋದಿಸುವುದನ್ನು ಅಥವಾ ಅನುಮೋದಿಸದಿರುವುದನ್ನು ಅಭಿಲೇಖಿಸುವ ಸ್ವರೂಪದಲ್ಲಿ ಇರಬಹುದು ಅಥವಾ ಸರ್ಕಾರದ ಪರಿಶೀಲನೆಗಾಗಿ ಒಂದು ವಿಷಯದ ಅಥವಾ ಪರಿಸ್ಥಿತಿಯ ಬಗ್ಗೆ ಸಂದೇಶವನ್ನು ತಿಳಿಸುವ ಅಥವಾ ತಿದ್ದುಪಡಿ ಮಾಡುವ, ಒತ್ತಾಯಿಸುವ ಅಥವಾ ಕೋರುವ ಅಥವಾ ಗಮನ ಸೆಳೆಯುವ ರೂಪದಲ್ಲಿರಬಹುದು. ತದನುಸಾರವಾಗಿ ಒಂದು ನಿರ್ಣಯವು ಅಂಗೀಕಾರಾರ್ಹವಾಗಿರಬೇಕಾದರೆ, ಅದು ಈ ಮುಂದಿನ ಷರತ್ತುಗಳನ್ನು ಪೂರೈಸತಕ್ಕದ್ದು:

(i) ಅದನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ವ್ಯಕ್ತಪಡಿಸಿರಬೇಕು.

(ii) ಅದು ಒಂದು ನಿರ್ದಿಷ್ಟ ವಿಷಯವನ್ನು ಗಣನಾರ್ಹವಾಗಿ ಪ್ರತಿಪಾದಿಸಬೇಕು.

(iii) ಅದು ವಾದಗಳನ್ನು, ಊಹೆಗಳನ್ನು, ವ್ಯಂಗ್ಯವಾದ ಅಭಿವ್ಯಕ್ತಿಗಳನ್ನು, ಆರೋಪಣೆಗಳನ್ನು ಅಥವಾ ಮಾನಹಾನಿಗೆ ಎಡೆಕೊಡುವ ಹೇಳಿಕೆಗಳನ್ನು ಒಳಗೊಂಡಿರಬಾರದು.

(iv) ಅದು ವ್ಯಕ್ತಿಗಳ ಸರ್ಕಾರಿ ಅಥವಾ ಸಾರ್ವಜನಿಕ ಸ್ಥಾನದ ಹೊರತು, ಅವರ ಚಾರಿತ್ರ್ಯ ಅಥವಾ ನಡತೆಗೆ ಉಲ್ಲೇಖವಾಗಿರಕೂಡದು.

(v) ಅದು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯಿರುವ ಯಾವುದೇ ನ್ಯಾಯಾಲಯದಲ್ಲಿ ನ್ಯಾಯ ನಿರ್ಣಯದಲ್ಲಿರುವ ವಿಷಯಕ್ಕೆ ಸಂಬಂಧಿಸಿರ ಕೂಡದು.

ಕಲಾಪಗಳ ಪಟ್ಟಿಯಲ್ಲಿ ನಿರ್ಣಯವು ಯಾರ ಹೆಸರಿನಲ್ಲಿದೆಯೋ ಆ ಸದಸ್ಯನು ಅದನ್ನು ಹಿಂದಕ್ಕೆ ತೆಗೆದುಕೊಳ್ಳಲು ಇಚ್ಛಿಸಿದ ಹೊರತು ಅವನನ್ನು ಕರೆದಾಗ ನಿರ್ಣಯವನ್ನು ಮಂಡಿಸತಕ್ಕದ್ದು ಮತ್ತು ಅದು ವ್ಯವಹಾರ ಪಟ್ಟಿಯಲ್ಲಿ ಪ್ರಕಟವಾಗತಕ್ಕದ್ದು.

ನಿರ್ಣಯವನ್ನು ಮಂಡಿಸಿದ ನಂತರ ಯಾರೇ ಸದಸ್ಯನು, ನಿರ್ಣಯಗಳಿಗೆ ಸಂಬಂಧಿಸಿದ ನಿಯಮಗಳಿಗೆ ಒಳಪಟ್ಟು ನಿರ್ಣಯಕ್ಕೆ ತಿದ್ದುಪಡಿಯನ್ನು ಮಂಡಿಸಬಹುದು.

ಸದಸ್ಯನು ನಿರ್ಣಯವನ್ನು ಮಂಡಿಸಿದ ನಂತರ, ಇತರ ಸದಸ್ಯರು ವಿರೋಧ ಪಕ್ಷದಿಂದ ಹಾಗೂ ಆಳುವ ಪಕ್ಷದಿಂದ, ಸಭಾಧ್ಯಕ್ಷರು ಅವರನ್ನು ನಿರ್ಣಯದ ವಿಷಯದ ಮೇಲೆ ಮಾತನಾಡಲು ಕರೆದಾಗ, ಒಬ್ಬರ ನಂತರ ಒಬ್ಬರು ಮಾತನಾಡತಕ್ಕದ್ದು. ಆನಂತರ ಸಂಬಂಧಿಸಿದ ಸಚಿವರು ಚರ್ಚೆಯಲ್ಲಿ ಭಾಗವಹಿಸುವರು ಕೊನೆಯಲ್ಲಿ ನಿರ್ಣಯವನ್ನು ಮಂಡಿಸಿದವನು ಉತ್ತರಿಸುತ್ತಾನೆ.

ನಿರ್ಣಯವನ್ನು ಮಂಡಿಸಿದವನು ತಾನು ಉತ್ತರಿಸುವ ಅವಧಿಯಲ್ಲಿ ನಿರ್ಣಯದ ಮೇಲೆ ತೀರ್ಮಾನಕ್ಕಾಗಿ ಒತ್ತಾಯಿಸಿದ ಸಂದರ್ಭದಲ್ಲಿ ಸಭಾಧ್ಯಕ್ಷರು ಸದನದ ತೀರ್ಮಾನವನ್ನು ಧ್ವನಿ ಮತದ ಮೂಲಕ ಪಡೆಯುವರು.

ಕಾರ್ಯಾಂಗಕ್ಕೆ ಪ್ರತ್ಯಾಯೋಜಿಸಿದ ಅಧಿಕಾರಗಳ ಮೇರೆಗೆ ಮಾಡಲಾದ ಯಾವುದೇ ನಿಯಮಗಳ ಅಥವಾ ಅಧಿಸೂಚನೆಗಳನ್ನು ಒಂದು ನಿರ್ದಿಷ್ಟ ಅವಧಿಯೊಳಗೆ ಸಂಸತ್ತಿನ ನಿರ್ಣಯದ ಮೂಲಕ ಅನುಮೋದಿಸಬೇಕೆಂದು ಕೆಲವು ಶಾಸನಗಳು ಉಪಬಂಧಿಸುತ್ತವೆ ಮತ್ತು ಅಂಥ ನಿಯಮಗಳು ನಿರ್ಣಯಗಳಲ್ಲಿ ನಿರ್ದೇಶಿಸಿದಂಥ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗಿರುತ್ತವೆ ಅಥವಾ ಪರಿಣಾಮಕಾರಿಯಾಗಿರುವುದು ನಿಂತು ಹೋಗುತ್ತವೆ.

ಸಾಮಾನ್ಯವಾಗಿ ಈ ಮುಂದಿನ ಮಾದರಿಯ ನಿರ್ಣಯಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ ಮತ್ತು ಅಂಗೀಕರಿಸಲಾಗುತ್ತದೆ.

1. ಅಧಿಸೂಚನೆಯ ಅನುಮೋದನೆಗಾಗಿ ಕೋರುವ ನಿರ್ಣಯ.

2. ತುರ್ತು ಪರಿಸ್ಥಿತಿಯನ್ನು ಉದ್ಘೋಷಿಸುವುದಕ್ಕೆ ಅನುಮೋದನೆ ಕೋರುವ ನಿರ್ಣಯ.

3. ಆಕ್ರಮಣಕಾರರನ್ನು ಹೊರತಳ್ಳಲು ಭಾರತೀಯರ ದೃಢ ಸಂಕಲ್ಪಕ್ಕೆ ಸಂಬಂಧಪಟ್ಟಂತೆ ನಿರ್ಣಯ.

4. "ರಾಜ್ಯ ಪಟ್ಟಿ"ಯ ಅಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಪಟ್ಟಂತೆ ಕಾನೂನುಗಳನ್ನು ಮಾಡುವ ಸಂಸತ್ತಿನ ಅಧಿಕಾರಕ್ಕೆ ಸಂಬಂಧಿಸಿದ ನಿರ್ಣಯ.

5. ಕೆಲವು ಹೊಸ ಅಖಿಲ ಭಾರತ ಸೇವೆಗಳ ಸೃಜನೆಗೆ ಸಂಬಂಧಪಟ್ಟ ನಿರ್ಣಯ.

6. ಪಂಚವಾರ್ಷಿಕ ಯೋಜನೆಗೆ ಅನುಮೋದನೆ ಕೋರುವ ನಿರ್ಣಯ.

7. ರಾಜ್ಯದ ಎಲ್ಲಾ ಪ್ರಕಾರ್ಯಗಳನ್ನು ಸ್ವತಃ ತಾವೇ ಹೊಂದಲು 356ನೇ ಅನುಚ್ಛೇದದ ಅಡಿ ರಾಷ್ಟ್ರಪತಿಯವರು ಹೊರಡಿಸುವ ಘೋಷಣೆಗೆ ಸಂಬಂಧಪಟ್ಟ ನಿರ್ಣಯ.

8. ಈ ಮುಂಚಿನ ಉದ್ಘೋಷಣೆಯನ್ನು ವ್ಯತ್ಯಾಸಗೊಳಿಸುವ ಒಂದು ಉದ್ಘೋಷಣೆಯ ಅನುಮೋದನೆಗೆ ಸಂಬಂಧಪಟ್ಟ ನಿರ್ಣಯ.

***ನಿಯಮ 193ರ ಅಡಿ ಅಲ್ಪಾವಧಿ ಚರ್ಚೆ:***

ಲೋಕಸಭಾ ನಿಯಮಗಳ 193ನೇ ನಿಯಮದಡಿ ಅಲ್ಪಾವಧಿ ಚರ್ಚೆಯನ್ನು ನಡೆಸಲು ಸಂಬಂಧಪಟ್ಟ ನಿಯಮದಂತೆ, ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯದ ಮೇಲೆ ಚರ್ಚೆ ಮಾಡಲು ಇಚ್ಛಿಸುವ ಯಾವೊಬ್ಬ ಸದಸ್ಯನು, ಆ ವಿಷಯದ ಬಗ್ಗೆ ಸ್ಪಷ್ಟ ಮತ್ತು ಖಚಿತವಾಗಿ ನಿದಿಷ್ಟಪಡಿಸಿ ಲಿಖಿತದಲ್ಲಿ ನೋಟೀಸನ್ನು ಪ್ರಧಾನ ಕಾರ್ಯದರ್ಶಿಯವರಿಗೆ ನೀಡಬಹುದು. ಕನಿಷ್ಟ ಇಬ್ಬರು ಇತರ ಸದಸ್ಯರ ಸಹಿ ಮಾಡಿರುವ ಅಂಥ ನೋಟೀಸನ್ನು ಅದರೊಂದಿಗೆ ಪ್ರಶ್ನಿತ ವಿಷಯದ ಮೇಲೆ ಚರ್ಚೆ ನಡೆಸಲು ಕಾರಣಗಳನ್ನು ತೋರಿಸುವ ವಿವರವಾದ ಟಿಪ್ಪಣಿಯೊಂದನ್ನು ಒಳಗೊಂಡಿರತಕ್ಕದ್ದು.

ಸಭಾಧ್ಯಕ್ಷರು, ಕಲಾಪಗಳ ಪಟ್ಟಿಯಲ್ಲಿ ಈ ಬಾಬಿನ ಅಡಿಯಲ್ಲಿರುವ ಮೊದಲ ಸದಸ್ಯನ ಹೆಸರನ್ನು ಕರೆದಾಗ, ಅವನು ಚರ್ಚೆಯ ವಸ್ತು ವಿಷಯದ ಮೇಲೆ ಒಂದು ಸಂಕ್ಷಿಪ್ತ ಭಾಷಣವನ್ನು ಮಾಡತಕ್ಕದ್ದು. ನಂತರ ಈ ಬಾಬಿನ ಅಡಿಯಲ್ಲಿ ಯಾರ ಹೆಸರುಗಳನ್ನು ಸೂಚಿಸಲಾಗಿದೆಯೋ ಅವರನ್ನು ಅಥವಾ ಇತರ

ಸದಸ್ಯರನ್ನು ಮಾತನಾಡುವಂತೆ ಸಭಾಧ್ಯಕ್ಷರು ಕರೆಯಬಹುದು. ಆಗ ಅವರು, ಸಂಕ್ಷಿಪ್ತವಾಗಿ ಮಾತನಾಡತಕ್ಕದ್ದು. ಕೊನೆಯದಾಗಿ ಸಂಬಂಧಪಟ್ಟ ಸಚಿವರು ಚರ್ಚೆಗೆ ಉತ್ತರಿಸುತ್ತಾರೆ.

ಪ್ರಸ್ತಾವವನ್ನು ಮಂಡಿಸಿದವನಿಗೆ ಉತ್ತರಿಸಲು ಅಧಿಕಾರವಿರುವುದಿಲ್ಲ. ಇದು ವಿಧ್ಯುಕ್ತ ಪ್ರಸ್ತಾವವಾಗಿ ಇರುವುದಿಲ್ಲ. ಹಾಗೂ ಅದನ್ನು ಸದನದ ಮತಕ್ಕೆ ಹಾಕಲಾಗುವುದಿಲ್ಲ.

ಕಲಾಪಗಳ ಪಟ್ಟಿಯಲ್ಲಿ ಅದನ್ನು ಸೇರಿಸುವ ಕ್ರಮವನ್ನು ಈ ಮುಂದೆ ಸೂಚಿಸಲಾಗಿದೆ:-

193ನೇ ನಿಯಮದ ಅಡಿ ಅಲ್ಪಾವಧಿ ಚರ್ಚೆ ಅಥವಾ 193ನೇ ನಿಯಮದ ಅಡಿ ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳ ಮೇಲೆ ಚರ್ಚೆ.

1. ಶ್ರೀ ........................
2. ಶ್ರೀ ........................
3. ಶ್ರೀ ........................

..................... ಈ ವಿಷಯದ ಮೇಲೆ ಚರ್ಚೆಯನ್ನು ನಡೆಸುವುದು.

ಮೇಲೆ ಹೇಳಿದ ನಿಯಮದ ಅಡಿ ಲೋಕಸಭೆಯಲ್ಲಿ ಚರ್ಚೆಯನ್ನು ನಡೆಸಲಾಗಿರುವ ಕೆಲವು ವಿಷಯಗಳನ್ನು ಈ ಮುಂದೆ ಸೂಚಿಸಲಾಗಿದೆ:-

1. ಬಜೆಟ್ ಮಂಡನೆಗೆ ಮೊದಲು ಪೆಟ್ರೋಲಿಯಂ, ಕಲ್ಲಿದ್ದಲು, ಅಂಚೆ ವಸ್ತುಗಳ ಆಡಳಿತ ಬೆಲೆಯನ್ನು ಹೆಚ್ಚಿಸಿರುವುದು;

2. ಅತ್ಯಾವಶ್ಯಕ ವಸ್ತುಗಳ ಬೆಲೆಯಲ್ಲಿ ಏರಿಕೆ ಅಥವಾ ಬೆಲೆ ಹೆಚ್ಚಳ;

3. ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ;

4. ದೇಶದಲ್ಲಿ ಮಹಿಳೆಯರ ಮೇಲೆ ನಡೆಸಲಾಗುತ್ತಿರುವ ದೌರ್ಜನ್ಯಗಳ ಪ್ರಕರಣದಲ್ಲಿನ ಹೆಚ್ಚಳ;

5. 23.3.1988 ರಂದು ಜಬ್ಬಲ್‌ಪುರದ ಕೇಂದ್ರ ಆಯುಧ ಡಿಪೋದಲ್ಲಿ ಉಂಟಾದ ಬೆಂಕಿ ಅಪಘಾತದ ಕಾರಣದಿಂದಾಗಿ ಉಂಟಾದ ಅಪಾರ ಪ್ರಮಾಣದ ಮದ್ದುಗುಂಡುಗಳ ಹಾನಿಯ ಬಗ್ಗೆ ಮತ್ತು ಅಂಥ ತಪ್ಪುಗಳು ಪುನಃ ನಡೆಯದಂತೆ ತಡೆಯಲು ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ.
6. ಪಶ್ಚಿಮ ದಂಡೆ ಮತ್ತು ಗಾಜಾ ಸ್ಟ್ರಿಪ್‌ಗಳ ಆಕ್ರಮಿತ ಅರಬ್ ಪ್ರದೇಶಗಳಲ್ಲಿ ಇಸ್‌ರೇಲ್ ಸೈನ್ಯದಿಂದ ಪ್ಯಾಲೆಸ್ಟೆನ್ ಜನತೆಯ ಅಮಾನುಷ ದಮನ.

## *ಯುವ ಸಂಸತ್ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಮಾಡಬೇಕಾದ ಮತ್ತು ಮಾಡಬಾರದ ಕಾರ್ಯಗಳು*

1. ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳು, ಈ ಯೋಜನೆಯು ಒಂದು ಅಪೂರ್ವ ಯೋಜನೆಯೆಂಬುದನ್ನು ತಿಳಿಯತಕ್ಕದ್ದು. ಸಂಸತ್ ಸದಸ್ಯರಿಗೆ ಈ ಯುವ ಸಂಸತ್ತು ಭಾವೀ ಪ್ರಾಥಮಿಕ ಹಂತದ ಶಿಕ್ಷಣ ನೀಡುವ ಗುರಿ ಹೊಂದಿದೆ. ಇದನ್ನು ಸರಿಯಾಗಿ ಕಾರ್ಯರೂಪಕ್ಕೆ ತಂದರೆ ಮತ್ತು ಇದರ ಸಂಘಟಕರು ಕರ್ತವ್ಯ ಮತ್ತು ಸಮರ್ಪಣಾ ಮನೋಭಾವವನ್ನು ಹೊಂದಿದ್ದರೆ, ಇದು ನಮ್ಮ ರಾಷ್ಟ್ರೀಯ ಚಾರಿತ್ರ್ಯ ಮತ್ತು ದೃಷ್ಟಿಕೋನದ ಸರ್ವತೋಮುಖ ಬೆಳವಣಿಗೆ ಸಾಧಿಸುವಲ್ಲಿ ಅತ್ಯಂತ ಪರಿಣಾಮಕಾರಿ ಸಾಧನವಾಗಬಹುದು. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಂಸ್ಥೆಗಳು ಮುಂದೆ ಬರುವಾಗ ಈ ಅಂಶವನ್ನು ಯಾವಾಗಲೂ ಗಮನದಲ್ಲಿಟ್ಟಿರಬೇಕು.

2. ಸಮಾಜದ ಒಟ್ಟಾರೆ ಒಳಿತಿಗಾಗಿ ಏನು ಮಾಡಬೇಕು ಎನ್ನುವ ಒಂದು ಸ್ವಯಂಪ್ರೇರಿತ ಒಪ್ಪಂದಕ್ಕೆ ಬರುವ ಪ್ರಯತ್ನದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಚರ್ಚೆಗೂ ಮತ್ತು ವಿಚಾರವಿನಿಮಯದ ಮೂಲಕ ಭಾಗವಹಿಸುವ ಅವಕಾಶವನ್ನು ಪ್ರಜಾಪ್ರಭುತ್ವವು ರಾಜಕೀಯ ಪದ್ಧತಿಯ ಮೂಲಕ ಒದಗಿಸುತ್ತದೆ ಎಂಬುದನ್ನು ಮರೆಯಕೂಡದು.

ಇದು ಸಾಮಾಜಿಕ ಕಾರ್ಯ ನೀತಿಯ ಬಗ್ಗೆ ಬೀದಿಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಪದ್ಧತಿಗೆ ಅವಕಾಶಕೊಡುವುದಿಲ್ಲ. ಏಕೆಂದರೆ, ಇವುಗಳು ಜನಜಂಗುಳಿ ಪ್ರಭುತ್ವದ ಮಾರ್ಗಗಳೇ ಹೊರತು ಪ್ರಜಾಪ್ರಭುತ್ವದವುಗಳಲ್ಲ. ಆದ್ದರಿಂದ ಯುವ ಸಂಸತ್ತಿನ ಯೋಜನೆಯು, ಮಕ್ಕಳು ತಮ್ಮ ಕಾರ್ಯಕ್ಷಮತೆಯನ್ನು ಆರೋಗ್ಯಕರ ಮತ್ತು ರಚನಾತ್ಮಕ ಚಟುವಟಿಕೆಗಳಿಗಾಗಿ ಕೇಂದ್ರೀಕರಿಸುವ ಆಂದೋಲನವನ್ನು ಪ್ರಾರಂಭಿಸಲು ಸಹಾಯವಾಗುತ್ತದೆ. ಇದರಿಂದ ಅವರು ನಾಳಿನ ಉಪಯುಕ್ತ ನಾಗರಿಕರಾಗಬಹುದು.

3. ಈ ಸಂಸತ್ತುಗಳಲ್ಲಿ ಸಾಧ್ಯವಾದಷ್ಟು ವಿವಾದಾತ್ಮಕವಲ್ಲದ ವಿಷಯಗಳನ್ನು ಚರ್ಚೆಗಾಗಿ ಆಯ್ಕೆ ಮಾಡಬೇಕು. ಅವು ಶಾಲೆಗಳು ಬಹುಮಟ್ಟಿಗೆ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ದಿನನಿತ್ಯದ ಸಮಸ್ಯೆಗಳಾಗಿರತಕ್ಕದ್ದು. ವಿಷಯವು ಕಲ್ಯಾಣ ಚಟುವಟಿಕೆಗಳು, ದೇಶದ ರಕ್ಷಣೆ, ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಸುಧಾರಣೆ, ಆರ್ಥಿಕ ಅಭಿವೃದ್ಧಿ, ಮತೀಯ ಸೌಹಾರ್ದತೆ, ವಿದ್ಯಾರ್ಥಿಗಳ ಶಿಸ್ತು ಮತ್ತು ಆರೋಗ್ಯ ಇವುಗಳಿಗೆ ಸಂಬಂಧಿಸಿದ್ದಕ್ಕಾಗಿರಬೇಕು.

4. ಯುವ ಸಂಸತ್ತಿನ ಕಲಾಪಗಳ ಪಟ್ಟಿಯ ಎರಡು ಅತ್ಯಂತ ಪ್ರಮುಖ ಭಾಗಗಳೆಂದರೆ, ಪ್ರಶ್ನೆಗಳು ಮತ್ತು ಚರ್ಚೆ ಅಥವಾ ವಿಚಾರವಿನಿಮಯ. ಪ್ರಶ್ನೆ ವೇಳೆಯಲ್ಲಿ ನ್ಯಾಯಾಧೀಶರು ಕೇಳುವ ಪ್ರಶ್ನೆಗಳ ಗುಣಮಟ್ಟ ಮತ್ತು ಸಚಿವರು ನೀಡುವ ಉತ್ತರಗಳ ಗುಣಮಟ್ಟ ಇವುಗಳಿಂದ ಪ್ರಭಾವಿತರಾಗುವ ಸಂಭವವಿದೆ. ಚರ್ಚೆ

ಅಥವಾ ವಿಚಾರ ವಿನಿಮಯದ ಸಂದರ್ಭದಲ್ಲಿ ಅವರು ವಿಶೇಷವಾಗಿ ಚರ್ಚೆಯ ಗುಣಮಟ್ಟ ಮತ್ತು ಅಭಿವ್ಯಕ್ತಿಯ ಗುಣಲಕ್ಷಣ – ಇವುಗಳನ್ನು ಗಮನಿಸುತ್ತಾರೆ.

5. ಭಾಗವಹಿಸುವವರು ದೇಶದಲ್ಲಿ ಈಗಿರುವ ರಾಜಕೀಯ ಪಕ್ಷಗಳ ಮತ್ತು ರಾಜಕೀಯ ವ್ಯಕ್ತಿಗಳ ಹೆಸರುಗಳನ್ನು ಹೇಳುವುದನ್ನು ಕಟ್ಟುನಿಟ್ಟಾಗಿ ಬಿಡಬೇಕು. ಅವರು ತಮ್ಮ ಪಕ್ಷಗಳಿಗೆ ಮತ್ತು ವ್ಯಕ್ತಿಗಳಿಗೆ ಕಾಲ್ಪನಿಕ ಅಥವಾ ಊಹಾತ್ಮಕ ಹೆಸರುಗಳನ್ನು ಕೊಡಬೇಕು. ಅವರು ಯಾವುದೇ ರಾಜಕೀಯ ಪಕ್ಷಕ್ಕೆ ಅಥವಾ ತತ್ವಕ್ಕೆ ತಮ್ಮ ಒಲವು ಅಥವಾ ಪಕ್ಷಪಾತ ಇದೆ ಎಂಬ ಯಾವುದೇ ಭಾವನೆಯನ್ನುಂಟು ಮಾಡತಕ್ಕದ್ದಲ್ಲ.

6. ಭಾಗವಹಿಸುವ ಸಂಸ್ಥೆಗಳ ಹಿತದೃಷ್ಟಿಯಿಂದ ಅವುಗಳು ತಮ್ಮ ಸ್ವಂತದ "ಶಾಶ್ವತ ಸಂಸತ್ತುಗಳನ್ನು" ಹೊಂದಿರುವುದು ಒಳ್ಳೆಯದು, ಅವು "ಚರ್ಚಾಕೂಟವು" ಸಂಘಗಳಾಗಿ ಕಾರ್ಯನಿರ್ವಹಿಸಲು ಅಥವಾ ತಮ್ಮ ವಿದ್ಯಾರ್ಥಿಗಳಲ್ಲಿನ ಚರ್ಚಾ ಪ್ರತಿಭೆಯನ್ನು ಬಳಸಲು ನೆರವಾಗುತ್ತವೆ. ಭಾಗವಹಿಸುವುದಕ್ಕಾಗಿ ಹೆಸರುಗಳನ್ನು ಆಯ್ಕೆ ಮಾಡುವ ಸಮಯದಲ್ಲಿ ಅವರು ಈ "ಸಂಸದೀಯರ" ಪ್ರತಿಭೆಯನ್ನು ಗುರುತಿಸಬಹುದು.

7. ಭಾಗವಹಿಸುವವರು, ಅಧ್ಯಕ್ಷ ಪೀಠಕ್ಕೆ ಅತ್ಯಂತ ಗೌರವ ತೋರಿಸತಕ್ಕದ್ದು. ಅವರು ಅಧ್ಯಕ್ಷ ಪೀಠದ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು. ಮತ್ತು ಅವರ ನಿಷ್ಪಕ್ಷಪಾತ ಮನೋಭಾವದಲ್ಲಿ ಮತ್ತು ತೀರ್ಪಿನಲ್ಲಿ ವಿಶ್ವಾಸ ಇಟ್ಟಿರತಕ್ಕದ್ದು.

8. ಪ್ರತಿಯೊಬ್ಬ ಸದಸ್ಯನು, ಸದನಕ್ಕೆ ಅದರ ಉಪವೇಶನಕ್ಕಾಗಿ ಬರುವಾಗ ಅಧ್ಯಕ್ಷ ಪೀಠಕ್ಕೆ ಬಾಗಿ ನಮಸ್ಕರಿಸತಕ್ಕದ್ದು ಮತ್ತು ಸದನದಿಂದ ಹೋಗುವಾಗ ಅದರಂತೆಯೇ ಬಾಗಿ ವಂದಿಸತಕ್ಕದ್ದು.

9. ಸದಸ್ಯರು ಸದನದಲ್ಲಿರುವಾಗ ಪ್ರಕ್ರಿಯಾ ನಿಯಮಗಳ ಅಥವಾ ತೀರ್ಮಾನಗಳು ಅಥವಾ ಪೂರ್ವನಿದರ್ಶನಗಳು ಅಥವಾ ಅಂಗೀಕೃತವಾದ ಅಥವಾ ಸದನದ ಸಂಪ್ರದಾಯಗಳು ಅಥವಾ ಆಚರಣೆಗಳು ಸುಸ್ಥಾಪಿತವಾದ ಇವುಗಳು ಅನುಮತಿಸದಿರುವ ಯಾವುದನ್ನೂ ಹೇಳಕೂಡದು ಮತ್ತು ಮಾಡಕೂಡದು.

10. ನಮ್ಮ ದೇಶವು ವಿದೇಶದ ಮಿತ್ರ ಸರ್ಕಾರಗಳೊಂದಿಗೆ ಹೊಂದಿರುವ ಸಂಬಂಧಗಳಿಗೆ ಬಾಧಕವಾಗುವಂಥ ಅಥವಾ ದೇಶಕ್ಕೆ ಮತ್ತು ಅದರ ಇಂದಿನ ಸರ್ಕಾರಕ್ಕೆ ಬಿಕ್ಕಟ್ಟನ್ನುಂಟು ಮಾಡುವಂಥ ಯಾವುದೇ ಸೂಕ್ಷ್ಮವಾದ ಕಾರ್ಯ ನೀತಿ ವಿಚಾರಗಳ ಬಗ್ಗೆ ಚರ್ಚೆ ಮಾಡಬಾರದು.

11. ಸದನವು ಉಪವೇಶನದಲ್ಲಿರುವಾಗ, ಸದಸ್ಯನು ಸಭಾಂಗಣದಲ್ಲಿ ಅಡ್ಡ ಹಾಯತಕ್ಕದ್ದಲ್ಲ, ಅಂದರೆ, ಸಭಾಧ್ಯಕ್ಷರು, ಸಭಾಪತಿಯವರು ಮತ್ತು ಯಾರೇ ಮಾತಾಡುತ್ತಿರುವ ಸದಸ್ಯನ ನಡುವೆ ಹಾದು ಹೋಗತಕ್ಕದ್ದಲ್ಲ. ಈ ನಿಯಮದ ಉಲ್ಲಂಘನೆಯನ್ನು ಸಂಸತ್ತಿನ ಶಿಷ್ಟಾಚಾರದ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.

12. ಸದಸ್ಯರು ಅಧ್ಯಕ್ಷ ಪೀಠಕ್ಕೆ ಬೆನ್ನು ಹಾಕಿ ಕುಳಿತುಕೊಳ್ಳಬಾರದು. ಮಾತಾಡಬಯಸುವ ಸದಸ್ಯನು ಅಧ್ಯಕ್ಷ ಪೀಠದ ಗಮನವನ್ನು ಸೆಳೆಯುವುದಕ್ಕಾಗಿ ತನ್ನ ಆಸನದಲ್ಲಿ ಎದ್ದುನಿಲ್ಲಬೇಕು. ಯಾವ ಸದಸ್ಯನೂ ಸಭಾಧ್ಯಕ್ಷರ/ಸಭಾಪತಿಯವರ ದೃಷ್ಟಿಗೆ ಬೀಳದ ಹೊರತು ಮತ್ತು ಸಭಾಧ್ಯಕ್ಷರು/ಸಭಾಪತಿಯವರ ಹೆಸರಿನಿಂದ ಅಥವಾ ಸಂಜ್ಞೆಯ ಮೂಲಕ ಮಾತಾಡಲು ಅನುಮತಿಸಿದ ಹೊರತು ಅವನು ಅಥವಾ ಅವಳು ಮಾತಾಡತಕ್ಕದ್ದಲ್ಲ.

13. ಸಭಾಧ್ಯಕ್ಷರು/ಸಭಾಪತಿಯವರು ಮಾತನಾಡುವುದಕ್ಕೆ ಅಥವಾ ಶಿಸ್ತನ್ನು ಆಜ್ಞಾಪಿಸಿದಾಗ ಎದ್ದು ನಿಂತಾಗ ಮತ್ತು ಇನ್ನೊಬ್ಬ ಸದಸ್ಯನು ಮಾತನಾಡುತ್ತಿರುವಾಗ ಪ್ರತಿಯೊಬ್ಬ ಸದಸ್ಯನು ತನ್ನ ಸ್ಥಾನದಲ್ಲಿ ಕುಳಿತಿರತಕ್ಕದ್ದು.

14. ಸಭಾಧ್ಯಕ್ಷರು/ಸಭಾಪತಿಯವರು, ಸದನವನ್ನು ಕುರಿತು ಮಾತನಾಡುತ್ತಿರುವಾಗ ಯಾವ ಸದಸ್ಯನೂ ಎದ್ದುನಿಲ್ಲತಕ್ಕದ್ದಲ್ಲ ಅಥವಾ ಸದನದಿಂದ ಹೊರ ಹೋಗತಕ್ಕದ್ದಲ್ಲ. "ಅಧ್ಯಕ್ಷ ಪೀಠದ ಭಾಷಣವನ್ನು ಯಾವಾಗಲೂ ಮೌನದಿಂದ ಆಲಿಸತಕ್ಕದ್ದು" ಯಾವ ಸದಸ್ಯನೂ ಲಿಖಿತ ಭಾಷಣವನ್ನು ಓದತಕ್ಕದ್ದಲ್ಲ.

15. ಸದಸ್ಯನು ತಾನು ತಯಾರಿಸಿಕೊಂಡಿರುವ ಭಾಷಣ ಅಥವಾ ಪಾಠದ ಜಾಡು ತಪ್ಪಿದಾಗ, ಅವನು ತನ್ನ ಟಿಪ್ಪಣಿಗಳನ್ನು ಬಳಸಲು ಸ್ವತಂತ್ರನಾಗಿರುತ್ತಾನೆ.

16. ಯಾವೊಬ್ಬ ಸದಸ್ಯನ ಪ್ರಾಮಾಣಿಕತೆಯ ವಿರುದ್ಧವಾಗಿ, ಆರೋಪಣೆಯ ಅಥವಾ ಪ್ರಶ್ನೆಯರೂಪದಲ್ಲಿ ವೈಯಕ್ತಿಕ ಉಲ್ಲೇಖಗಳನ್ನು ಮಾಡತಕ್ಕದ್ದಲ್ಲ. ಸದಸ್ಯನು ಸದನದ ಇತರ ಸದಸ್ಯರನ್ನು ವ್ಯಕ್ತಿಗತವಾಗಿ ಸಂಬೋಧಿಸತಕ್ಕದ್ದಲ್ಲ. ಅವನು ಯಾವಾಗಲೂ ಅಧ್ಯಕ್ಷ ಪೀಠವನ್ನೇ ಸಂಬೋಧಿಸತಕ್ಕದ್ದು ಮತ್ತು ಇತರ ಸದಸ್ಯರೊಂದಿಗೆ ಎಲ್ಲಾ ಟೀಕೆ ಟಿಪ್ಪಣಿಗಳನ್ನು ಸಭಾಧ್ಯಕ್ಷರ/ಸಭಾಪತಿಯವರ ಮುಖಾಂತರವೇ ಮಾಡತಕ್ಕದ್ದು.

17. ಏಕ ಸಮಯದಲ್ಲಿ ಇಬ್ಬರು ಸದಸ್ಯರು ಎದ್ದು ನಿಂತಿರತಕ್ಕದ್ದಲ್ಲ. ಸದನದ ಆವರಣದೊಳಗೆ ಅಥವಾ ವಿಧಾನ ಮಂಡಲದೊಳಗೆ ಸದನದ ಕಲಾಪಗಳಿಗೆ ಸಂಬಂಧವಿಲ್ಲದ ಯಾವುದೇ ಪ್ರಶ್ನಾವಳಿಗಳನ್ನು ಅಥವಾ ಕರಪತ್ರಗಳನ್ನು ಸದಸ್ಯರು ಹಂಚಬಾರದು.

18. ಸದಸ್ಯನು ಚರ್ಚೆಯಲ್ಲಿ ಭಾಗವಹಿಸುವಾಗ ಇಂಗ್ಲೀಷ್ ಅಥವಾ ಹಿಂದಿ ಭಾಷೆಯನ್ನು ಬಳಸಬಹುದು. ಆದಾಗ್ಯೂ ಸದಸ್ಯನು ಬೇರೆ ಯಾವುದೇ ಭಾಷೆಯಲ್ಲಿ ಮಾತನಾಡಬಯಸಿದರೆ, ಅವನು ಅಧ್ಯಕ್ಷ ಪೀಠದ ಅನುಮತಿ ಪಡೆದು ಹಾಗೆ ಮಾತನಾಡಬಹುದು, ಆದರೆ, ಮಾತನಾಡುವ ಮೊದಲು, ಈ ಭಾಷಣದ ಒಂದು ಅನುವಾದಿತ ಪ್ರತಿಯನ್ನು ಮುಂಚಿತವಾಗಿಯೇ ಒದಗಿಸಬೇಕು.

19. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಈ ಯುವ ಸಂಸತ್ತುಗಳಲ್ಲಿ ಭಾಗವಹಿಸುವವರೆಲ್ಲ, ಸಂಸತ್ತಿಗೆ ಮತ್ತು ಸಂಸದೀಯ ಸಂಸ್ಥೆಗಳಿಗೆ ಗೌರವ ಸಲ್ಲಿಸುವಂಥ ರೀತಿಯಲ್ಲಿ ನಡೆದುಕೊಳ್ಳಬೇಕು.

# ಅನುಬಂಧ – ಎ

## ಮಾದರಿ ಕಾರ್ಯಕ್ರಮಗಳು

| | | |
|---|---|---|
| ಪೂರ್ವಾಹ್ನ | 11.00 ರಿಂದ 11.30 ರವರೆಗೆ | ಕಲಾಪಗಳ ಪಟ್ಟಿಯನ್ವಯ ಆರಂಭ |
| | 11.30 ರಿಂದ 11.45 ರವರೆಗೆ | ಆಸನಗಳ ಜೋಡಣೆ ಇತ್ಯಾದಿ |
| | 11.45 ರಿಂದ ಅ. 1.00 ರವರೆಗೆ | ಮೊದಲನೇ ತಂಡದ ಪ್ರದರ್ಶನ |
| ಅಪರಾಹ್ನ | 1.00 ರಿಂದ 2.00 ರವರೆಗೆ | ಊಟದ ವಿರಾಮ |
| | 2.00 ರಿಂದ 3.15 ರವರೆಗೆ | ಎರಡನೇ ತಂಡದ ಪ್ರದರ್ಶನ |
| | 3.15 ರಿಂದ 3.45 ರವರೆಗೆ | ಫಲಿತಾಂಶ ನಿರ್ಣಯ |
| | 3.45 ರಿಂದ 4.14 ರವರೆಗೆ | ಮುಕ್ತಾಯ |

## *ಅನುಬಂಧ – ಬಿ*

### *ಭಾಗ – 1 – ಕಡ್ಡಾಯ ವಿಷಯಗಳ ಪಟ್ಟಿ*

1. ಸಭಾಧ್ಯಕ್ಷರ ಆಗಮನ
2. ಪ್ರಶ್ನೋತ್ತರ ವೇಳೆ
3. ಗಮನ ಸೆಳೆಯುವ ಸೂಚನೆಗಳು
4. ವಿಧೇಯಕಗಳ ಮಂಡನೆ
5. ಅಲ್ಪಕಾಲಾವಧಿ ಚರ್ಚೆ

### *ಭಾಗ –2 ಐಚ್ಛಿಕ ವಿಷಯಗಳ ಪಟ್ಟಿ*

1. ಸಂತಾಪ ಸೂಚನೆಗಳು
2. ಶೂನ್ಯವೇಳೆ
3. ವಿಧೇಯಕಗಳ ಪರಿಶೀಲನೆ / ಅಂಗೀಕಾರ
4. ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ
5. ಖಾಸಗೀ ಕಲಾಪಗಳು (ನಿರ್ಣಯ ಅಥವಾ ಖಾಸಗೀ ವಿಧೇಯಕದ ಮಂಡನೆ ಇತ್ಯಾದಿ)

ಸ್ಪರ್ಧೆಯ ಬಗ್ಗೆ ಸ್ಪಷ್ಟೀಕರಣ ಅಗತ್ಯತೆ ಇದ್ದಲ್ಲಿ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ಅಥವಾ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

## *ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಗಳಲ್ಲಿ ಭಾಗವಹಿಸಿದ ಕಾಲೇಜುಗಳಿಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳು*

### *ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ*

### *"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ 2014–2015"*

(ಪದವಿಪೂರ್ವ ಕಾಲೇಜಿನ ಹೆಸರು) . . . . . . . . . . . . . . . . . . . . . . . . .. ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ 2014–2015ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ ***"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ"*** ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

| | |
|---|---|
| ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ಪದವಿ ಪೂರ್ವ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳ ಇಲಾಖೆ |
| . . . . . . . . . . . . . . . ಜಿಲ್ಲೆ | |

ಸ್ಥಳ:. . . . . . . . . . . . . . .

ದಿನಾಂಕ: . . . . . . . . . . . .

***ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ***

***"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ" 2014–2015***

............................................ ಪದವಿಪೂರ್ವ ಕಾಲೇಜಿನ ............................ ಪ್ರಥಮ/ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ......................................... ಅವರಿಗೆ ***2014–2015***ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ ***"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ"***ಯಲ್ಲಿ ಅತ್ಯುತ್ತಮ ಸಾಧನೆಗೆ . . . . . . . . . . . . . ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

ಉಪ ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
. . . . . . . . . . . . . . . ಜಿಲ್ಲೆ

ಸಕ್ಷಮ ಪ್ರಾಧಿಕಾರಿ
ಸಂಸದೀಯ ವ್ಯವಹಾರಗಳ ಇಲಾಖೆ

ಸ್ಥಳ:. . . . . . . . . . . . . . .
ದಿನಾಂಕ: . . . . . . . . . . . .

***ಕರ್ನಾಟಕ ಸರ್ಕಾರ***

***ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ***

***"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ" 2014–2015***

-------------------- ಈ ಪದವಿ ಪೂರ್ವ ಕಾಲೇಜಿನ ------------------------- ----- ಪ್ರಥಮ/ದ್ವಿತೀಯ ಪಿ.ಯು.ಸಿ.ಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ -------------------- ------------ಅವರಿಗೆ ***2014–2015***ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ "***ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ***"ಯಲ್ಲಿ ಅತ್ಯುತ್ತಮ ಸಾಧನೆಗೆ ----------------------------- --- ಮೆರಿಟ್ ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಬೆಂಗಳೂರು | ***ಸರ್ಕಾರದ ಪ್ರಧಾನ ಕಾರ್ಯದರ್ಶಿ*** | ***ಸರ್ಕಾರದ ಕಾರ್ಯದರ್ಶಿ*** |
| ದಿನಾಂಕ: | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳ ಇಲಾಖೆ |

***ಕರ್ನಾಟಕ ಸರ್ಕಾರ***

***ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ***

***"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ" 2014–2015***

______________________________ ಈ ಪದವಿ ಪೂರ್ವ ಶಿಕ್ಷಣ ಕಾಲೇಜು ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ***2014–2015***ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ ***"ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ"***ಯಲ್ಲಿ ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

ಬೆಂಗಳೂರು

ದಿನಾಂಕ:

ಸಕ್ಷಮ ಪ್ರಾಧಿಕಾರಿ
ಸಂಸದೀಯ ವ್ಯವಹಾರಗಳ ಇಲಾಖೆ/
ಪದವಿ ಪೂರ್ವ ಶಿಕ್ಷಣ ಇಲಾಖೆ

## *ಮಾದರಿ ಸಂತಾಪ ಸೂಚನೆ ಪ್ರಸ್ತಾವಗಳು*

***ಮಾನ್ಯ ಸಭಾಧ್ಯಕ್ಷರು:***

ಕನ್ನಡದ ಹಿರಿಯ ಸಾಹಿತಿ ಡಾ॥ ಉಡುಪಿ ರಾಜಗೋಪಲಚಾರ್ಯ ಅನಂತಮೂರ್ತಿ ಅವರು 21ನೇ ಡಿಸೆಂಬರ್ 1932ರಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಮೇಳಿಗೆ ಗ್ರಾಮದಲ್ಲಿ ಜನಿಸಿದ್ದು, ಇಂಗ್ಲೀಷ್‌ನಲ್ಲಿ ಎಂ.ಎ. ಪದವಿಯನ್ನು ಹಾಗೂ 1966ರಲ್ಲಿ ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ಮತ್ತು ತೌಲನಿಕ ಸಾಹಿತ್ಯ ಕುರಿತು ಪಿ.ಹೆಚ್.ಡಿ ಪದವಿಯನ್ನು ಪಡೆದಿದ್ದರು.

ದಿವಂಗತರು ಮೈಸೂರು ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ವಿಭಾಗದಲ್ಲಿ ರೀಡರ್ ಆಗಿ, ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾಗಿ, ಗುಲ್ಬರ್ಗದ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ, ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯ, ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯದಲ್ಲಿ ಹಾಗೂ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು, 1993ರಿಂದ 1998ರವರೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿಯನ್ನು ಹೊಂದಿದ್ದರು.

1994ರಲ್ಲಿ ಜ್ಞಾನಪೀಠ ಪುರಸ್ಕೃತರಾಗಿದ್ದ ಅವರು 1970ರಲ್ಲಿ "ಸಂಸ್ಕಾರ" ಚಿತ್ರಕ್ಕಾಗಿ ಅತ್ಯುತ್ತಮ ಕಥಾ ಪ್ರಶಸ್ತಿಯನ್ನು ಹಾಗೂ 1998ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದಿದ್ದರು.

ನವ ಸಾಹಿತ್ಯ ಚಳುವಳಿಯ ಪಿತಾಮಹರಲ್ಲಿ ಒಬ್ಬರಾಗಿದ್ದ ಅವರು ಶ್ರೀ ಸಾಮಾನ್ಯನ ಹಿತ ಕಾಯುವಲ್ಲಿ ವಿಶೇಷ ಕಳಕಳಿ ಹಾಗೂ ಅಪ್ರತಿಮ ಬದ್ಧತೆಯನ್ನು ತೋರುತ್ತಿದ್ದರಲ್ಲದೆ, ಸಾರ್ವಜನಿಕ ಹಿತಾಸಕ್ತಿಯ ವಿಷಯಗಳಿಗೆ ಸದಾ ಸ್ಪಂದಿಸುತ್ತಿದ್ದರು. ತಮ್ಮ ಸ್ಪಷ್ಟ ಅಭಿಪ್ರಾಯ ಹಾಗೂ ದಿಟ್ಟ ನಿಲುವನ್ನು ಪ್ರಕಟಿಸಲು ಹಿಂಜರಿಯದ ಅವರು ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿನ "ತುಂಗಾ ಮೂಲ ಉಳಿಸಿ" ಹಾಗೂ ಪಶ್ಚಿಮ ಘಟ್ಟಕ್ಕೆ ಮಾರಕವಾಗಿದ್ದ ಕಬ್ಬಿಣ ಅದಿರು ಕಾರ್ಖಾನೆಯನ್ನು ತೆರವು ಮಾಡಬೇಕೆಂದು ಜನಪರ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು.

ಕವಿ, ಕಥೆಗಾರ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಹೀಗೆ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದ ಅವರು ಹಲವು ಸಾಹಿತ್ಯ ಸೂತ್ರಗಳಿಗೆ ಉದಾಹರಣೆಯಾಗಿದ್ದರು. ದಿವಂಗತರು ನಾಡು ಕಂಡ ಅಪ್ರತಿಮ ಸಹಿತಿ, ಸರಳ, ಸಜ್ಜನ, ಹೃದಯವಂತರಾಗಿ ಎಲ್ಲರೊಂದಿಗೆ ಉತ್ತಮ ಒಡನಾಟ ಹೊಂದಿದ್ದ ಸಾರಸ್ವತ ಲೋಕದ ದಿಗ್ಗಜರಾಗಿದ್ದರು.

ಡಾ॥ಯು.ಆರ್.ಅನಂತಮೂರ್ತಿ ಅವರು ದಿನಾಂಕ:22.08.2014ರಂದು ನಿಧನ ಹೊಂದಿರುತ್ತಾರೆ.

***(ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ ನಂತರ)***

ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

***(ಮೌನ ಆಚರಿಸಿದ ನಂತರ)***

ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

## ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು

### ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 491

ಸದಸ್ಯರ ಹೆಸರು :

ಉತ್ತರಿಸುವ ದಿನಾಂಕ :

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 1994-95ರಿಂದ 2004-05ರ ಅವಧಿಯಲ್ಲಿ ಪ್ರಾರಂಭವಾಗಿರುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಆಡಳಿತ ಮಂಡಳಿಗಳು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ಅನುದಾನ ನೀಡುವ ಪ್ರಸ್ತಾವನೆ ಸಕಾರದ ಮುಂದಿದೆಯೇ; ಇದ್ದಲ್ಲಿ ಯಾವ ಅವಧಿಯೊಳಗೆ ಈ ಬಗ್ಗೆ ಸೂಕ್ತ ಆದೇಶ ಹೊರಡಿಸಲಾಗುವುದು; | ಇಲ್ಲ |
| ಆ) | ಸರ್ಕಾರಿ ಶಾಲೆಗಳಲ್ಲಿ ಹಾಗೂ ಕನ್ನಡ ಮಾಧ್ಯಮದ ಪ್ರೌಢಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಗಿ ಶಾಲೆಗಳು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಸರ್ಕಾರದ ವೇತನ ಪಡೆಯುತ್ತಿರುವ ಎಲ್ಲಾ ನೌಕರರು ಅವರ ಮಕ್ಕಳನ್ನು ಸರ್ಕಾರದ ಶಾಲೆ ಕಾಲೇಜುಗಳಲ್ಲಿಯೇ ಕಡ್ಡಾಯವಾಗಿ ವಿದ್ಯಾಭ್ಯಾಸ ಮಾಡಿಸಬೇಕೆಂದು ಆದೇಶ ಹೊರಡಿಸಲಾಗುವುದೇ; | ಇಲ್ಲ |
| ಇ) | ಪದವಿ ಪೂರ್ವ ಕಾಲೇಜು ಪ್ರಾರಂಭವಾಗಿ 2-3 ತಿಂಗಳಾದರೂ ಪದವಿ ಪೂರ್ವ ಶಿಕ್ಷಣ ಇಲಾಖೆ ಸಿ.ಬಿ.ಎಸ್.ಇ ಪುಸ್ತಕಗಳನ್ನು ಪೂರೈಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರಸಕ್ತ ವರ್ಷದಲ್ಲಿ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಸಿ.ಬಿ.ಎಸ್.ಇ ಸಿಲೆಬಸ್ ಪುಸ್ತಕಗಳು ಲಭ್ಯವಾಗುವಮತೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ; | ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿ.ಯು.ಸಿ ತರಗತಿಯ ಪ್ರವೇಶವು 29-05-2014ರಿಂದ ಆರಂಭಗೊಂಡು 08-07-2014ರಂದು ಮುಗಿಯಿತು. ಪ್ರಥಮ ಪಿ.ಯು.ಸಿ ತರಗತಿಯ ಪ್ರವೇಶವು 15-06-2014ರಿಂದ ಆರಂಭವಾಗಿ 21-07-2014ರಂದು ಕೊನೆಯ ದಿನವಾಗಿತ್ತು.<br><br>ಇಲಾಖೆಯು ಕರ್ನಾಟಕ ಪಠ್ಯಪುಸ್ತಕದ ಸಂಘದ |

| | | |
|---|---|---|
| | | ಮೂಲಕ ಟೆಂಡರ್ ಕರೆದು ಎಲ್–1 ಟೆಂಡರ್‌ದಾರರನ್ನು ಅಂತಿಮಗೊಳಿಸಿದ ನಂತರ ಅಭಿಮಾನಿ ಗ್ರೂಪ್‌ನವರು ನ್ಯಾಯಾಲಯದ ಮೊರೆ ಹೋದುದರಿಂದ ಪುಸ್ತಕ ಮುದ್ರಣ ತಡವಾಗಿತ್ತು. ಆದರೆ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿಯ ಭಾಷೆ, ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳ ಒಟ್ಟು 121 ಶೀರ್ಷಿಕೆಗಳಲ್ಲಿ ಈಗಾಗಲೇ 117 ಶೀರ್ಷಿಕೆಗಳು ಮುದ್ರಣಗೊಂಡು ವಿದ್ಯಾರ್ಥಿಗಳಿಗೆ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. |

ಇಡಿ 642 ಎಸ್‌ಇಎಸ್ 2014

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1038

ಸದಸ್ಯರ ಹೆಸರು :

ಉತ್ತರಿಸುವ ದಿನಾಂಕ :

ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಅಂಗವಿಕಲ ಮಕ್ಕಳ ಸಂಖ್ಯೆ ಎಷ್ಟು; | 2011ರ ಜನಗಣತಿಯ ಪ್ರಕಾರ 0 ರಿಂದ 19 ವರ್ಷದೊಳಗಿನ ಮಕ್ಕಳ ಸಂಖ್ಯೆ: 3,89,383. |
| ಆ) | ಮಕ್ಕಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು? | ಮಕ್ಕಳಿಗೆ ನೀಡುತ್ತಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಅಂಗವಿಕಲ ಮಕ್ಕಳನ್ನು ಹೊಂದಿರುವ ಕೇಂದ್ರ ಸರ್ಕಾರಿ ನೌಕರರಿಗೆ ವರ್ಗಾವಣೆಯಿಂದ ವಿನಾಯಿತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದಿದೆ. |
| ಈ) | ಅಂಗವಿಕಲ ಮಕ್ಕಳಿಗೆ ಚಿಕಿತ್ಸೆ ಹಾಗೂ ಕಾಳಜಿ ತೋರಿಸುವ ದೃಷ್ಟಿಯಿಂದ, ಅಂಗವಿಕಲ ಮಕ್ಕಳನ್ನು ಹೊಂದಿರುವ ರಾಜ್ಯ ಸರ್ಕಾರಿ ನೌಕರರಿಗೂ ವರ್ಗಾವಣೆಯಿಂದ ವಿನಾಯಿತಿ ನೀಡಲು ಸರ್ಕಾರ ಉದ್ದೇಶಿಸಿದೆಯೇ? | ಈ ಪ್ರಸ್ತಾವ ಪರಿಶೀಲನೆಯಲ್ಲಿದೆ. |

**ಸಂಖ್ಯೆ:** ಮಮಇ 275 ಪಿಹೆಚ್‌ಪಿ 2014

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

**ಶ್ರೀ..... ವಿಧಾನಸಭಾ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1038ರ ಉತ್ತರಕ್ಕೆ ಅನುಬಂಧ**

1) ಅಂಗವಿಕಲತೆಯನ್ನು ಪ್ರಾರಂಭದಲ್ಲಿ ಗುರುತಿಸುವುದು ಹಾಗೂ ತಡೆಗಟ್ಟುವುದು–ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ, ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ, ಅಂಗವಿಕಲರ ಗ್ರಾಮೀಣ ಪುನರ್ವಸತಿ ಯೋಜನೆ.

2) ಅಂಗವಿಕಲರ ಶೈಕ್ಷನಿಕ ಪುನರ್ವಸತಿಗಾಗಿ –ವಸತಿ ಹಾಗೂ ವಸತಿರಹಿತ ವಿಶೇಷ ಶಾಲೆಗಳು, ವಿದ್ಯಾರ್ಥಿವೇತನ ಹಾಗೂ ಪ್ರೋತ್ಸಾಹಧನ, ಶುಲ್ಕ ಮರುಪಾವತಿ, ಎಸ್.ಎಸ್.ಎಲ್.ಸಿ ಹಾಗು ನಂತರದ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲಾಪ್‌ಟಾಪ್ ವಿತರಣೆ, ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.660/–ಗಳ ಬಸ್‌ಪಾಸ್ ವಿತರಣೆ ಹಾಗೂ ಸಂಪೂರ್ಣ ದೃಷ್ಟಿದೋಷವುಳ್ಳ ಮಕ್ಕಳಿಗೆ ರಾಜ್ಯಾದ್ಯಂತ ಸಂಚರಿಸಲು ಸಾರಿಗೆ ಇಲಾಖೆಯಿಂದ ಉಚಿತವಾಗಿ ಬಸ್‌ಪಾಸ್ ವಿತರಣೆ, ಬ್ರೈಲ್ ಮುದ್ರಣಾಲಯ ಮುಂತಾದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

3) ಆರ್ಥಿಕ ಪುನರ್ವಸತಿಗಾಗಿ–ಸ್ವಯಂ ಉದ್ಯೋಗ ಕೈಗೊಳ್ಳಲು ಆಧಾರ ಯೋಜನೆ, ಉದ್ಯೋಗ ಕೋಶ, ಅಂಗವಿಕಲ ನೌಕರರ ಮತ್ತು ತರಬೇತಿದಾರರ (ಪುರುಷ & ಮಹಿಳೆಯರ) ವಸತಿನಿಯ ಮುಂತಾದ ಯೋಜನೆಗಳು.

4) ವೈದ್ಯಕೀಯ ಪುನರ್ವಸತಿ–ಸಾಧನ ಸಲಕರಣೆ, ತೀವ್ರತರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ ನೀಡುವುದು.

5) ಸಾಮಾಜಿಕ ಪುನರ್ವಸತಿ–ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ, ಬುದ್ಧಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರಿಗೆ ವಿಮಾ ಯೋಜನೆ, ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಶಿಶು ಪಾಲನಾ ಭತ್ಯೆ, ಮಾನಸ ಕೇಂದ್ರ.

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 4413

ಸದಸ್ಯರ ಹೆಸರು :

ಉತ್ತರಿಸುವ ದಿನಾಂಕ :

ಉತ್ತರಿಸುವ ಸಚಿವರು : ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾವಜನಿಕ ಸಂಪರ್ಕ ಹಾಗೂ ಹಜ್ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಗರದಲ್ಲಿರುವ ಕೊಳವೆಗಳ ಮೂಲಕ ಗ್ಯಾಸ್ ಸಾಗಿಸಲು, ವಿತರಣೆ ಹಾಗೂ ಮಾರುಕಟ್ಟೆಗೆ ತರುವ ಉದ್ದೇಶದಿಮದ ಸ್ಥಾಪಿಸಲಾಗಿದ್ದ Joint Venture Companyಯ ಕಾರ್ಯಚಟುವಟಿಕೆ ಈಗ ಯಾವ ಹಂತದಲ್ಲಿದೆ? | ನಗರಗಳಲ್ಲಿ ಕೊಳವೆಗಳ ಮೂಲಕ ಗ್ಯಾಸ್ ಸಾಗಿಸಲು, ವಿತರಣೆ ಹಾಗೂ ಮಾರುಕಟ್ಟೆಗೆ ತರುವ ಉದ್ದೇಶದ ಜಂಟಿ ಉದ್ದಿಮೆಯನ್ನು ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಈ ಸಂಸ್ಥೆಯ ಸ್ಥಾಪನೆಯದ ನಂತರ ಅದರ ಕಾರ್ಯಚಟುವಟಿಕೆಗಳು ಪ್ರಾರಂಭವಾಗುತ್ತವೆ. |
| ಆ) | ಆರಂಭದಲ್ಲಿ ಯಾವ ಯಾವ ನಗರಗಳಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಲು ಉದ್ದೇಶಿಸಲಾಗಿದೆ: | ಪೆಟ್ರೋಲಿಯಂ ಅಂಡ್ ನ್ಯಾಚುರಲ್ ಗ್ಯಾಸ್ ರೆಗ್ಯೂಲೇಟರಿ ಬೋರ್ಡ್ (PNGRB)ಯು ನಗರ ಅನಿಲ ಹಂಚಿಕೆಯ ಟೆಂಡರ್ ಅನ್ನು ಕರೆದು ಯಶಸ್ವಿ ಬಿಡ್‌ದಾರರಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅಧಿಕಾರ ನೀಡುತ್ತದೆ. ಪ್ರಸ್ತುತ PNGRB ಯು ಬೆಂಗಳೂರು ವಲಯದಲ್ಲಿ ಅನಿಲ ಸರಬರಾಜು ಮಾಡುವ ಕಾರ್ಯಕ್ಕೆ ಟೆಂಡರನ್ನು ಕರೆದಿದೆ. |
| ಇ) | ಈ ನಿಟ್ಟಿನಲ್ಲಿ ಕರ್ನಾಟಕ ನ್ಯಾಚುರಲ್ ಗ್ಯಾಸ್ ಲಿಮಿಟೆಡ್ ಸಂಸ್ಥೆ ಈವರೆಗೆ ಮಾಡಿರುವ ಪ್ರಗತಿ ಏನು? | ಕರ್ನಾಟಕ ನ್ಯಾಚುರಲ್ ಗ್ಯಾಸ್ ಲಿಮಿಟೆಡ್ ಸಂಸ್ಥೆಯನ್ನು ಇನ್ನೂ ಸ್ಥಾಪಿಸಬೇಕಾಗಿದೆ. |

**ಸಂಖ್ಯೆ:** ಮೂಲಿಇ 51 ನಮೂಯೋ 2014

ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾವಜನಿಕ
ಸಂಪರ್ಕ ಹಾಗೂ ಹಜ್ ಸಚಿವರು

**ಕರ್ನಾಟಕ ವಿಧಾನ ಸಭೆ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3900

ಸದಸ್ಯರ ಹೆಸರು :

ಉತ್ತರಿಸುವ ದಿನಾಂಕ :

ಉತ್ತರಿಸುವ ಸಚಿವರು : ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲರುವ ಶಿಕ್ಷಕರ ಕೊರತೆ ಎಷ್ಟು; ಈ ಪೈಕಿ ಬಾಗಲಕೋಟೆ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಎಷ್ಟು ಶಿಕ್ಷಕರ ಕೊರತೆ ಇದೆ (ಸಂಪೂರ್ಣ ಮಾಹಿತಿ ನೀಡುವುದು); | ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ: 17,738. ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ:1,727.<br>ಬಾಗಲಕೋಟೆ ಜಿಲ್ಲೆಗೆ ಸಂಬಂದಿಸಿದಂತೆ:<br>ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ: 949. ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ: 12. |
| ಆ) | ಶಿಕ್ಷಕರ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಎಷ್ಟು ಅವಧಿಯಲ್ಲಿ ಶಿಕ್ಷಕರ ಕೊರತೆಯ ಸಮಸ್ಯೆಯನ್ನು ಬಗೆಹರಿಸಲಾಗುವುದು? | 9,511 ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 1,137 ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯು ಅನುಮೋದನೆ ನೀಡಿದೆ. ಅಂತೆಯೇ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡಲು ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (TET) ನಡೆಸಲಾಗಿದೆ. ಆದಾಗ್ಯೂ, ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅಡಚಣೆ ಆಗಬಾರದೆನ್ನುವ ದೃಷ್ಟಿಯಿಂದ ನೇಮಕಾತಿ ಮಾಡುವವರೆಗೆ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 9,405 ಮತ್ತು ಸರ್ಕಾರಿ ಪ್ರೌಢ ಶಾಲೆಗಳಿಗೆ 1,137 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಇಡಿ 194 ಎಸ್‌ಟಿಬಿ 2013; ದಿನಾಂಕ:13/05/2014ರಲ್ಲಿ ಅನುಮತಿ ನೀಡಲಾಗಿರುತ್ತದೆ ಹಾಗೂ ಜೂನ್–2014ರ ನಂತರ ನಿವೃತ್ತರಾಗಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರನ್ನು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವವರಗೆ ಸೇವೆಯಲ್ಲಿ ಮುಂದುವರೆಸಲು ಆದೇಶ ಹೊರಡಿಸಿದೆ. |

**ಸಂಖ್ಯೆ:** ಇಡಿ 138 ಪಿಎಂಪಿ 2014

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು

# ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು :

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 3361

ಉತ್ತರ ದಿನಾಂಕ :

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಹಲವಾರು ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; | ಬಂದಿದೆ. ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಿಗೆ ಆದ್ಯತೆ ಮೇರೆಗೆ ಭೂವೈಜ್ಞಾನಿಕ ಸಮೀಕ್ಷೆ ಆಧಾರದಲ್ಲಿ ಕೊಳವೆ ಬಾವಿಗಳನ್ನು ಕೊರೆದು ಹಾಗೂ ಟ್ಯಾಂಕರ್ ಮೂಲಕ ಗ್ರಾಮೀಣ ಜನವಸತಿಗಳಿಗೆ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. |
| ಆ) | ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ (Multi Villge Drinking Water) ಮಂಜೂರಾತಿಗಾಗಿ ಅನುಸರಿಸಬೇಕಾದ ಮಾನದಂಡವೇನು; | ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ರೂಪಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ:<br>1) ಯೋಜನಾ ವ್ಯಾಪ್ತಿಯ ಒಟ್ಟು ಜನವಸತಿಗಲ ಪೈಕಿ ಶೇ.50ರಷ್ಟು ಜನವಸತಿಗಳು <50% Coverage ಅಡಿಯಲ್ಲಿ ಬಂದರೆ ಹಾಗೂ ಶೇ.50ಕ್ಕಿಂತ ಹೆಚ್ಚಿಗೆ ರಾಸಾಯನಿಕ ಕಲುಷಿತೆಯಿರುವ ಜನವಸತಿಗಳಿದ್ದಲ್ಲಿ ಯೋಜನೆಗಳನ್ನು ರೂಪಿಸಲಾಗುತ್ತಿದೆ.<br>2) ಯೋಜನಾ ವೆಚ್ಚವು ರೂ.3000/- ದಿಂದ ರೂ.7000/- Per Capita ವೆಚ್ಚದೊಳಗಿರಬೇಕು.<br>3) ವಿಶೇಷ ಪ್ರಕರಣಗಳೆಂದು Desert Development Programme (DDP) ಮತ್ತು Drought Prone Areas Programme (DPAP) ಬ್ಲಾಕ್‌ಗಳ ಜನವಸತಿಗಳಿಗೆ ಯೋಜನೆಗಳನ್ನು ರೂಪಿಸಲಾಗುವುದು.<br>4) ಉದ್ದೇಶಿತ ಯೋಜನೆಗೆ ಸೂಕ್ತ ನೀರಿನ ಜಲಮೂಲದ ಲಭ್ಯತೆ ಹಾಗೂ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವವಿರಬೇಕು. |
| ಇ) | ತಾಲ್ಲೂಕಿನ ಯಾವ ಯಾವ ಗ್ರಾಮಗಳಿಗೆ ಸದರಿ ಯೋಜನೆ ಮಂಜೂರಾಗಿದೆ; ಈ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು; | ಮಾಲೂರು ತಾಲ್ಲೂಕಿನ ಮಾರ್ಕಂಡೇಯ ಜಲಾಶಯದಿಂದ 184 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ರೂ.3619.00 ಲಕ್ಷಗಳಿಗೆ ಮಂಜೂರಾಗಿದೆ. ಇದುವರೆವಿಗೆ ರೂ.4088.00 ಲಕ್ಷ ವೆಚ್ಚವಾಗಿದೆ. |

| | | |
|---|---|---|
| ಈ) | ಈ ಪೈಕಿ ಪೂರ್ಣಗೊಂಡಿರುವ ಹಾಗೂ ಪೂರ್ಣಗೊಳ್ಳದಿರುವ ಕಾಮಗಾರಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)? | ಈ ಕುಡಿಯುವ ನೀರು ಸರಬರಾಜು ಯೋಜನೆಯು ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ನೀರನ್ನು ಜಾಕ್‌ವೆಲ್‌ನಿಂದ ಶೇಖರಣಾ ತೊಟ್ಟಿಗೆ ಹರಿಸಲಾಗಿದೆ. ಆದರೆ ಇತ್ತೀಚೆಗೆ ಮಳೆಯ ತೀವ್ರ ಅಭಾವ ಮತ್ತು ವಾರ್ಷಿಕ ಮಳೆಯ ಸರಾಸರಿ ತೀವ್ರವಾಗಿ ಕಡಿಮೆಯಾಗಿದ್ದು ಜಲಾಶಯದಲ್ಲಿ ನೀರು ಶೇಖರಣೆಯಾಗಿಲ್ಲದಿರುವುದರಿಂದ 184 ಗ್ರಾಮಗಳಿಗೆ ಸಮರ್ಪಕವಾಗಿ ನೀರು ಪೂರೈಸಲು ಸಾಧ್ಯವಾಗಿರುವುದಿಲ್ಲ. |

ಗ್ರಾಅಪ 377 ಗ್ರಾನೀಸ (1) 2014

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 3827 |
| ಸದಸ್ಯರ ಹೆಸರು | : | |
| ಉತ್ತರಿಸುವ ದಿನಾಂಕ | : | |
| ಉತ್ತರಿಸುವ ಸಚಿವರು | : | ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಸನ ಜಿಲ್ಲೆಯಾದ್ಯಂತ ಬಿಸಿಯೂಟ ಕಾರ್ಯಕ್ರಮದಲ್ಲಿ ಸೌಲಭ್ಯ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿರಗಳನ್ನು ಒದಗಿಸುವುದು);</td><td>
<table>
<tr><th>ಕ್ರ.ಸಂ</th><th>ತಾಲ್ಲೂಕಿನ ಹೆಸರು</th><th>1–10 ತರಗತಿ ಒಟ್ಟು ಮಕ್ಕಳ ಸಂಖ್ಯೆ</th></tr>
<tr><td>1</td><td>ಆಲೂರು</td><td>8822</td></tr>
<tr><td>2</td><td>ಅರಕಲಗುಡು</td><td>20778</td></tr>
<tr><td>3</td><td>ಅರಸಿಕೆರೆ</td><td>30510</td></tr>
<tr><td>4</td><td>ಬೇಲೂರು</td><td>18020</td></tr>
<tr><td>5</td><td>ಚನ್ನರಾಯಪಟ್ಟಣ</td><td>25125</td></tr>
<tr><td>6</td><td>ಹಾಸನ</td><td>30469</td></tr>
<tr><td>7</td><td>ಹೊಳೆನರಸೀಪುರ</td><td>19479</td></tr>
<tr><td>8</td><td>ಸಕಲೇಶಪುರ</td><td>12749</td></tr>
<tr><td></td><td>ಒಟ್ಟು</td><td>165952</td></tr>
</table>
</td></tr>
<tr><td>ಆ)</td><td>ಸದರಿ ವ್ಯವಸ್ಥೆಗಾಗಿ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಬಿಸಿಯೂಟ ನೀಡುತ್ತಿರುವ ಕುರಿತಾದ ವಿವರಗಳೇನು: ಯಾವ ಸ್ವಯಂ ಸೇವಾ ಸಂಸ್ಥೆಗಳಿಗೆ ಅವಕಾಶ ಒದಗಿಸಿಕೊಡಲಾಗಿದೆ; ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಬಿಸಿಯೂಟ ವ್ಯವಸ್ಥೆ</td><td>ಹಾಸನ ಜಿಲ್ಲೆಯಲ್ಲಿ ಯಾವುದೇ ಸ್ವಯಂ ಸೇವಾ ಸಂಸ್ಥೆ ಕಾರ್ಯನಿರ್ವಹಿಸುತ್ತಿಲ್ಲ ಹಾಗೂ ಬಿಸಿಯೂಟ ವ್ಯವಸ್ಥೆ ಕುರಿತು ಕಳೆದ ಒಂದು ವರ್ಷದಲ್ಲಿ ದೂರುಗಳು ದಾಕಲಾಗಿರುವುದಿಲ್ಲ.</td></tr>
</table>

<table>
<tr><td></td><td>ಕುರಿತು ದಾಖಲಾಗಿರುವ ದೂರುಗಳು ಎಷ್ಟು ಮತ್ತು ಆ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td></td></tr>
<tr><td>ಇ)</td><td>ಬಿಸಿಯೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದವರು ನಿಗದಿಪಡಿಸಿರುವ ಆಹಾರ ಧಾನ್ಯಗಳ ಬಳಕೆ ಮತ್ತು ಇತರ ಮಾರ್ಗದರ್ಶನ ನೀತಿ ನಿಯಮಗಳೇನು; (ವಿವರಗಳನ್ನು ಒದಗಿಸುವುದು)?</td><td>
<table>
<tr><th colspan="4">(ಪ್ರತಿ ವಿದ್ಯಾರ್ಥಿಗೆ/ಪ್ರತಿ ದಿನಕ್ಕೆ)</th><th colspan="4">ರೂ.ಗಳಲ್ಲಿ</th></tr>
<tr><td rowspan="2">ಕ್ರ.ಸಂ</td><td rowspan="2">ಆಹಾರ ಪದಾರ್ಥ</td><td colspan="2">ತರಗತಿ 1 ರಿಂದ 5</td><td colspan="2">ತರಗತಿ 6 ರಿಂದ 8</td><td colspan="2">ತರಗತಿ 9 ರಿಂದ 10</td></tr>
<tr><td>ಪ್ರಮಾಣ (ಗ್ರಾಂ ಗಳಲ್ಲಿ)</td><td>ಅಡುಗೆ ತಯಾರಿಕಾ ವೆಚ್ಚ</td><td>ಪ್ರಮಾಣ (ಗ್ರಾಂ ಗಳಲ್ಲಿ)</td><td>ಅಡುಗೆ ತಯಾರಿಕಾ ವೆಚ್ಚ</td><td>ಪ್ರಮಾಣ (ಗ್ರಾಂ ಗಳಲ್ಲಿ)</td><td>ಅಡುಗೆ ತಯಾರಿಕಾ ವೆಚ್ಚ</td></tr>
<tr><td>1</td><td>ಅಕ್ಕಿ</td><td>100</td><td>ಉಚಿತ</td><td>150</td><td>ಉಚಿತ</td><td>150</td><td>1.62</td></tr>
<tr><td>2</td><td>ಬೇಳೆ</td><td>20</td><td>1.47</td><td>30</td><td>2.19</td><td>30</td><td>2.19</td></tr>
<tr><td>3</td><td>ತರಕಾರಿ</td><td>50</td><td>0.76</td><td>75</td><td>1.14</td><td>75</td><td>1.14</td></tr>
<tr><td>4</td><td>ಎಣ್ಣೆ</td><td>5</td><td>0.32</td><td>7.5</td><td>0.49</td><td>7.5</td><td>0.49</td></tr>
<tr><td>5</td><td>ಉಪ್ಪು</td><td>2</td><td>0.02</td><td>4</td><td>0.04</td><td>4</td><td>0.04</td></tr>
<tr><td>6</td><td>ಅಡುಗೆ ಅನಿಲ</td><td>0</td><td>0.60</td><td>0</td><td>0.90</td><td></td><td>0.90</td></tr>
<tr><td>7</td><td>ಸಾಂಬಾರು ಪದಾರ್ಥ</td><td>0</td><td>0.07</td><td>0</td><td>0.24</td><td></td><td>0.24</td></tr>
<tr><td></td><td>ಒಟ್ಟು</td><td></td><td>3.34</td><td></td><td>5.00</td><td></td><td>6.62</td></tr>
</table>
</td></tr>
</table>

**ಸಂಖ್ಯೆ:** ಇಡಿ 29 ಎಂಎಂಎಸ್ 2014

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು

**ಕರ್ನಾಟಕ ವಿಧಾನಪರಿಷತ್**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 282 |
| ಸದಸ್ಯರ ಹೆಸರು | : | |
| ಉತ್ತರಿಸಬೇಕಾದ ದಿನಾಂಕ | : | |
| ಉತ್ತರಿಸುವ ಸಚಿವರು | : | ಕೃಷಿ ರಾಜ್ಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1. | ಕಳೆದ 2 ವರ್ಷಗಳಿಂದ ದಾಖಲಾಗಿರುವ ರೈತರ ಆತ್ಮಹತ್ಯೆ ಪ್ರಕರಣಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ (2012-13 ಮತ್ತು 2013-14) ರಾಜ್ಯದಲ್ಲಿ ಒಟ್ಟು 135 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುತ್ತದೆ.<br><table><tr><td>ಕ್ರ.ಸಂ.</td><td>ವರ್ಷ</td><td>ಸಾಲದ ಬಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ</td></tr><tr><td>1.</td><td>2012-13</td><td>77</td></tr><tr><td>2.</td><td>2013-14</td><td>58</td></tr><tr><td></td><td>ಒಟ್ಟು</td><td>135</td></tr></table><br>ಜಿಲ್ಲಾವಾರು, ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| 2. | ರೈತರ ಆತ್ಮಹತ್ಯೆಗೆ ನಿಖರವಾದ ಕಾರಣಗಳೇನು? | ಡಾ: ಜಿ.ಕೆ.ವೀರೇಶ್ ಸಮಿತಿಯ ವರದಿಯ ಪ್ರಕಾರ ಸಾಮಾಜಿಕ, ಆರ್ಥಿಕ ಮತ್ತು ವೈಯಕ್ತಿಕ ಕಾರಣಗಳಿಂದ, ಸಾಲದ ಬಾದೆ, ತೀವ್ರತರವಾದ ರೋಗ ಬಾದೆ, ಸಾಂಸಾರಿಕ ತೊಂದರೆಗಳು, ಬೆಳೆ ವಿಫಲತೆ ಇವೇ ಮುಂತಾದವು ರೈತರ ಆತ್ಮಹತ್ಯೆಗೆ ಮುಖ್ಯ ಕಾರಣಗಳಾಗಿರುತ್ತವೆ.<br>ಈ ಮೇಲೆ ತಿಳಿಸಲಾಗಿರುವ 135 ರೈತರ ಆತ್ಮಹತ್ಯೆ ಪ್ರಕರಣಗಳು ಕೃಷಿ ಸಾಲದ ಬಾದೆಯಿಂದ ಮಾತ್ರ ಆಗಿರುತ್ತದೆ |
| 3. | ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು? | **ರೈತರ ಆತ್ಮಹತ್ಯೆ ಘಟನೆಗಳನ್ನು ತಡೆಗಟ್ಟಲು ಕೃಷಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ,-**<br>1. ರೈತರ ಆತ್ಮಹತ್ಯೆ ಪ್ರಕರಣಗಳನ್ನು ನಿಯಂತ್ರಿಸಲು ಮತ್ತು ಕಡಿಮೆ ಮಾಡಲು ನಿರ್ದಿಷ್ಟ ಕ್ರಮವನ್ನು ಕರ್ನಾಟಕ ಸರ್ಕಾರವು ಕೈಗೊಂಡಿದ್ದು, ಇದರಲ್ಲಿ ಸರ್ಕಾರಿ ಸಲಹೆಗಾರರ (ವೈದ್ಯಕೀಯ ಮತ್ತು ಕೃಷಿ ತಜ್ಞರ) ಮಾರ್ಗದರ್ಶನ ತೆಗೆದುಕೊಂಡು ರೈತರ ಕುಂದುಕೊರತೆಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ವಿಂಗಡಣೆ ಮಾಡುವ ಮೂಲಕ |

| | | |
|---|---|---|
| | | ಅವುಗಳ ಪರಿಹಾರಕ್ಕೆ ಸೂಕ್ತ ಸಲಹೆ ನೀಡಲಾಗುವುದು. ಈ ಉಪಕ್ರಮವನ್ನು ಈ ವರ್ಷದಿಂದ ಆರಂಭಿಸಿದ್ದು, ಟೋಲ್ ಫ್ರೀ ನಂಬರ್ ಆರೋಗ್ಯ ವಾಣಿ – 104 ಮೂಲಕ ಕ್ಷೇತ್ರ ಮಟ್ಟದ ಕಾರ್ಯಕರ್ತರಿಂದ ರೈತ ಸಮುದಾಯಕ್ಕೆ ಅರಿವು ಮೂಡಿಸುವುದು ಮತ್ತು ಕುಂದುಕೊರತೆಗಳನ್ನು ನೀಗಿಸಲು ಸಲಹೆ ದೊರಕುವಂತೆ ಮಾಡಲಾಗುತ್ತಿದೆ.<br>2. ರಿಯಾಯಿತಿ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜ ಹಾಗೂ ಇತರೆ ಕೃಷಿ ಪರಿಕರಗಳನ್ನು ವಿತರಿಸಲಾಗುತ್ತಿದೆ.<br>3. ಪವರ್ ಟಿಲ್ಲರ್ ಮತ್ತು ಹೈಟೆಕ್ ಕೃಷಿ ಉಪಕರಣಗಳನ್ನು ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಘಟಕಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.<br>4. ಕೃಷಿ ತಾಂತ್ರಿಕತೆಯ ಬಗ್ಗೆ ರೈತರಿಗೆ ತರಬೇತಿ ನೀಡಲಾಗುತ್ತಿದೆ.<br>5. ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯವ ಕೃಷಿ ಬಗ್ಗೆ ಪ್ರೋತ್ಸಾಹಿಸಲಾಗುತ್ತಿದೆ.<br>6. ಮಣ್ಣು ಪರೀಕ್ಷೆ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>7. 2009–10ನೇ ಸಾಲಿನಿಂದ ಶೇ:3ರ ಬಡ್ಡಿದರದಲ್ಲಿ ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ ಕೃಷಿ ಸಾಲ ನೀಡುವ ಯೋಜನೆ ಜಾರಿಯಲ್ಲಿದೆ.<br>8. ಕೀಟನಾಶಕ, ಪೀಡೆ ನಾಶಕಗಳು ಹಾಗೂ ಸಿಂಪಡಣಾ ಯಂತ್ರಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ.<br>9. ಎಣ್ಣೆ ಕಾಳು, ದ್ವಿದಳ ಧಾನ್ಯ, ಹತ್ತಿ ಬೆಳೆಗಳಿಗೂ ಸಹ ರಿಯಾಯಿತಿ ದರದಲ್ಲಿ ವಿವಿಧ ಸಲವತ್ತುಗಳನ್ನು ಒದಗಿಸಲಾಗುತ್ತಿದೆ.<br>10. 2009–10ನೇ ಸಾಲಿನಿಂದ ಭೂ–ಚೇತನ ಎಂಬ ವೈಜ್ಞಾನಿಕ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಕೃಷಿ ಉತ್ಪನ್ನವನ್ನು ಹೆಚ್ಚಿಸುವುದು ಮತ್ತು ಖುಷ್ಕಿ ಭೂಮಿಯಲ್ಲಿ ಹೆಚ್ಚಿನ ಆದಾಯ ಗಳಿಸುವುದು ಇದರ ಮುಖ್ಯ ಧ್ಯೆಯೋದೇಶ.<br>11. ರಾಜ್ಯದಲ್ಲಿನ ಶೇ.68ರಷ್ಟು ಮಳೆಯಾಶ್ರಿತ |

| | | | |
|---|---|---|---|
| | | | ಪ್ರದೇಶದಲ್ಲಿ ಐದು ಒಣ ವಲಯಗಳನ್ನು ಗಮನದಲ್ಲಿಟ್ಟುಕೊಂಡು ಕೃಷಿ ಭಾಗ್ಯ ಎಂಬ ಹೊಸ ಯೋಜನೆಯನ್ನು 2014–15ನೇ ಸಾಲಿನಿಂದ ಅನುಷ್ಠಾನಕ್ಕೆ ತರಲಾಗಿರುತ್ತದೆ. ಮಳೆ ನೀರಿನ ಸಂರಕ್ಷಣೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. |

ಸಂ.ಕೃಇ 171 ಕೃಉಇ 2014

ಕೃಷಿ ರಾಜ್ಯ ಸಚಿವರು

**ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 274 |
| ಸದಸ್ಯರ ಹೆಸರು | : | |
| ಉತ್ತರಿಸಬೇಕಾದವರು | : | ಇಂಧನ ಸಚಿವರು |
| ಉತ್ತರಿಸುವ ದಿನಾಂಕ | : | |

| ಕ್ರಮ ಸಂಖ್ಯೆ | ಪ್ರಶ್ನೆ | | ಉತ್ತರ |
|---|---|---|---|
| (ಅ) | ಕಳೆದ 05 ವರ್ಷಗಳಿಂದ ರಾಜ್ಯದಲ್ಲಿ ಪತ್ತೆಯಾಗಿರುವ ವಿದ್ಯುತ್ ಕಳವು ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಅಂಕಿ-ಅಂಶಗಳನ್ನು ನೀಡುವುದು) | ಅ) ಮತ್ತು ಆ) | ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ಪತ್ತೆಯಾಗಿರುವ ವಿದ್ಯುತ್ ಕಳ್ಳತನದ ಪ್ರಕರಣಗಳ ಸಂಖ್ಯೆ, ವಿದ್ಯುತ್ ಕಳುವಿನ ಪ್ರಮಾಣ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ವಿಧಿಸಿರುವ ದಂಡದ (ನಷ್ಟದ) ಮೊತ್ತದ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.<br><br>ಕಳೆದ 5 ವರ್ಷಗಳ ವಿದ್ಯುತ್ ಕಳವು ಪ್ರಕರಣಗಳಲ್ಲಿ ಸುಮಾರು 2 ಲಕ್ಷಕ್ಕೂ ಮೇಲ್ಪಟ್ಟು ಅನಧಿಕೃತ ನೀರಾವರಿ ಪಂಪ್‌ಸೆಟ್ ಪಡೆದಿರುವ ಪ್ರಕರಣಗಳನ್ನು ಹೊರತುಪಡಿಸಿ ಉಳಿದಂತೆ 81.021 ವಿದ್ಯುತ್ ಕಳುವಿನ ಪ್ರಕರಣಗಳಿರುತ್ತವೆ.<br><br>ವಿದ್ಯುತ್ ಕಳ್ಳತನದಲ್ಲಿ ಭಾಗಿಯಾಗಿರುವವರ ವಿರುದ್ಧ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುತ್ತಿದೆ:-<br>• ವಿದ್ಯುಚ್ಛಕ್ತಿ ಕಾಯಿದೆ 2003ರ ಕಲಂ 135 ಮತ್ತು 138ರ ಅನ್ವಯ ಸಂಜ್ಞೆಯ (Cognizable) ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br>• ವಿದ್ಯುಚ್ಛಕ್ತಿ ಕಾಯಿದೆ 2003ರ ಕಲಂ 152(4)ರ ಅನ್ವಯ ವಿದ್ಯುತ್ ಕಳ್ಳತನದಲ್ಲಿ ಭಾಗಿಯಾಗಿರುವ ಆರೋಪಿತರು ಮೊದಲನೆಯ ಅಪರಾಧದಿಂದ ವಿಮುಕ್ತಿ ಹೊಂದಲು ದಂಡ ಹಾಗೂ ರಾಜಿ ಶುಲ್ಕ ಪಾವತಿಸಿದಲ್ಲಿ ರಾಜಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಒಂದು ವೇಳೆ ಆರೋಪಿತರು ರಾಜಿ ಮಾಡಿಕೊಳ್ಳದೇ ಇದ್ದಲ್ಲಿ ಜಾಗೃತ ದಳದ ಪೋಲೀಸ್ ಠಾಣೆಯ ವತಿಯಿಂದ ದೋಷಾರೋಪಣ ಪತ್ರವನ್ನು ತಯಾರಿಸಿ, ಸಂಬಂಧಿಸಿದ ಮಾನ್ಯ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ.<br>• ವಿದ್ಯುಚ್ಛಕ್ತಿ ಕಾಯಿದೆ 2003ರ ಕಲಂ 135ರ ಅನ್ವಯ |
| (ಆ) | ಈ ವಿದ್ಯುತ್ ಕಳವು ಪ್ರಕರಣಗಳಲ್ಲಿ ಖಾಸಗಿ ಸಂಸ್ಥೆಗಳು ಮತ್ತು ವ್ಯಕ್ತಿಗಳ ಹೆಸರುಗಳ ವಿವರಗಳನ್ನು ಹಾಗೂ ಎಷ್ಟು ಪ್ರಮಾಣದಲ್ಲಿ ಕಳವಾಗಿರುವುದನ್ನು ಪತ್ತೆ ಮಾಡಲಾಗಿದೆ; ಇದರಿಂದ ಸರಬರಾಜು ಕಂಪನೆಗಳಿಗೆ ಆಗಿರುವ ನಷ್ಟವೆಷ್ಟು; ವಿದ್ಯುತ್ ಕಳ್ಳತನದಲ್ಲಿ ಭಾಗಿಯಾಗಿರುವ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | | |

| | | | |
|---|---|---|---|
| | | | ಮಾನ್ಯ ವಿಶೇಷ ನ್ಯಾಯಾಲಯವು ಮೊದಲನೆಯ ಅಪರಾಧಕ್ಕೆ ಕನಿಷ್ಟ ಪಕ್ಷ ಮೂರು ಪಟ್ಟು ದಂಡ ಮತ್ತು ಅದೇ ಸ್ಥಾವರದಲ್ಲಿ ಎರಡನೇ ಬಾರಿ ಅಕ್ರಮ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಂಡ ಆರೋಪಿತರಿಗೆ ಆರು ಪಟ್ಟು ದಂಡ ಹಾಗೂ ಐದು ವರ್ಷಗಳವರೆಗೆ ಸಜೆ ವಿಧಿಸಲು ಅವಕಾಶವಿರುತ್ತದೆ. |
| (ಇ) | ಈ ವಿದ್ಯುತ್ ಸೋರಿಕೆಯಾಗುವುದನ್ನು ತಡೆಗಟ್ಟಲು ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಾವುವು? | | ರಾಜ್ಯದಲ್ಲಿ ವಿದ್ಯುತ್ ಕಳ್ಳತನ ಮತ್ತು ವಿದ್ಯುತ್ ಸೋರಿಕೆಯನ್ನು ತಪ್ಪಿಸಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:<br>1. ವಿದ್ಯುತ್ ಕಳವು/ಸೋರಿಕೆ ಪತ್ತೆ ಮಾಡಲು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಜಾಗೃತದಳಗಳೊಂದಿಗೆ ವಿವಿಧ ಸ್ಥಾವರಗಳನ್ನು ಕ್ರಮ ಬದ್ದವಾಗಿ ತಪಾಸಣೆ ಮಾಡಲು ರಾಜ್ಯದಲ್ಲಿ ಮೊದಲ ಬಾರಿಗೆ ವಿದ್ಯುತ್ ಕಂಪನೆಗಳಲ್ಲಿನ ಕಾರ್ಯ ಮತ್ತು ಪಾಲನಾ ವಿಭಾಗ ಹಾಗೂ ಮೀಟರ್ ಟೆಸ್ಟಿಂಗ್ ವಿಭಾಗದ ಅಧಿಕಾರಿಗಳನ್ನು ತೊಡಗಿಸಿಕೊಂಡು ವ್ಯವಸ್ಥಿತವಾದ ಹಾಗೂ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿದೆ.<br>2. ವಿದ್ಯುತ್ ವಿತರಣಾ ಮಾಗ (ಲೈನ್)ಗಳಲ್ಲಿ ನೇರವಾಗಿ ಹುಕ್ ಮಾಡುವುದನ್ನು ತಪ್ಪಿಸುವ ಸಲುವಾಗಿ ವಿದ್ಯುತ್ ಕಳ್ಳತನ ಜಾಸ್ತಿಯಿರುವ ಸ್ಥಳಗಳಲ್ಲಿ ಮೇಲ್ಮಾರ್ಗ ವಿದ್ಯುತ್ ವಾಹಕಗಳ ಬದಲಾಗಿ ಏರಿಯಲ್ ಬಂಚ್ ಕೇಬಲ್‌ಗಳನ್ನು ಬಳಸಲು ಕ್ರಮ ಕೈಗೊಳ್ಳುವುದು.<br>3. ವಿದ್ಯುತ್ ಸೋರಿಕೆ ಮತ್ತು ದುರುಪಯೋಗವನ್ನು ತಿಳಿಯುವ ಸಲುವಾಗಿ ವಿವಿಧ ಲೆವೆಲ್‌ಗಳಲ್ಲಿ ಎನರ್ಜಿ ಆಡಿಟ್ ಮಾಡಲು ಕ್ರಮ ಕೈಗೊಳ್ಳುವುದು.<br>4. ಗ್ರಾಹಕರಿಗೆ ನೀಡಲಾಗುತ್ತಿರುವ ವಿದ್ಯುತ್ ಬಿಲ್ಲಿನ ಹಿಂಬದಿಯ ಪುಟದಲ್ಲಿ ವಿದ್ಯುತ್ ಕಳ್ಳತನ ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಲು ಸಂಬಂಧಿಸಿದ ಜಾಗೃತದಳದ ದೂರವಾಣಿ ಸಂಖ್ಯೆಯನ್ನು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಮುದ್ರಣ ಮಾಡಿ ವಿತರಿಸಲಾಗುತ್ತಿದೆ. |

ಸಂಖ್ಯೆ:

ಇಂಧನ ಸಚಿವರು

**ಕರ್ನಾಟಕ ವಿಧಾನಪರಿಷತ್**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 68
ಸದಸ್ಯರ ಹೆಸರು :
ಉತ್ತರಿಸಬೇಕಾದ ದಿನಾಂಕ :
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1. | ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ರಸ್ತೆ ಮಾರ್ಜಿನ್‌ನಲ್ಲಿ ರಾಜ್ಯದಾದ್ಯಂತ ಕಟ್ಟಡಗಳಿಂದ ಮತ್ತು ಇತರೆ ಅಂಶಗಳಿಂದ ಒತ್ತುವರಿ ಆಗುತ್ತಿರುವುದು ನಿಜವೇ? | ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ರಸ್ತೆ ಮಾರ್ಜಿನ್‌ನಲ್ಲಿ (ಗಡಿ ಗುರುತು) ಕಟ್ಟಡಗಳಿಂದ ಮತ್ತು ಇತರೆ ಅಂಶಗಳಿಂದ ಒತ್ತುವರಿ ಆಗುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. |
| 2. | ನಿಜವಾಗಿದ್ದರೆ, ಈ ವಿಷಯದಲ್ಲಿ ಅಧಿಕಾರಿಗಳ ಹೊಣೆಗಾರಿಕೆ ನಿಗದಿ ಮಾಡಲಾಗಿದೆಯೆ; ಅಂತಹವರ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗಿದೆಯೇ? (ವಿವರ ನೀಡುವುದು) | ರಾಜ್ಯ ಹೆದ್ದಾರಿಗಳಲ್ಲಿ ಕಟ್ಟಡಗಳಿಂದ ಮತ್ತು ಇತರೆ ಅಂಶಗಳಿಂದ ಒತ್ತುವರಿಯಾಗಿರುವುದನ್ನು ಕರ್ನಾಟಕ ರಾಜ್ಯ ಹೆದ್ದಾರಿ ಕಾಯಿದೆ, 1964ರ ಸೆಕ್ಷನ್ 23(1)ರನ್ವಯ ಅಧಿಕೃತವಾಗಿ ದೃಢಪಡಿಸಿಕೊಳ್ಳಬೇಕಾಗಿರುವುದರಿಂದ ಈ ಹಂತದಲ್ಲಿ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ಜರುಗಿಸುವ ಸಂದರ್ಭ ಉದ್ಭವಿಸುವುದಿಲ್ಲ.<br><br>ಸಾರ್ವಜನಿಕರು ಅನಧಿಕೃತವಾಗಿ ನಿರ್ಮಿಸಿದ ಕಟ್ಟಡಗಳಿಮದ ಮತ್ತು ಇತರೆ ಅಂಶಗಳಿಂದ ಒತ್ತುವರಿಯಾಗುತ್ತಿರುವ ಬಗ್ಗೆ ಅಧಿಕೃತವಾದ ದಾಖಲೆಗಳು ಲಭ್ಯವಿಲ್ಲದಿದ್ದರಿಂದ ಒತ್ತುವರಿ ಅಧಿಕೃತವಾಗಿ ದೃಢಪಟ್ಟಿರುವುದಿಲ್ಲ. ರಾಜ್ಯ ಹೆದ್ದಾರಿಗಳಲ್ಲಿ ಕಟ್ಟಡ ಹಾಗೂ ಇತರೆ ಅಂಶಗಳಿಂದ ಆದ ಒತ್ತುವರಿಯು ಅಧಿಕೃತವಾಗಿ ದೃಢಪಟ್ಟಲ್ಲಿ, ಅಂತಹ ಒತ್ತುವರಿಗಳನ್ನು ತೆರವುಗೊಳಿಸದೇ ಇರುವ ಅಧಿಕಾರಿಗಳ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತದೆ.<br><br>ಈ ಹಿನ್ನೆಲೆಯಲ್ಲಿ ಒತ್ತುವರಿಯನ್ನು ಅಧಿಕೃತವಾಗಿ ದೃಢಪಡಿಸಿಕೊಳ್ಳುವುದಕ್ಕಾಗಿ ರಾಜ್ಯ ಹೆದ್ದಾರಿಗಳ ಗಡಿ ಗುರುತಿಸುವ ಕಾರ್ಯ ಅತೀ ಅವಶ್ಯವಾಗಿರುತ್ತದೆ. 2013–14ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮೊದಲನೇ ಹಂತದಲ್ಲಿ ಒಟ್ಟು 2205.37 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳ ಗಡಿ ಗುರುತು |

| | | |
|---|---|---|
| | | (right of way) ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. ಸರ್ವೆ ಕಾರ್ಯ ಪೂಣಗೊಂಡಿರುವ ರಸ್ತೆಗಳಲ್ಲಿ ಗುರುತಿಸಲಾದ ಒತ್ತುವರಿಗಳನ್ನು ತೆರವುಗೊಳಿಸುವ ಕುರಿತು ಕರ್ನಾಟಕ ರಾಜ್ಯ ಹೆದ್ದಾರಿ ಕಾಯಿದೆ, 1964ರನ್ವಯ ಕ್ರಮ ವಹಿಸಲು ಸಂಬಂಧಪಟ್ಟ ಹೈವೇ ಪ್ರಾಧಿಕಾರವಾದ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಅಧೀಕ್ಷಕ ಅಭಿಯಂತರರುಗಳಿಗೆ ನಿರ್ದೇಶನ ನೀಡಲಾಗಿದೆ.<br><br>2014-15ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆ, ಹಂತದಲ್ಲಿ ಒಟ್ಟು 8760.00 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗೆ ಗಡಿ ಗುರುತು (right of way) ಮಾಡಲು ಸಮಾಲೋಚಕರನ್ನು ನೇಮಿಸುವ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಬಾಕಿ ಉಳಿದ ರಸ್ತೆಗಳಿಗೆ ಮುಂದಿನ ವರ್ಷಗಳಲ್ಲಿ ಗಡಿ ಗುರುತು ಮಾಡುವ ಕಾರ್ಯ ಪೂರ್ಣಗೊಳಿಸಿ, ರಸ್ತೆಗಳಲ್ಲಿನ ಒತ್ತುವರಿಗಳನ್ನು ಅಧಿಕೃತವಾಗಿ ದೃಢಪಡಿಸಿಕೊಂಡು ನಂತರ ನಿಯಮಾನುಸಾರ ಒತ್ತುವರಿಗಳನ್ನು ತೆರವುಗೊಳಿಸಲು ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು. |
| 3. | ಮುಖ್ಯವಾಗಿ ಪಟ್ಟಣಗಳ ಹೊರಗೆ ಬೈಪಾಸ್ ರಸ್ತೆ ನಿರ್ಮಿಸಿರುವ ಕಡೆಯೂ ಅನಧಿಕೃತ ಕಟ್ಟಡ ಮತ್ತು ಒತ್ತುವರಿ ಆಗುತ್ತಿರುವುದು ನಿಜವಲ್ಲವೇ; | ರಾಜ್ಯ ಹೆದ್ದಾರಿ/ರಾಷ್ಟ್ರೀಯ ಹೆದ್ದಾರಿಗಳ ಬೈಪಾಸ್ ರಸ್ತೆಗಳಲ್ಲಿ ಒತ್ತುವರಿಯಾಗಿರುವುದು ಅಧಿಕೃತವಾಗಿ ಕಂಡುಬಂದಿರುವುದಿಲ್ಲ |
| 4. | ಇದ್ದಲ್ಲಿ ಅಂತಹ ರಸ್ತೆಗಳ ಮಾರ್ಜಿನ್‌ನನ್ನು ಕಾಪಾಡುವುದು ಸರ್ಕಾರದ ಕರ್ತವ್ಯವಲ್ಲವೇ, ಇದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ಬೈಪಾಸ್ ರಸ್ತೆಗಳಿಗೆ ಈಗಾಗಲೇ ಭೂಸ್ವಾಧಿನ ಆಗಿರುವುದರಿಂದ ಇಂತಹ ರಸ್ತೆಯು ಸಂಪೂರ್ಣ ಸರ್ಕಾರದ ಆಸ್ತಿಯಾಗಿರುತ್ತದೆ. ಇಂತಹ ರಸ್ತೆಗಳ ಮಾರ್ಜಿನನ್ನು (ಗಡಿ ಗುರುತು) ಕಾಪಾಡುವುದು ಸರ್ಕಾರದ ಕರ್ತವ್ಯವಾಗಿದ್ದು, ರಸ್ತೆಗಳಲ್ಲಿನ ಒತ್ತುವರಿ ತೆರವುಗೊಳಿಸದೇ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ಜರುಗಿಸಲಾಗುವುದು. |

**ಸಂ:** ಲೋಇ 232 ಸಿಕ್ಯೂಎನ್ 2014

ಲೋಕೋಪಯೋಗಿ ಸಚಿವರು.

## ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 487
ಸದಸ್ಯರ ಹೆಸರು :
ಉತ್ತರಿಸಬೇಕಾದವರು : ಮಾನ್ಯ ಕಾನೂನು ಸಚಿವರು
ಉತ್ತರಿಸುವ ದಿನಾಂಕ :

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ನ್ಯಾಯಾಲಯಗಳಲ್ಲಿ ಬಾಕಿ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| (ಆ) | ಹಾಗಿದ್ದಲ್ಲಿ, ಇಂತಹ ಪ್ರಕರಣಗಳ ಶೀಘ್ರ ವಿಲೇವಾಗಿ ಇಲ್ಲವೇ ಇತ್ಯರ್ಥಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಅಧೀನ ನ್ಯಾಯಾಲಯಗಳಲ್ಲಿ ಐದು ವರ್ಷಕ್ಕಿಂತ ಹಳೆಯ ಪ್ರಕರಣಗಳನ್ನು, ಅಂಗವಿಕಲರಿಗೆ ಸಂಬಂಧಿಸಿದ ಪ್ರಕರಣಗಳನ್ನು, ಪರಿಶಿಷ್ಟ ಜಾತಿ/ಪಂಗಡದ ಅಂದರೆ SC/ST(POA Act, 1989) ಅಡಿಯಲ್ಲಿನ ಪ್ರಕರಣಗಳನ್ನು, ಮೋಟಾರು ವಾಹನ ಅಪಘಾತ ಪರಿಹಾರದ ಪ್ರಕರಣಗಳನ್ನು, ಲಂಚ ನಿರೋಧಕ ಕಾಯ್ದೆಯಡಿಯಲ್ಲಿನ ಪ್ರಕರಣಗಳನ್ನು, ಹೆಚ್.ಐ.ವಿ.ಪೀಡಿತರ ಪ್ರಕರಣಗಳನ್ನು, 65 ವರ್ಷಗಳ ವಯೋಮಿತಿ ಮೀರಿದ ಕಕ್ಷಿದಾರರ ಪ್ರಕರಣಗಳನ್ನು ಹಾಗೂ NDPS ಪ್ರಕರಣಗಳನ್ನು ಆದ್ಯತೆಯ ಮೇರೆಗೆ ವಿಲೇಗೊಳಿಸಲು ಕ್ರಮಕೈಗೊಳ್ಳುವಂತೆ ರಾಜ್ಯದ ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳಿಗೆ ಮಾನ್ಯ ಉಚ್ಚ ನ್ಯಾಯಾಲಯವು ಸೂಚನೆಗಳನ್ನು ನೀಡಿರುತ್ತದೆ. |
| (ಇ) | ಹೆಚ್ಚುವರಿ ನ್ಯಾಯಾಲಯಗಳ ಸ್ಥಾಪನೆಗೆ ಸರ್ಕಾರ ಮುಂದಾಗಿದೆಯೇ; | ಹೌದು<br>1. ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ/ಅತ್ಯಾಚಾರ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಈಗಾಗಲೇ 10 ವಿಶೇಷ ನ್ಯಾಯಾಲಯಗಳನ್ನು ಸರ್ಕಾರವು ಸ್ಥಾಪಿಸಿದೆ.<br>2. ಹೊಸದಾಗಿ 125 ಅಧೀನ ನ್ಯಾಯಾಲಯಗಳನ್ನು ಸ್ಥಾಪಿಸಲು |

| | | |
|---|---|---|
| | | ಈಗಾಗಲೇ ಸರ್ಕಾರದ ಮಂಜೂರಾತಿ ನೀಡಿದೆ.<br>3. ಮುಂಬರುವ 5 ವರ್ಷಗಳಲ್ಲಿ ಒಟ್ಟು 205 ನ್ಯಾಯಾಲಯಗಳನ್ನು ಹೊಸದಾಗಿ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| (ಈ) | 3 ವರ್ಷಕ್ಕೂ ಮೇಲ್ಪಟ್ಟು ಇರುವ ವ್ಯಾಜ್ಯಗಳ ಸಂಖ್ಯೆ ಎಷ್ಟು; (ನ್ಯಾಯಾಲಯವಾರು ವಿವರ ನೀಡುವುದು)? | ದಿನಾಂಕ:01.11.2014 ರಂದು ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಒಟ್ಟು 2,44,443 ಪ್ರಕರಣಗಳು ಬಾಕಿ ಇರುತ್ತವೆ. |

ಕಾನೂನು ಸಚಿವರು

## *ಗಮನ ಸೆಳೆಯುವ ಸೂಚನೆಗಳ ಮಾದರಿಗಳು*

**ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರುದ್ರೇಶ್‌ಗೌಡ, ಇವರು ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಶಿರಾಡಿ ಘಾಟ್‌ನ ರಸ್ತೆ ದುರಸ್ತಿ ಕಾರಣ ಸಂಚರ ಬಂದ್ ಮಾಡಲಾಗಿದ್ದು, ಅದರಿಂದ ಚಾರ್ಮಾಡಿ ಘಾಟ್ ಮೂಲಕ ಸಂಚಾರಿ ದಟ್ಟಣೆ ಹೆಚ್ಚಾಗಿರುವುದರಿಂದ ರಾಷ್ಟ್ರೀಯ ಹೆದ್ದಾರಿ 234 ರಲ್ಲಿನ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಗಮನ ಸೆಳೆಯುವ ಸೂಚನೆ ಕ್ರಮ ಸಂಖ್ಯೆ 4ಕ್ಕೆ ಮಾನ್ಯ ಲೋಕೋಪಯೋಗಿ ಸಚಿವರ ಉತ್ತರ:**

ರಾಷ್ಟ್ರೀಯ ಹೆದ್ದಾರಿ 48 ಬೆಂಗಳೂರು-ಮಂಗಳೂರು ಹೆದ್ದಾರಿಯ ಶಿರಾಡಿಘಾಟ್ ಭಾಗದ ಕಿ.ಮೀ 237.00 ರಿಂದ ಕಿ.ಮೀ 250.67ರ ವರೆಗಿನ ಭಾಗದ ಕಾಂಕ್ರೀಟೀಕರಣ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ದಿನಾಂಕ:06.05.2014ರಂದು ರೂ.69.90 ಕೋಟಿ ಮೊತ್ತಕ್ಕೆ ಅನುಮೋದನೆ ದೊರಕಿದ್ದು, ಮೆ:ಓಷನ್ ಕನ್ಸ್ಟ್ರಕ್ಷನ್ ಪ್ರೈ.ಲಿ. ಗುತ್ತಿಗೆದಾರರಿಗೆ ಕಾಮಗಾರಿಕೆಯನ್ನು ವಹಿಸಲಾಗಿದೆ. ಕಾಮಗಾರಿಯ ಪ್ರಾಥಮಿಕ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಶಿರಾಡಿಘಾಟ್ ಭಾಗದ ರಸ್ತೆಯು ಕೇವಲ 9 ರಿಂದ 10 ಮೀ ಅಗಲವಿದ್ದು, ಆ ಭಾಗದಲ್ಲಿ ರಸ್ತೆಯನ್ನು ವಾಹನ ಸಂಚಾರಕ್ಕೆ ನಿಷೇದ ಮಾಡದೇ ಕಾಂಕ್ರೀಟೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳು ಸಾಧ್ಯವಾಗದೇ ಇರುವುದರಿಂದ, ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳ ಸಂಗ್ರಹಣ ಪ್ರಕ್ರಿಯೆಯು ಪೂರ್ಣಗೊಂಡ ನಂತರ ವಾಹನ ಸಂಚಾರ ನಿಷೇಧ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ ರೀತಿ ಶಿರಾಡಿಘಾಟ್ ಬಂದ್ ಮಾಡಿದಾಗ ವಾಹನ ಸಂಚಾರಕ್ಕೆ ಬದಲೀ ಮಾರ್ಗಗಳನ್ನು ಗುರುತಿಸುವ ಸಲುವಾಗಿ ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರು ರವರು ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯ ಮೈಸೂರು, ಮಂಗಳೂರು ಹಾಗೂ ಹಾಸನ ವೃತ್ತ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ರವರ ಸಮ್ಮುಖದಲ್ಲಿ ದಿನಾಂಕ:17.11.2014ರಂದು ಪೂರ್ವಭಾವಿ ಸಭೆ ನಡೆಸಿದ್ದು, ನಂತರ ಲೋಕೋಪಯೋಗಿ ಸಚಿವರ ಸಮ್ಮುಖದಲ್ಲಿ ದಿನಾಂಕ:4.12.2014ರಂದು ಸಕಲೇಶಪುರದಲ್ಲಿ ಜರುಗಿದ ಸಭೆಯಲ್ಲಿ ಮೇಲೆ ತಿಳಿಯಪಡಿಸಿದ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಸಭೆಯಲ್ಲಿ ಸಹ ಈ ಬಗ್ಗೆ ಚರ್ಚಿಸಲಾಗಿರುತ್ತದೆ. ಅಂತಿಮವಾಗಿ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ದಿನಾಂಕ:08.12.2014ರಂದು ಮಂಗಳೂರು, ಹಾಸನ, ಚಿಕ್ಕಮಗಳೂರು ಹಾಗೂ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬದಲೀ ಮಾರ್ಗಗಳನ್ನು ಗುರುತಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅದರಂತೆ ಈ ಬದಲೀ ರಾಷ್ಟ್ರೀಯ ಹೆದ್ದಾರಿ 234 ಮಾರ್ಗದ ಚಾರ್ಮಾಡಿ ಘಾಟ್ ಮೂಲಕ ಹಾದು ಹೋಗುವ ರಸ್ತೆಯಲ್ಲಿ ಸಾಮಾನ್ಯ ಬಸ್ಸುಗಳು, ಕಾರುಗಳು ಹಾಗೂ ಇನ್ನಿತರೇ ಲಘು ವಾಹನಗಳನ್ನು ಈ ರಸ್ತೆಯಲ್ಲಿ ಸಂಚರಿಸಲು ಅನುವು ಮಾಡಲು ಉದ್ದೇಶಿಸಲಾಗಿದೆ.

ಈ ಭಾಗದ ರಸ್ತೆಯು ಸಾಮಾನ್ಯವಾಗಿ ಮಧ್ಯಮ ಪಥ ಮತ್ತು ದ್ವಿಪಥ ಹೊಂದಿರುತ್ತದೆ. ಚಾರ್ಮಾಡಿಘಾಟ್‌ನ 46 ತಿರುವುಗಳ ಪೈಕಿ 6 ತೀವ್ರ ತಿರುವುಗಳು ಕಡಿಮೆ ಅಗಲವನ್ನು ಹೊಂದಿರುತ್ತದೆ. ಈ

ರಸ್ತೆಯು ಲಘು ವಾಹನ ಸಂಚಾರಕ್ಕೆ ಯೋಗ್ಯವಾಗಿದ್ದು, ಮೇಲೆ ಕಾಣಿಸಿ 46 ತಿರುವುಗಳಲ್ಲಿ ಸಾಮಾನ್ಯ ಬಸ್ಸುಗಳು ಏಕ ಕಾಲಕ್ಕೆ ಎರಡೂ ಬದಿಯಲ್ಲಿ ಹಾದು ಹೋಗಲು ಕಷ್ಟ ಸಾಧ್ಯವಿರುತ್ತದೆ.

ಶಿರಾಡ್‌ಘಾಟ್ ರಸ್ತೆಯಲ್ಲಿನ ವಾಹನ ಸಂಚಾರವನ್ನು ಸ್ಥಗಿತಗೊಳಿಸುವ ಮುಂಚೆಯೇ ಚಾರ್ಮಾಡಿಘಾಟ್ ರಾಜ್ಯ ಹೆದ್ದಾರಿಯ ಶೋಲ್ಡರ್‌ಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದಲ್ಲದೆ 2014–15ನೇ ಸಾಲಿನ ವಾರ್ಷಿಕ ನಿರ್ವಹಣೆ ಅಡಿಯಲ್ಲಿ 22 ಕಿಮೀ ಉದ್ದದ ರಸ್ತೆಯನ್ನು ಈಗಾಗಲೇ ನಿರ್ವಹಣೆ ಮಾಡಲಾಗುತ್ತಿದೆ. ಅಂತಿಮವಾಗಿ ರಾಷ್ಟ್ರೀಯ ಹೆದ್ದಾರಿ 234ರ ಚಾರ್ಮಾಡಿಘಾಟ್ ರಸ್ತೆಯಲ್ಲಿನ 46 ತಿರುವುಗಳನ್ನು (6 ತೀವ್ರ ತಿರುವುಗಳ ಸಹಿತ) ಕೇಂದ್ರ ಭೂಸಾರಿಗೆ ಮಂತ್ರಾಲಯದ ನಿರ್ದೇಶನದಂತೆ ರೂ.118.00 ಕೋಟಿ ಮೊತ್ತದಲ್ಲಿ 10 ಮೀ ಅಗಲಕ್ಕೆ ಅಗಲೀಕರಣಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಒಟ್ಟಾರೆಯಾಗಿ ರಾಷ್ಟ್ರೀಯ ಹೆದ್ದಾರಿ 234ರ ಚಾರ್ಮಾಡಿಘಾಟ್‌ನಲ್ಲಿ ಹೆಚ್ಚುರಿ ವಾಹನ ಸಂಚಾರದಿಂದ ವಾಹನ ಸವಾರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

# 81

## *ನಿಯಮ 330ರ ಮೇರೆಗೆ ಚರ್ಚೆ*

**ಅ) ಶ್ರೀ ಪಟೇಲ್ ಶಿವರಾಂ** ಅವರು ರಾಜ್ಯದಲ್ಲಿ ಹುಚ್ಚು ನಾಯಿ ಕಡಿತ ಹಾಗೂ ಹಾವು ಕಡಿತಕ್ಕೆ ಒಳಗಾಗಿರುವ ರೋಗಿಗಳಿಗೆ ಸರ್ಕಾರಿ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಜೀವನಿರೋಧಕ ಔಷಧಿ ಹಾಗೂ ಲಸಿಕೆಗಳು ಲಭ್ಯವಿಲ್ಲದಿರುವ ಬಗ್ಗೆ ಪ್ರಸ್ತಾಪಿಸುವುದು.

**(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

**ಆ) ಶ್ರೀ ಮರಿತಿಬ್ಬೇಗೌಡ** ಅವರು ರಾಜ್ಯದಲ್ಲಿ ಪ್ರಸಕ್ತ ರೈತರು ರಾಸಾಯನಿಕ ಮತ್ತು ಸಾವಯವ ಕೃಷಿ ಪದ್ಧತಿ ಬಳಕೆ ಮಾಡಿ ಬೆಳೆಗಳನ್ನು ಬೆಳೆಯುತ್ತಿದ್ದು, ಇದರಿಂದಾಗಿ ಕೃಷಿ ಉತ್ಪಾದನೆ, ಸಾರ್ವಜನಿಕರಲ್ಲಿ ಆರೋಗ್ಯ ಹಾಗೂ ಭೂಮಿಯ ಫಲವತ್ತತೆ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತಿರುವುದರಿಂದ, ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಕೃಷಿ ರಾಜ್ಯ ಸಚಿವರು)**

## ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ಶ್ರೀಯುತರುಗಳಾದ ಹೆಚ್.ಡಿ.ಕುಮಾರಸ್ವಾಮಿ, ವೈ.ಎಸ್.ವಿ.ದತ್ತ, ಹೆಚ್.ಡಿ.ರೇವಣ್ಣ, ಎನ್ ಚಲುವರಾಯಸ್ವಾಮಿ, ಕೆ.ಎಂ.ಶಿವಲಿಂಗೇಗೌಡ ಹಾಗೂ ಇತರರು ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ಪ್ರತಿ ಟನ್ ಕಬ್ಬಿನ ದರ ರೂ 2500 ನೀಡುವುದಾಗಿ ಸರ್ಕರ ಹೊರಡಿಸಿರುವ ಆದೇಶವು ಜಾರಿಯಾಗದಿರುವುದರಿಂದ ಉದ್ಭವಿಸಿರುವ ಪರಿಸ್ಥಿತಿ ಬಗ್ಗೆ

ಮತ್ತು

ಶ್ರೀಯುತರುಗಳಾದ ಜಗದೀಶ ಶೆಟ್ಟರ್, ಆರ್.ಅಶೋಕ್, ಗೋವಿಂದ ಎಂ. ಕಾರಜೋಳ, ವಿಶ್ವೇಶ್ವರ ಹೆಗಡೆ ಕಾಗೇರಿ, ಬಸವರಾಜ ಬೊಮ್ಮಾಯಿ ಹಾಗೂ ಇತರರು ರಾಜ್ಯದಲ್ಲಿ ಕಬ್ಬು ಬೆಳೆಗೆ ನಿಗದಿತ ಬೆಲೆ 2500 ರೂ ಗಳನ್ನು ಘೋಷಣೆಯಾಗಿದ್ದರೂ ಹಲವಾರು ಸಕ್ಕರೆ ಕಾರ್ಖಾನೆಗಳು ಸದರಿ ಬೆಲೆಯನ್ನು ರೈತರಿಗೆ ಪಾವತಿಸದಿರುವ ಬಗ್ಗೆ ಹಾಗೂ ರಾಜ್ಯದಲ್ಲಿ ರೈತರು ಬೆಳೆದ ಮೆಕ್ಕೆಜೋಳ, ಹತ್ತಿ, ಈರುಳ್ಳಿ, ಭತ್ತ ಮತ್ತು ಇತರ ಬೆಳೆಗಳ ಬೆಲೆ ಕುಸಿದಿರುವುದರಿಂದ ಬೆಂಬಲ ಬೆಲೆ ಘೋಷನೆ ಮಾಡುವ ಬಗ್ಗೆ ನಡೆದ ಚರ್ಚೆಗೆ ಸರ್ಕಾರದ ಉತ್ತರ.

## ಅರ್ಧ ಗಂಟೆ ಕಾಲಾವಧಿ ಚರ್ಚೆ

ಶ್ರೀ ಹೆಚ್.ಡಿ.ರೇವಣ್ಣ ಅವರು "ನಕಲು ದಾಖಲೆಗಳನ್ನು ನೀಡಿರುವ ಗುತ್ತಿಗೆದಾರರ ವಿರುದ್ಧ ಕ್ರಮ" ಬಗ್ಗೆ ದಿನಾಂಕ:09.12.2014ರಂದು ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಒಂದನೇ ಪಟ್ಟಿಯಲ್ಲಿನ ಪ್ರಶ್ನೆ ಸಂಖ್ಯೆ: 01 (158)ಕ್ಕೆ ಒದಗಿಸಿರುವ ಉತ್ತರಕ್ಕೆ ಸಂಬಂಧಿಸಿದಂತೆ ಅರ್ಧ ಗಂಟೆ ಕಾಲ ಚರ್ಚಿಸುವುದು.

*ಶಾಸನ ರಚನೆ – ಮಾದರಿ ವಿಧೇಯಕ*

## ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014

ಕೆರೆ ಅಭಿವೃದ್ಧಿ ಪ್ರಾಧಿಕಾರದ ಸ್ಥಾಪನೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ನೀರಿನ ಹಕ್ಕು, ಭಾರತ ಸಂವಿಧಾನದ 21ನೇ ಅನುಚ್ಛೇದದ ಮೂಲಕ ಖಾತರಿ ನೀಡಲಾದ ಜೀವ ಸಂರಕ್ಷಣೆ ಹಕ್ಕಿನ ಒಂದು ಭಾಗವಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯವು ಈಗಾಗಲೇ ತೀರ್ಪು ನೀಡಿರುವುದರಿಂದ;

ತೀವ್ರ ನಗರೀಕರಣ, ಕೈಗಾರಿಕೀಕರಣ ಮತ್ತು ಜನಸಂಖ್ಯಾ ಸ್ಫೋಟದಿಂದಾಗಿ ಕೆರೆಗಳು ಮತ್ತು ಕೊಳಗಳಂಥ ಜಲಮೂಲಗಳ ಒಡ್ಡುಗಳನ್ನು ಒಡೆದು ಮತ್ತು ನೀರನ್ನು ಹೊರಗೆ ಹರಿಬಿಟ್ಟು, ನಗರ ಮತ್ತು ಕೈಗಾರಿಕಾ ಪ್ರದೇಶವಾಗಿ ಭೂ ಬಳಕೆಗಾಗಿ ಪರಿವರ್ತಿಸಲಾಗುತ್ತಿರುವುದರಿಂದ;

ರಾಜ್ಯದಲ್ಲಿ ಬಹು ಸಂಖ್ಯೆಯಲ್ಲಿರುವ ಇಂತಹ ಕೆರೆಗಳು ಯಾವುವೋ ಅವು ಕೃಷಿ, ಕುಡಿಯುವ ನೀರು ಮತ್ತು ಗ್ರಾಮೀಣ ಕೈಗಾರಿಕೆಗಳ ಮುಖ್ಯ ಮೂಲಗಳಾಗಿವೆ. ಸರ್ಕಾರದ ವಿವಿಧ ಇಲಾಖೆಗಳು ಅಂದರೆ ಸಣ್ಣ ನೀರಾವರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಅರಣ್ಯ ಇಲಾಖೆ ಇತ್ಯಾದಿಗಳ ಮೂಲಕ ಇಂತಹ ಕೆರೆಗಳನ್ನು ನಿರ್ವಹಿಸಲಾಗುವುದು, ರಕ್ಷಿಸಲಾಗುವುದು, ಸಂರಕ್ಷಿಸಲಾಗುವುದು ಮತ್ತು ಜೀರ್ಣೋದ್ಧಾರಗೊಳಿಸಲಾಗುವುದು.

ಅಂಥ ಜಲಮೂಲಗಳನ್ನು ನಾಶಪಡಿಸುತ್ತಿರುವುದು, ತೀವ್ರ ನೀರಿನ ಕೊರತೆ ಮತ್ತು ಅಂತರ್ಜಲವು ಬರಿದಾಗುವುದಕ್ಕೆ ಎಡೆಮಾಡಿಕೊಟ್ಟಿರುವುದರಿಂದಾಗಿ ಜಲೀಯ ಸಸ್ಯ ಸಂಪತ್ತಿಗೆ ಮತ್ತು ಪ್ರಾಣಿ ಸಂಪತ್ತಿಗೆ ಬಾಧಕ ಉಂಟುಮಾಡುವುದಲ್ಲದೆ, ನೀರಾವರಿಗೆ, ಕುಡಿಯುವುದಕ್ಕೆ ನೀರು ಮತ್ತು ಜಾನುವಾರುಗಳ ಬಳಕೆಗೆ ನೀರಿನ ಲಭ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ ಜಲಮೂಲಗಳ ರಕ್ಷಣೆ, ಸಂರಕ್ಷಣೆ ಮತ್ತು ಪುನಶ್ಚೇತನಗೊಳಿಸುವುದು ತುರ್ತಾಗಿ ಒಂದೇ ಪ್ರಾಧಿಕಾರದ ಮೂಲಕ ಕೈಗೊಳ್ಳಬೇಕಾಗಿರುವುದುರಿಂದ;

ಮತ್ತು ಈಗ ಜಲಮೂಲಗಳ ರಕ್ಷಣೆ, ಸಂರಕ್ಷಣೆ ಮತ್ತು ಪುನಶ್ಚೇತನಗೊಳಿಸುವ ಉದ್ದೇಶವನ್ನು ಸಾಧಿಸುವುದಕ್ಕಾಗಿ ಹಾಗೂ ಅಗತ್ಯವಾದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರುವ, ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(3) ಕರ್ನಾಟಕ ರಾಜ್ಯದಲ್ಲಿ ಇರುವ ಎಲ್ಲಾ ಪೌರನಿಗಮಗಳ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಯಾವುದೇ ಅಧಿಸೂಚಿಸಿದ ಇತರ ನಿಕಾಯಗಳ ವ್ಯಾಪ್ತಿಯ ಹೊರಗೆ ಇರುವ ಎಲ್ಲಾ ಕೆರೆಗಳಿಗೆ, ಕೊಳಗಳಿಗೆ, ಸರೋವರಗಳಿಗೆ ಇದು ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಪ್ರಾಧಿಕೃತ ಅಧಿಕಾರಿ" ಎಂದರೆ, 11ನೇ ಪ್ರಕರಣದ ಅಡಿಯಲ್ಲಿ ಸರ್ಕಾರವು ನೇಮಕ ಮಾಡಿದ ಯಾವೊಬ್ಬ ಅಧಿಕಾರಿ;

(ಬಿ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ;

(ಸಿ)"ಮುಖ್ಯ ಕಾರ್ಯನಿರ್ವಹಣಾಧಿಕಾರಿ" ಎಂದರೆ, 8ನೇ ಪ್ರಕರಣದ ಅಡಿಯಲ್ಲಿ ನೇಮಕಮಾಡಲಾದ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ;

(ಡಿ) "ಹೆಸರಿಸಲಾದ ಅಧಿಕಾರಿ" ಎಂದರೆ, ಸಣ್ಣ ನೀರಾವರಿ ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಥವಾ ಅರಣ್ಯ ಇಲಾಖೆಗಳ ಪೈಕಿ ಯಾವುದೇ ಇಲಾಖೆಗೆ ಸೇರಿದ ಮತ್ತು 10ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರವು ಹಾಗೆಂದು ನೇಮಕ ಮಾಡಿದ ಅಥವಾ ಹೆಸರಿಸಲಾದ ಯಾವೊಬ್ಬ ಅಧಿಕಾರಿ;

(ಇ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಎಫ್) "ಕೈಗಾರಿಕೆ" ಎಂಬುದು, ನೀರು ಅಥವಾ ಯಾವುದೇ ದ್ರವವನ್ನು ಬಳಸುವ ಅಥವಾ ಹೊರ ಹರಿಯುವ ಚರಂಡಿ ನೀರು ಅಥವಾ ಕಾರ್ಖಾನೆಯ ಕಲ್ಮಶ ಪ್ರವಾಹಕ್ಕೆ ಎಡೆಮಾಡಿಕೊಡುವ ಯಾವುದೇ ಕಾರ್ಯಾಚರಣೆ ಅಥವಾ ಪ್ರಕ್ರಿಯೆ ಅಥವಾ ಸಂಸ್ಕರಣೆ ಮತ್ತು ವಿಲೆ ವ್ಯವಸ್ಥೆಯನ್ನು ಒಳಗೊಳ್ಳುತ್ತದೆ. ಆದರೆ ಯಾವುದೇ ಜಲವಿದ್ಯುತ್ ಘಟಕವನ್ನು ಇದು ಒಳಗೊಳ್ಳುವುದಿಲ್ಲ;

(ಜಿ) "ಕೆರೆ" ಅಥವಾ " ಕೊಳಗಳು" ಅಥವಾ "ಸರೋವರ" ಎಂದರೆ, ಅದರಲ್ಲಿ ನೀರು ಇರಲಿ ಅಥವಾ ಇಲ್ಲದಿರಲಿ, ಕಂದಾಯ ದಾಖಲೆಗಳಲ್ಲಿ ಸರ್ಕಾರಿ ಕೆರೆ, ಖರಾಬ್ ಕೆರೆ, ಕುಂಟೆ, ಕಟ್ಟೆ ಅಥವಾ ಯಾವುದೇ ಇತರ ಹೆಸರಿನಿಂದ ಕರೆಯುವ ಒಳನಾಡು ಜಲಮೂಲ ಮತ್ತು ಅದು ಹೊರ ವಲಯ ಜಲಾನಯನ ಪ್ರದೇಶಗಳನ್ನು, ಒಳ ಹರಿವುಗಳನ್ನು, ಒಡ್ಡುಗಳನ್ನು, ಅಡ್ಡಕಟ್ಟೆಗಳನ್ನು, ತೂಬುಗಳನ್ನು, ಕಾಲುವೆಗಳನ್ನು, ಹೊರ ಹರಿವುಗಳನ್ನು ಮತ್ತು ಒಳ ಹರಿವು ಹಾಗೂ ಹೊರಗೆ ಹರಿದು ಹೋಗುವ ಮುಖ್ಯ ಹರಿನೀರು ಕಾಲುವೆಗಳನ್ನು ಒಳಗೊಳ್ಳುತ್ತದೆ; ಆದರೆ, 2000 ಹೆಕ್ಟೇರ್ ಮತ್ತು ಹೆಚ್ಚಿನ ಪ್ರದೇಶವಲಯವನ್ನು ಹೊಂದಿರುವ ಮಧ್ಯಮ ನೀರಾವರಿ ಕೆರೆಗಳನ್ನು ಒಳಗೊಳ್ಳುವುದಿಲ್ಲ.

(ಹೆಚ್) "ಭೂ ನೈಸರ್ಗಿಕ ವಲಯ" ಎಂಬುದು, ನೈಸರ್ಗಿಕವಾಗಿ ಬೆಳೆದಿರಲಿ ಅಥವಾ ಸೌಂದರ್ಯವನ್ನು ಹೆಚ್ಚಿಸುವುದಕ್ಕಾಗಿ ಜಲಮೂಲಗಳಲ್ಲಿ ಬೆಳೆಸಿರಲಿ, ಆ ಎಲ್ಲಾ ಮರಗಳು, ಪೊದೆಗಳು, ಹುಲ್ಲುಗಾವಲುಗಳನ್ನು ಒಳಗೊಳ್ಳುತ್ತದೆ;

(ಐ) "ಮೇಲ್ಮೈ ಜಲ" ಎಂಬುದು, ಮೇಲೆ ಪರಿಭಾಷಿಸಲಾದಂತೆ ಕೆರೆಗಳ ಭೂಮಿಯ ಮೇಲೆ ಇರುವ ನೀರನ್ನು ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ ಇದರಲ್ಲಿ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರಲ್ಲಿ (1964ರ ಕರ್ನಾಟಕ ಅಧಿನಿಯಮ 12) ಮತ್ತು ಕರ್ನಾಟಕ ನೀರಾವರಿ ಅಧಿನಿಯಮ, 1964ರಲ್ಲಿ ಅವುಗಳಿಗೆ ಗೊತ್ತುಪಡಿಸಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ

**3. ಅಭಿವೃದ್ಧಿ ಪ್ರಾಧಿಕಾರದ ರಚನೆ.-** (1) ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ ಆದಷ್ಟು ಬೇಗನೆ, ಸರ್ಕಾರವು, ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ಎಂದು

ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಸ್ವತ್ತನ್ನು ಧಾರಣ ಮಾಡುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸಣ್ಣ ನೀರಾವರಿ ಸಚಿವರು ಪ್ರಾಧಿಕಾರದ ಅಧ್ಯಕ್ಷರಾಗಿರತಕ್ಕದ್ದು

| | |
|---|---|
| (ಬಿ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| (ಸಿ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ | ಸದಸ್ಯರು |
| (ಡಿ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| (ಇ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ | ಸದಸ್ಯರು |
| (ಎಫ್) ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| (ಜಿ) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ | ಸದಸ್ಯರು |
| (ಹೆಚ್) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | ಸದಸ್ಯರು |
| (ಐ) ಪರಿಸರ ಮತ್ತು ಜೀವಿಶಾಸ್ತ್ರ ಅಥವಾ ಕೆರೆ ಅಥವಾ ಕೊಳಗಳು ಅಥವಾ ಸರೋವರ ಸಂರಕ್ಷಣೆ ಕ್ಷೇತ್ರದಲ್ಲಿ ತಜ್ಞರಾದವರ ಪೈಕಿಯಿಂದ ಸರ್ಕಾರವು ನೇಮಕ ಮಾಡಿದ ಮೂವರು ಅಧಿಕಾರೇತರ ಸದಸ್ಯರು, ಅವರಲ್ಲಿ ಕನಿಷ್ಠ ಒಬ್ಬರು ಮಹಿಳೆ ಇರತಕ್ಕದ್ದು ಮತ್ತು ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗತಕ್ಕದ್ದು ಹಾಗೂ ಒಬ್ಬರು ಸಾಮಾನ್ಯ ಅಭ್ಯರ್ಥಿಯಾಗಿರತಕ್ಕದ್ದು. | ಅಧಿಕಾರೇತರ ಸದಸ್ಯರು |
| (ಜೆ) ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ | ಸದಸ್ಯ ಕಾರ್ಯದರ್ಶಿ ಪ್ರಾಧಿಕಾರದ ಪದನಿಮಿತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ |

(4) ಸರ್ಕಾರದ ಇಚ್ಛೆಗೊಳಪಟ್ಟು ಅಧಿಕಾರೇತರ ಸದಸ್ಯರ ಪಧಾವಧಿಯು ಸರ್ಕಾರವು ನಿಯಮಿಸಲಾದಂತೆ ಇರತಕ್ಕದ್ದು ಮತ್ತು ಅವರು ಮರು ನೇಮಕಕ್ಕೆ ಅರ್ಹರಾಗಿತಕ್ಕದ್ದಲ್ಲ.

(5) ನಿಯಮಿಸಬಹುದಾದ ಅಂಥ ಭತ್ಯೆಗಳನ್ನು ಸ್ವೀಕರಿಸಲು ಅಧಿಕಾರೇತರ ಸದಸ್ಯರು ಹಕ್ಕುಳವರಾಗಿರತಕ್ಕದ್ದು.

(6) ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರವು ರಾಜ್ಯ ಪ್ರಾಧಿಕಾರದ ನಿರ್ಣಯವನ್ನು ಕಾಲಕಾಲಕ್ಕೆ ಕಾರ್ಯಗತಗೊಳಿಸತಕ್ಕದ್ದು. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

| | | |
|---|---|---|
| (ಎ) | ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿ | ಅಧ್ಯಕ್ಷರು |
| (ಬಿ) | ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಉಪಾಧ್ಯಕ್ಷರು |
| (ಸಿ) | ಸಂಬಂಧಿಸಿದ ಜಿಲ್ಲೆಯ ಪ್ರಭಾರದಲ್ಲಿರುವ ಜಿಲ್ಲಾ ಪೋಲೀಸ್ ಅಧೀಕ್ಷಕರು | ಸದಸ್ಯ |
| (ಡಿ) | ಜಂಟಿ ನಿರ್ದೇಶಕರು, ಕೃಷಿ/ಮಣ್ಣು ಸಂರಕ್ಷಣೆ ಇಲಾಖೆ | ಸದಸ್ಯ |
| (ಇ) | ಸಂಬಂಧಪಟ್ಟ ಜಿಲ್ಲೆಯ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರು | ಸದಸ್ಯ |
| (ಎಫ್) | ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ | ಸದಸ್ಯ |
| (ಜಿ) | ಸಂಬಂಧಪಟ್ಟ ಜಿಲ್ಲೆಯ ಹಿರಿಯ ಭೂಗರ್ಭಶಾಸ್ತ್ರಜ್ಞರು ಗಣಿ ಮತ್ತು ಭೂವಿಜ್ಞಾನ ಇಲಾಖೆ | ಸದಸ್ಯ |
| (ಎಚ್) | ಸಂಬಂಧಪಟ್ಟ ಜಿಲ್ಲೆಯ ಪ್ರಭಾರದಲ್ಲಿರುವ ಸಣ್ಣ ನೀರಾವರಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರು | ಸಂಚಾಲಕರು |

**4. ಪ್ರಾಧಿಕಾರದ ಸಭೆಗಳು.–** (1)ಪ್ರಾಧಿಕಾರವು, ಕನಿಷ್ಠ ಮೂರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು.

(2) ಅಧ್ಯಕ್ಷನು ಪ್ರಾಧಿಕಾರದ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಅಥವಾ ಆತನಿಗೆ ಯಾವುದೇ ಕಾರಣಕ್ಕಾಗಿ, ಯಾವುದೇ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡುವ ಯಾವೊಬ್ಬ ಇತರ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಪ್ರಾಧಿಕಾರದ ಸಭೆಯ ಗಣಪೂರ್ತಿಯು (ಕೋರಂ) ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟಿರತಕ್ಕದ್ದು.

(4) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದುದನ್ನುಳಿದು, ಪ್ರಾಧಿಕಾರದ ಸಭೆಗಳಲ್ಲಿ ವ್ಯವಹಾರಗಳ ನಡವಳಿಗಳಿಗಾಗಿನ ಕಾರ್ಯವಿಧಾನವು ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**5. ಪ್ರಾಧಿಕಾರದ ಪ್ರಕಾರ್ಯಗಳು.–** ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಪ್ರಾಧಿಕಾರದ ಪ್ರಕಾರ್ಯಗಳು, ಈ ಮುಂದಿನಂತೆ ಇರತಕ್ಕದ್ದು,–

(1) ಕೆರೆಯ ಒತ್ತುವರಿಯನ್ನು ಪ್ರತಿಬಂಧಿಸುವುದು ಮತ್ತು ತೆರವುಗೊಳಿಸುವುದು ಒಳಗೊಂಡಂತೆ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಬರುವ ಎಲ್ಲಾ ಕೆರೆಗಳ ಮೇಲೆ ನಿಯಾಮಕ ನಿಯಂತ್ರಣವನ್ನು ಹೊಂದಿರುವುದು;

(2) ಕ್ಷೀಣಿಸುತ್ತಿರುವ ಅಂತರ್ಜಲವನ್ನು ಮರು ಭರ್ತಿಗೊಳಿಸಲು ಸಂಬಂಧಪಟ್ಟ ಸರ್ಕಾರಿ ಇಲಾಖೆಗಳು, ಸ್ಥಳೀಯ ಮತ್ತು ಇತರ ಪ್ರಾಧಿಕಾರಿಗಳ ನೆರವಿನೊಂದಿಗೆ ಸಮಗ್ರ ಸಂಪರ್ಕವನ್ನು ಸಾಧಿಸಿಕೊಳ್ಳುವ ಮೂಲಕ ಕೆರೆಗಳನ್ನು, ಕೊಳಗಳನ್ನು, ಸರೋವರಗಳನ್ನು ರಕ್ಷಿಸುವುದು, ಸಂರಕ್ಷಿಸುವುದು, ಜೀರ್ಣೋದ್ಧಾರಗೊಳಿಸುವುದು, ಪುನರ್ ರೂಪಿಸುವುದು ಮತ್ತು ಪೂರ್ವಸ್ಥಿತಿಗೆ ತರುವುದು;

(3) ಯಾವುದೇ ಅಥವಾ ಎಲ್ಲಾ ಕೆರೆಗಳಿಗೆ ಸಂಬಂಧಿಸಿದಂತೆ ಪರಿಸರಾತ್ಮಕ ಪ್ರಭಾವಗಳ ನಿರ್ಧರಣಾ ಅಧ್ಯಯನವನ್ನು ಕೈಗೊಳ್ಳುವುದು;

(4) ಭೌಗೋಳಿಕ ಮಾಹಿತಿ ವ್ಯವಸ್ಥೆಯ ಸಹಾಯದೊಂದಿಗೆ ಕೆರೆಗಳು ಮತ್ತು ಅವುಗಳ ಸುತ್ತಮುತ್ತಲ ಪ್ರದೇಶಗಳ ಪರಿಸರಾತ್ಮಕ ಯೋಜನೆ ಮತ್ತು ನಕ್ಷೆಯ ರಚನೆಯನ್ನು ಕೈಗೆತ್ತಿಕೊಳ್ಳುವುದು ಮತ್ತು ಕೆರೆಗಳು ಹಾಗೂ ಅವುಗಳ ಜಲಾನಯನಗಳ ಅಂಕಿಅಂಶಗಳನ್ನು (ಡೇಟಾಬೇಸ್) ಮತ್ತು ಅಟ್ಲಾಸನ್ನು ಸಿದ್ಧಪಡಿಸುವುದು;

(5) ಕೆರೆಗಳ ಸಮಗ್ರ ಅಭಿವೃದ್ಧಿಗೆ ಯೋಜನೆಯನ್ನು ಸಿದ್ಧಪಡಿಸುವುದು;

(6) ಸಮಪ್ರಮಾಣದ ಆರ್ಥಿಕ ಬೆಳವಣಿಗೆ ಮತ್ತು ಕೃಷಿಯಲ್ಲಿನ ಸಾಮರ್ಥ್ಯಕ್ಕಾಗಿ ಭೂಮಿ ಮತ್ತು ಜಲನಿರ್ವಹಣೆಯ ಸಮಗ್ರ ಪ್ರಭಾವದ ಮುಖಾಂತರ ಜಲಸಂಪನ್ಮೂಲ ಸಾಮರ್ಥ್ಯವನ್ನು ಮತ್ತು ಕೃಷಿ ಉತ್ಪಾದಕತೆಯನ್ನು ಪ್ರೋತ್ಸಾಹಿಸುವುದು;

(7) ರೈತರ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಮತ್ತು ಅವರ ನೈಸರ್ಗಿಕ ಸಂಪನ್ಮೂಲಗಳ ಆಧಾರದಲ್ಲಿ ಆದಾಯ, ಉದ್ಯೋಗ ಮತ್ತು ಆರ್ಥಿಕ ಸಾಮರ್ಥ್ಯವನ್ನು ಗರಿಷ್ಠಗೊಳಿಸಲು ವಿವಿದ ಕೃಷಿ ಉದ್ದಿಮೆಗಳನ್ನು ಸಂಯೋಜಿಸುವುದು, ಪ್ರೋತ್ಸಾಹಿಸುವುದು;

(8) ಹೆಚ್ಚುವರಿ ಆದಾಯದ ಉತ್ಪತ್ತಿಗಾಗಿ ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು;

(9) ಚರಂಡಿಯ ಕಶ್ಮಲಗಳನ್ನು ಕಡಿಮೆ ಮಾಡುವ ಮತ್ತು ಚರಂಡಿಯ ರೊಚ್ಚನ್ನು ಕೆರೆಗಳಿಗೆ ಹರಿಯಬಿಡದಿರುವುದರ ಮೂಲಕ ಜಲ ಜೀವವೈವಿದ್ಯ, ಜಲಪಕ್ಷಿಗಳು ಮತ್ತು ಜಲೀಯ ಸಸ್ಯಗಳನ್ನು ಸುಧಾರಿಸುವುದು ಮತ್ತು ಅವುಗಳಿಗೆ ಬೇಕಾದ ಪರಿಸರವನ್ನು (ಜೌಗು ಭೂಮಿ) ಸೃಜಿಸುವುದು;

(10) ಮಳೆ (ಸ್ಟಾರ್ಮ್) ನೀರು ಚರಂಡಿ ವ್ಯವಸ್ಥೆಯ ಮೂಲಕ ನೀರು ಸಂಗ್ರಹಣೆಗಾಗಿ ಸೌಲಭ್ಯ ಕಲ್ಪಿಸುವುದು, ವನನಿರ್ಮಾಣವೂ ಒಳಗೊಂಡಂತೆ ಸೂಕ್ತವಾದ ಮಣ್ಣಿನ ಮತ್ತು ನೀರಿನ ಸಂರಕ್ಷಣಾ ಕ್ರಮಕೈಗೊಳ್ಳುವ ಮೂಲಕ ಕೆರೆಗಳ ಹೂಳನ್ನು ಕಡಿಮೆ ಮಾಡುವುದು ಮತ್ತು ತೆಗೆದುಹಾಕುವುದು ಮತ್ತು ಅಂತರ್ಜಲದ ಜಲಸ್ತರಗಳ ಮರು ಭರ್ತಿಯನ್ನು ಹೆಚ್ಚಿಸುವುದು ಮತ್ತು ಕೊಳವೆ ಬಾವಿಗಳನ್ನು ಪುನಶ್ಚೇತನಗೊಳಿಸುವುದು;

(11) ಅವಶ್ಯಕತೆಗನುಸಾರವಾಗಿ ನೀರಿನ ಗುಣಮಟ್ಟವನ್ನು ಸುಧಾರಿಸುವುದು ಮತ್ತು ಆ ಬಗ್ಗೆ ನಿಗಾವಹಿಸುವುದು, ಕೆರೆಯ ಜೀವಿ ಪರಿಸ್ಥಿತಿಯನ್ನು ಸಂರಕ್ಷಿಸುವುದು ಹಾಗೂ ಗೃಹ ಬಳಕೆಯ ಮತ್ತು ಕೈಗಾರಿಕಾ ಮಾಲಿನ್ಯಗಳಿಂದ ಅವುಗಳನ್ನು ಸಂರಕ್ಷಿಸುವುದು;

(12) ಕುಡಿಯುವುದಕ್ಕಾಗಿ, ನೀರಾವರಿಗಾಗಿ, ಶಿಕ್ಷಣ ಅಥವಾ ಪ್ರವಾಸೋದ್ಯಮ ಉದ್ದೇಶಗಳಿಗಾಗಿ ಅಥವಾ ಪ್ರಾಧಿಕಾರವು ನಿರ್ಧರಿಸಬಹುದಾದಂಥ ಯಾವುದೇ ಇತರ ಉದ್ದೇಶಗಳಿಗಾಗಿ ಕೆರೆಗಳನ್ನು ಬಳಸಿಕೊಳ್ಳುವುದು ಅಥವಾ ಬಳಸಿಕೊಳ್ಳಲು ಅನುಮತಿಸುವುದು;

(13) ಸಮುದಾಯಗಳ ಮತ್ತು ಸ್ವಯಂ ಸೇವಾ ಏಜೆನ್ಸಿಗಳು ಕೆರೆಯ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು ಮತ್ತು ಕೆರೆಯನ್ನು ಸಂರಕ್ಷಿಸುವುದು, ಕಾಪಾಡುವುದು ಮತ್ತು ರಕ್ಷಿಸುವುದು ಇವುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು;

(14) ಸರ್ಕಾರ ಅಥವಾ ಯಾವುದೇ ಸಂಸ್ಥೆಯು ಇದಕ್ಕೆ ಕಳುಹಿಸಬಹುದಾದಂಥ ಯಾವುದೇ ವಿಷಯದ ಮೇಲೆ ಸಲಹೆಯನ್ನು ನೀಡುವುದು;

(15) ಕೆರೆಗಳಿಗೆ ಸಂಬಂಧಿಸಿದ ಎಲ್ಲಾ ಪ್ರಸಕ್ತ ವಿಷಯಗಳ ಮೇಲೆ ಸಮಗ್ರ ಮತ್ತು ಸಮನ್ವಯಗೊಳಿಸಿದ ಪ್ರಾಯೋಗಿಕ ಸಂಶೋಧನೆಗೆ ಪ್ರೋತ್ಸಾಹಿಸುವುದು;

(16) ಈ ಅಧಿನಿಯಮದ ಉದ್ದೇಶಗಳನ್ನು ಸಾಧಿಸಲು, ಪ್ರಾಧಿಕಾರವು, ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ, ಅವಶ್ಯಕ, ಅನುಕೂಲಕರ ಅಥವಾ ಆನುಷಂಗಿಕವೆಂದು ಪರಿಗಣಿಸಬಹುದಾದ ಅಂಥ ಇತರ ಕಾರ್ಯಗಳನ್ನು ಮಾಡುವುದು;

(17) ರಾಜ್ಯದಲ್ಲಿನ ಎಲ್ಲಾ ಕೆರೆಗಳ ಸಬಲ ಅಂಕಿಅಂಶ (ಸ್ಟ್ರಾಂಗ್ ಡಾಟಾಬೇಸ್)ವನ್ನು ಸೃಜಿಸುವುದು ಮತ್ತು ಕೆರೆಗಳಿಗಾಗಿ ನಡೆಯುವ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳನ್ನು ನಿಯತಕಾಲದಲ್ಲಿ ದಾಖಲಿಸುವುದು.

**6. ಪ್ರಾಧಿಕಾರದ ಅಧಿಕಾರಗಳು.–** ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಒಳಪಟ್ಟು, ಪ್ರಾಧಿಕಾರದ ಅಧಿಕಾರಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:–

(1) ಭೂಮಾಪನ ಮಾಡುವುದಕ್ಕಾಗಿ, ಗಡಿಯನ್ನು ಗುರುತಿಸುವುದಕ್ಕಾಗಿ ಮತ್ತು ಕೆರೆಗಳ ನಕ್ಷೆಯನ್ನು ತಯಾರಿಸುವುದಕ್ಕಾಗಿ ಯಾವುದೇ ಭೂಮಿಯಲ್ಲಿ ಯಾವೊಬ್ಬ ಅಧಿಕಾರಿಯನ್ನು ಪ್ರವೇಶಿಸುವಂತೆ ಮಾಡುವುದು ಅಥವಾ ಪ್ರವೇಶಿಸುವುದಕ್ಕಾಗಿ ಪ್ರಾಧಿಕರಿಸುವುದು;

(2) ಅನುದಾನಗಳು, ವಂತಿಗೆಗಳು, ಕೊಡುಗೆಗಳು, ಠೇವಣಿಗಳು ಮತ್ತು ಬಾಡಿಗೆಗಳನ್ನು ಸ್ವೀಕರಿಸುವುದು ಮತ್ತು ಸರ್ಕಾರವು ಅನುಮೋದಿಸಿದ ಅಂಥ ದರಗಳಲ್ಲಿ ಕೆರೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಶುಲ್ಕಗಳನ್ನು ಅಥವಾ ದರಗಳನ್ನು ವಿಧಿಸುವುದು;

(3) ಕೆರೆಯ ಅಭಿವೃದ್ಧಿ, ನಿರ್ವಹಣೆ, ಸಂರಕ್ಷಣೆ ಅಥವಾ ರಕ್ಷಣೆಯಲ್ಲಿ ಆಸಕ್ತಿಯಿರುವ ಯಾವುದೇ ಸರ್ಕಾರೀ ಇಲಾಖೆ ಅಥವಾ ಸಂಸ್ಥೆ ಅಥವಾ ಸಂಘ ಅಥವಾ ವ್ಯಕ್ತಿಯು ಮಾಡಿದ ಯಾವುದೇ ಯೋಜನಾ ಪ್ರಸ್ತಾವನೆಗೆ ತಾಂತ್ರಿಕ ಅನುಮೋದನೆಯನ್ನು ನೀಡುವುದು ಮತ್ತು ಸರ್ಕಾರವು ಅನುಮೋದಿಸಿದ ಅಂಥ ಚಟುವಟಿಕೆಗಳನ್ನು ಸ್ವತ: ತಾನಾಗಿಯೇ ಕೈಗೊಳ್ಳುವುದು;

(4) ಅಗತ್ಯವಿರುವಾಗಲೆಲ್ಲ ತನ್ನ ಸಭೆಗಳಿಗೆ ತಜ್ಞರನ್ನು ಆಹ್ವಾನಿಸುವುದು;

(5) ಕೆರೆಗಳ ಸಂರಕ್ಷಣೆ, ಪರಿರಕ್ಷಣೆ, ರಕ್ಷಣೆಯ ಸಂಶೋಧನೆ, ಅನುಷ್ಠಾನ, ಅಧ್ಯಯನಗಳು, ಯೋಜನೆಗಳ ಅನುಮೋದನೆ, ಮುಂತಾದವುಗಳ ಉದ್ದೇಶಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಯಾವುದೇ ಇತರ ಉದ್ದೇಶಕ್ಕಾಗಿ ಅವಶ್ಯಕವೆಂದು ಭಾವಿಸಬಹುದಾದಂಥ ಉಪ-ಸಮಿತಿಗಳನ್ನು ರಚಿಸುವುದು; ಮತ್ತು

(6) ಕೆರೆಯ ಸರಹದ್ದಿನ ಸಮೀಕ್ಷೆಯನ್ನು ಕೈಗೆತ್ತಿಕೊಳ್ಳುವುದು, ಒತ್ತುವರಿ ಯಾವುದಾದರೂ ಇದ್ದಲ್ಲಿ, ಅದನ್ನು ಪತ್ತೆ ಹಚ್ಚುವುದು ಮತ್ತು ಒತ್ತುವರಿಯನ್ನು ತೆರವುಗೊಳಿಸುವುದು ಹಾಗೂ ಕೆರೆಯ ಒತ್ತುವರಿಯನ್ನು ತಡೆಯುವುದಕ್ಕೆ ಸರಹದ್ದು ಸ್ಥಂಭಗಳನ್ನು ನಿಲ್ಲಿಸುವುದು ಮತ್ತು ಅವುಗಳಿಗೆ ಬೇಲಿಯನ್ನು ಹಾಕುವುದು.

**7. ಅಧ್ಯಕ್ಷರ ಅಧಿಕಾರಗಳು.-** ಅಧ್ಯಕ್ಷರು ಪ್ರಾಧಿಕಾರದ ಮುಖ್ಯಸ್ಥರಾಗಿರತಕ್ಕದ್ದು ಮತ್ತು,-

(ಎ) ಪ್ರಾಧಿಕಾರದ ಸಭೆಗಳನ್ನು ಕರೆಯತಕ್ಕದ್ದು, ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ನಡೆಸತಕ್ಕದ್ದು;

(ಬಿ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅವರಿಗೆ ಪ್ರದತ್ತವಾದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**8. ಮುಖ್ಯ ಕಾರ್ಯನಿರ್ವಹಣಾಧಿಕಾರಿ.–** (1) ಸಣ್ಣ ನೀರಾವರಿ ಇಲಾಖೆಯಲ್ಲಿ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ ಪ್ರಾಧಿಕಾರದ ಪದನಿಮಿತ್ತ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿರತಕ್ಕದ್ದು.

(2) ಪ್ರಾಧಿಕಾರದ ಮತ್ತು ಅಧ್ಯಕ್ಷರ ಸಾಮಾನ್ಯ ಅಧಿಕಾರಗಳಿಗೆ ಒಳಪಟ್ಟು, ಈ ಅಧಿನಿಯಮದ ಅಥವಾ ಪ್ರಾಧಿಕಾರಕ್ಕೆ ಕರ್ತವ್ಯವನ್ನು ವಿಧಿಸುವ ಅಥವಾ ಯಾವುವೇ ಅಧಿಕಾರಗಳನ್ನು ಪ್ರದಾನ ಮಾಡುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿನ ಎಲ್ಲಾ ಅಧಿಕಾರಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆತನು,–

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅವನಿಗೆ ವಿಧಿಸಿದ ಅಥವಾ ಪ್ರದಾನ ಮಾಡಿದ ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು;

(ಬಿ) ಪ್ರಾಧಿಕಾರದ ನಿರ್ಣಯಗಳನ್ನು ಜಾರಿಗೊಳಿಸತಕ್ಕದ್ದು;

(ಸಿ) ಪ್ರಾಧಿಕಾರದ ಎಲ್ಲಾ ವ್ಯವಹಾರಗಳನ್ನು ನಡೆಸತಕ್ಕದ್ದು;

(ಡಿ)ಸರ್ಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ವಹಿಸಿದ ಪ್ರಾಧಿಕಾರದ ಎಲ್ಲಾ ಯೋಜನೆಗಳನ್ನು ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದರ ಮೇಲ್ವಿಚಾರಣೆಯನ್ನು ಮತ್ತು ನಿಯಂತ್ರಣವನ್ನು ಮಾಡತಕ್ಕದ್ದು;

(ಇ) ಪ್ರಾಧಿಕಾರದ ನಿಧಿಯಿಂದ ಹಣವನ್ನು ತೆಗೆಯತಕ್ಕದ್ದು ಮತ್ತು ಬಟವಾಡೆ ಮಾಡತಕ್ಕದ್ದು;

(ಎಫ್) ಪ್ರಾಧಿಕಾರದ ಅಧಿಕಾರಿಗಳ ಮತ್ತು ನೌಕರರ ಮೇಲೆ ನಿಯಂತ್ರಣವನ್ನು ಹೊಂದಿರತಕ್ಕದ್ದು;

(ಜಿ) ಪ್ರಾಧಿಕಾರದ ಎಲ್ಲಾ ಅನುಮತಿಗಳಿಗೆ, ಆದೇಶಗಳಿಗೆ, ತೀರ್ಮಾನಗಳಿಗೆ, ನೋಟೀಸುಗಳಿಗೆ ಮತ್ತು ಇತರ ದಸ್ತಾವೇಜುಗಳಿಗೆ ತಾನು ಸಹಿ ಮಾಡಿ ದೃಢೀಕರಿಸತಕ್ಕದ್ದು;

(ಹೆಚ್) ನಿಯಮಿಸಬಹುದಾದಂತೆ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಹಾಗೂ ನಿಯಮಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**9. ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರು.–** (1) ಸರ್ಕಾರವು, ಪ್ರಾಧಿಕಾರದ ಪ್ರಕಾರ್ಯಗಳನ್ನು ದಕ್ಷತೆಯಿಂದ ನೆರವೇರಿಸುವುದಕ್ಕಾಗಿ ಅಗತ್ಯವಾಗಬಹುದಾದ ಅಂಥ ಅಧಿಕಾರಿಗಳನ್ನು ಮತ್ತು ನೌಕರರನ್ನು ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

(2) ಪ್ರಾಧಿಕಾರದ ಉದ್ದೇಶಕ್ಕಾಗಿ ನೇಮಕ ಮಾಡಲಾದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕಾತಿ ವಿಧಾನ, ಸಂದಾಯ ಮಾಡತಕ್ಕ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಇವುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**10. ಹೆಸರಿಸಲಾದ ಅಧಿಕಾರಿ.–** (1) ಪ್ರಾಧಿಕಾರವು, ಕೆರೆಗಳ, ಕೊಳಗಳ, ಸರೋವರಗಳ ರಕ್ಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಕೊಳ್ಳುವುದಕ್ಕಾಗಿ ಹಾಗೂ ಯಾವುದೇ ಇತರ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚು ಕೆರೆಗಳ, ಕೊಳಗಳ, ಸರೋವರಗಳ ಉಸ್ತುವಾರಿಯನ್ನು ವಹಿಸಿಕೊಳ್ಳುವುದಕ್ಕಾಗಿ, ಯಾವೊಬ್ಬ ಅಧಿಕಾರಿಯನ್ನು ಜಿಲ್ಲಾವಾರು ಹೆಸರಿಸಲಾದ ಅಧಿಕಾರಿಯೆಂದು ಹೆಸರಿಸಬಹುದು ಅಥವಾ ನೇಮಕ ಮಾಡಬಹುದು.

(2) ಹೆಸರಿಸಲಾದ ಅಧಿಕಾರಿಗಳು, ಈ ಅಧಿನಿಯಮದ ಅಡಿಯಲ್ಲಿಯ ಅಧಿಕಾರಗಳನ್ನು ಮತ್ತು ಪ್ರಾಧಿಕಾರವು ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ ಅವರಿಗೆ ಪ್ರದಾನ ಮಾಡಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**11. ಪ್ರಾಧಿಕೃತ ಅಧಿಕಾರಿ.–** ಸರ್ಕಾರವು, ರಾಜ್ಯ ಸಿವಿಲ್ ಸೇವೆಗಳ ಗ್ರೂಪ್–ಎ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಸರ್ಕಾರಿ ಅಧಿಕಾರಿಯನ್ನು ಅಥವಾ ನೀರಾವರಿ ಇಲಾಖೆಯ ಸಂಬಂಧಪಟ್ಟ ಜಿಲ್ಲೆಯ ಯಾವೊಬ್ಬ ಕಾರ್ಯನಿರ್ವಾಹಕ ಅಭಿಯಂತರನನ್ನು ಪ್ರಾಧಿಕೃತ ಅಧಿಕಾರಿಯಾಗಿ ನೇಮಕ ಮಾಡಬಹುದು, ಆತನು ಈ ಅಧಿನಿಯಮದ ಅಡಿಯಲ್ಲಿನ ಅಧಿಕಾರಗಳನ್ನು ಮತ್ತು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

## ಅಧ್ಯಾಯ – III

## ಕೆರೆಗಳ ರಕ್ಷಣೆ

**12. ಕೆರೆಗಳಲ್ಲಿ ನಿಷೇಧಿಸಲಾದ ಚಟುವಟಿಕೆಗಳು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು ಅಥವಾ ಸಂಸ್ಥೆಯು ಅಥವಾ ಸಂಘಟನೆಯು (ನೋಂದಾಯಿತವಾದ ಅಥವಾ ನೋಂದಾಯಿತವಾಗಿಲ್ಲದ) ಅಥವಾ ಕಂಪನಿಯು ಅಥವಾ ಫರ್ಮು ಅಥವಾ ಸಂಘವು, ಸರ್ಕಾರಿ ಇಲಾಖೆಗಳು, ನಿಗಮ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮತ್ತು ಅವುಗಳ ಏಜೆಂಟರು ಅಥವಾ ನೌಕರರು ಅಥವಾ ಅವುಗಳ ಪರವಾಗಿ ಯಾವುದೇ ಸಂಸ್ಥೆಯು,–

(1) ನೀರನ್ನು ಸಂಗ್ರಹಿಸುವುದಕ್ಕಾಗಿ ಅಥವಾ ಹಿಡಿದಿಟ್ಟುಕೊಳ್ಳುವುದಕ್ಕಾಗಿ ಅಥವಾ 5ನೇ ಪ್ರಕರಣದ (9)ನೇ ಖಂಡದಲ್ಲಿ ಹೇಳಿದ ಉದ್ದೇಶದ ಹೊರತಾಗಿ ಇತರ ಯಾವುದೇ ಉದ್ದೇಶಕ್ಕಾಗಿ ಕೆರೆಯನ್ನು ಬಳಸತಕ್ಕದ್ದಲ್ಲ;

(2) ಸರ್ಕಾರದ ಅನುಮತಿ ಇಲ್ಲದೆ ಕೆರೆ ಭೂಮಿಯ ಮೇಲೆ ಯಾವುದೇ ರಚನೆಯನ್ನು ನಿರ್ಮಿಸತಕ್ಕದ್ದಲ್ಲ, ಯಾವುದೇ ಕೆರೆ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಪ್ರವಾಹದ ವಿರುದ್ಧವಾಗಿ ಮತ್ತು ಪ್ರವಾಹದ ಹರಿವಿನಲ್ಲಿರುವ ಕೆರೆಯಲ್ಲಿ ಅಥವಾ ಕೆರೆಯಿಂದ ನೀರು ಹರಿದು ಬರುತ್ತಿರುವ ಅಥವಾ ನೀರು ಹರಿದು ಹೋಗುತ್ತಿರುವ ಸ್ವಾಭಾವಿಕ ಅಥವಾ ಸಾಮಾನ್ಯವಾಗಿ ನೀರು ಹರಿಯುತ್ತಿರುವುದಕ್ಕೆ ಯಾವುದೇ ಅಡ್ಡಿಯನ್ನು ಉಂಟು ಮಾಡತಕ್ಕದ್ದಲ್ಲ;

(3) ಕೆರೆಯ ಹೊರಗಿನ ಸರಹದ್ದಿನಿಂದ ಮೂವತ್ತು ಮೀಟರುಗಳಳೊಗೆ ಯಾವುದೇ ವಾಣಿಜ್ಯ, ಮನರಂಜನೆ ಅಥವಾ ಕೈಗಾರಿಕಾ ಸಂಕೀರ್ಣಗಳನ್ನು ಅಥವಾ ಮನೆಗಳನ್ನು ಕಟ್ಟತಕ್ಕದ್ದಲ್ಲ ಅಥವಾ ಯಾವುದೇ ಕೈಗಾರಿಕಾ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ;

(4) ವಾಹನವನ್ನು ಬಳಸಿ ಅಥವಾ ಇತರ ರೀತಿಯಲ್ಲಿ ಕೆರೆಯಲ್ಲಿ ಭಗ್ನಾವಶೇಷಗಳನ್ನು, ಪೌರ ಘನತ್ಯಾಜ್ಯಗಳನ್ನು, ಕೆಸರನ್ನು ಅಥವಾ ಮಣ್ಣನ್ನು ಅಥವಾ ದ್ರವ ತ್ಯಾಜ್ಯಗಳನ್ನು ಅಥವಾ ಯಾವುವೇ ಮಾಲಿನ್ಯಕಾರಕಗಳನ್ನು ರಾಶಿ ಹಾಕತಕ್ಕದ್ದಲ್ಲ;

(5) ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಕೆರೆಯಲ್ಲಿ ಸಂಸ್ಕರಿಸದಿರುವ ಚರಂಡಿ ನೀರನ್ನು ಹರಿಬಿಡತಕ್ಕದ್ದಲ್ಲ;

(6) ಸರ್ಕಾರದ ಅನುಮತಿ ಇಲ್ಲದೆ ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ನಿರ್ಮಿಸತಕ್ಕದ್ದಲ್ಲ;

(7) ಒಡ್ಡನ್ನು, ನಿರುಪಯುಕ್ತ ತೂಬಿನ ಮೂಲ ಎತ್ತರವನ್ನು ಕಡಿಮೆ ಮಾಡುವುದು ಒಳಗೊಂಡಂತೆ ನಿರುಪಯುಕ್ತ ತೂಬನ್ನು ಒಡೆದುಹಾಕತಕ್ಕದ್ದಲ್ಲ ಅಥವಾ ಬೇಲಿಯನ್ನು, ಗಡಿಗುರುತು ಕಲ್ಲುಗಳನ್ನು ತೆಗೆದುಹಾಕತಕ್ಕದ್ದಲ್ಲ ಅಥವಾ ಪ್ರಾಧಿಕಾರವು ನಿರ್ಮಿಸಿದ ಭಿತ್ತಿಪತ್ರಗಳನ್ನು ಅಥವಾ ಯಾವುದೇ ಸೂಚನಾ ಫಲಕಗಳನ್ನು ತೆಗೆದು ಹಾಕತಕ್ಕದ್ದಲ್ಲ; ಮತ್ತು

(8) ಕೆರೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಬಾಧಕವಾದ ಯಾವುದೇ ಕೃತ್ಯವನ್ನು ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದು, ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಯಾವುದೇ ಕೆರೆಯಿಂದ ಕುಡಿಯುವುದಕ್ಕಾಗಿ ಅಥವಾ ನೀರಾವರಿಗಾಗಿ ಅಥವಾ ಮಾನವ ಬಳಕೆಗಾಗಿನ ಯಾವುದೇ ಉದ್ದೇಶಕ್ಕಾಗಿ ನೀರನ್ನು ತೆಗೆದುಕೊಳ್ಳುವುದನ್ನು ಪ್ರತಿಬಂಧಿಸತಕ್ಕದ್ದಲ್ಲ:

ಮತ್ತು ಪರಂತು, ಈ ಅಧಿನಿಯಮದಲ್ಲಿರುವುದಾವುದೂ, ಸರ್ಕಾರವು ಮತ್ತು ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಕೆರೆಯಲ್ಲಿ ಅದರ ಲೈಸನ್ಸ್‌ದಾರನು, ಗೇಣಿದಾರನು ಅಥವಾ ಗುತ್ತಿಗೆದಾರನು (ಕೆರೆಯ ಜಲ ಜೀವ ಪರಿಸರ ವ್ಯವಸ್ಥೆಗೆ ಅಪಾಯಕಾರಿಯಾದ ಅಥವಾ ಉಪದ್ರವಕಾರಿಯಾದ ಮೀನಿನ ಹೊರತಾಗಿ) ಮೀನು ಮರಿಗಳ ಸಂಗ್ರಹಣೆಯನ್ನು ಮತ್ತು ಮಿನುಗಾರಿಕೆ ಅಭಿವೃದ್ಧಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

**13. ಕೆರೆಗಳ ರಕ್ಷಣೆ.–** (1) ಪ್ರಾಧಿಕಾರವು, ಯಾವುದೇ ಕೆರೆಯ ಅಭಿರಕ್ಷಕನಾಗಿರುವ ಅಥವಾ ಅದರ ನಿಯಂತ್ರಣವನ್ನು ಹೊಂದಿರುವ, ಸರ್ಕಾರದ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಯಾವೊಬ್ಬ ಅಧಿಕಾರಿಗೆ ಕೆರೆಯ ಸರಹದ್ದುಗಳನ್ನು ಖಾಯಂ ಆಗಿ ಗುರುತಿಸಲು ಮತ್ತು ಅಂಥ ಇತರ ಕ್ರಮಗಳನ್ನು ಕೈಗೊಳ್ಳುವುದಕ್ಕೆ ನಿರ್ದೇಶಿಸಬಹುದು.

(2) ಪ್ರಾಧಿಕಾರವು, ಯಾವುದೇ ಕೆರೆಯ ಅಭಿರಕ್ಷಕನಾಗಿರುವ ಅಥವಾ ಅದರ ನಿಯಂತ್ರಣವನ್ನು ಹೊಂದಿರುವ, ಸರ್ಕಾರಿ ಇಲಾಖೆಯ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಯಾವೊಬ್ಬ ಅಧಿಕಾರಿಗೆ, ಅಂಥ ಕೆರೆಯ ಒತ್ತುವರಿಯನ್ನು ಅಥವಾ ಅನಧಿಕೃತ ಅಧಿಭೋಗದಾರಿಕೆಯನ್ನು ತೆರವುಗೊಳಿಸುವುದಕ್ಕೆ ಮತ್ತು ಅದು ಪುನರಾವರ್ತನೆಯಾಗುವುದನ್ನು ಪ್ರತಿಬಂಧಿಸುವುದಕ್ಕಾಗಿ ಅವಶ್ಯಕವಾದ ಮತ್ತು ಯುಕ್ತವಾದಂಥ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳನ್ನು ನೀಡಬಹುದು.

(3) ಪ್ರಾಧಿಕಾರವು, ಯಾವುದೇ ಕೆರೆಯನ್ನು ಒಂದು ಪಾರಂಪರಿಕ ತಾಣವೆಂದು ಅಥವಾ ಜೈವಿಕ ಸಂರಕ್ಷಣಾ ತಾಣವೆಂದು ಅಥವಾ ರಕ್ಷಿತ ತಾಣವೆಂದು ಅಥವಾ ಅದರ ಐತಿಹಾಸಿಕ, ಜೀವಿಶಾಸ್ತ್ರ ಅಥವಾ ಪರಿಸರದ ಮಹತ್ವವನ್ನು ಗಮನಿಸಿ ಯಾವುದೇ ವಿಶೇಷ ಉದ್ದೇಶಕ್ಕಾಗಿ ಮೀಸಲಿಟ್ಟ ತಾಣವೆಂದು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದು ಮತ್ತು ಯಾವುದೇ ಇತರ ಪರ್ಯಾಯ ಬಳಕೆಯಾಗುವುದನ್ನು ತಡೆಯಬಹುದು ಹಾಗೂ ಅದರ ಉಪಯೋಗ ಯಾವುದಾದರೂ ಇದ್ದರೆ, ಅದನ್ನು ನಿರ್ದಿಷ್ಟಪಡಿಸಬಹುದು.

**14. ಸ್ವಾಧೀನಪಡಿಸಿಕೊಳ್ಳುವ ಅಧಿಕಾರಗಳು.–** (1) ಮೇಲಿನ 12ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವು ಘಟಿಸಿದೆಯೆಂದು ನಂಬಲು ಕಾರಣವಿದ್ದಾಗ ಯಾವುದೇ ಅಂಥ

ಅಪರಾಧವು ಘಟಿಸುವಲ್ಲಿ ಬಳಸಿದ ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನ ಸಾಮಾಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಇತರ ಸಾಮಾಗ್ರಿ ಅಥವಾ ವಸ್ತುವನ್ನು, ಹೆಸರಿಸಲಾದ ಅಧಿಕಾರಿಯು ಅಥವಾ ಈ ಬಗ್ಗೆ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವೊಬ್ಬ ಇತರ ಅಧಿಕಾರಿಯು (ಇದರಲ್ಲಿ ಇನ್ನು ಮುಂದೆ ಅಧಿಕೃತಗೊಳಿಸಿದ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಸ್ವಾಧೀನಪಡಿಸಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತನ್ನು, ವಾಹನವನ್ನು, ಸಾಮಾಗ್ರಿಯನ್ನು ಅಥವಾ ವಸ್ತುವನ್ನು ಸ್ವಾಧೀನಪಡಿಸಿಕೊಳ್ಳುವ ಹೆಸರಿಸಲಾದ ಅಧಿಕಾರಿ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು, ಹಾಗೆ ಅವುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೆಂದು ತಿಳಿಸುವ ಗುರುತನ್ನು ಅವುಗಳ ಮೇಲೆ ಹಾಕತಕ್ಕದ್ದು ಮತ್ತು ಸಾಧ್ಯವಾದಷ್ಟು ಬೇಗನೆ, ಸ್ವಾಧೀನಪಡಿಸಿಕೊಳ್ಳಲಾದುದಕ್ಕೆ ಸಂಬಂಧಿಸಿದಂತೆ ಅಪರಾಧದ ವಿಚಾರಣೆ ನಡೆಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟರಿಗೆ ಹಾಗೆ ಸ್ವಾಧೀನಪಡಿಸಿಕೊಂಡ ಬಗ್ಗೆ ವರದಿಯನ್ನು ಮಾಡತಕ್ಕದ್ದು. ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯು ದಂಡ ಪ್ರಕ್ರಿಯೆ ಸಂಹಿತೆ, 1973ರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು:

ಪರಂತು, ಸ್ವಾಧೀನಪಡಿಸಿಕೊಂಡ ಸ್ವತ್ತು, ವಾಹನ, ಸಾಮಾಗ್ರಿ ಅಥವಾ ವಸ್ತು ಇವುಗಳು ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರಕ್ಕೆ ಸೇರಿದ್ದೆಂದು ನಂಬಲಾಗಿದ್ದರೆ, ಅಥವಾ ಅಪರಾಧಿಯು ಯಾರೆಂಬುದು ತಿಳಿಯದಿದ್ದರೆ, ಹೆಸರಿಸಲಾದ ಅಧಿಕಾರಿಯು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ಜಿಲ್ಲಾಧಿಕಾರಿಯವರಿಗೆ ವರದಿ ಮಾಡತಕ್ಕದ್ದು.

**15. 14ನೇ ಪ್ರಕರಣದ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡ ಸ್ವತ್ತನ್ನು ಬಿಡುಗಡೆ ಮಾಡುವುದಕ್ಕೆ ಅಧಿಕಾರ.–** ಸ್ವಾಧೀನಪಡಿಸಿಕೊಂಡ ಸ್ವತ್ತು, ಮ್ಯಾಜಿಸ್ಟ್ರೇಟರ ಮುಂದೆ ಅಥವಾ ಸಂದರ್ಭಾನುಸಾರವಾಗಿ ಪ್ರಾಧಿಕೃತ ಅಧಿಕಾರಿಯ ಮುಂದೆ ಅನುಕೂಲಕರವಾಗಿ ಹಾಜರುಪಡಿಸಲು ಸಾಧ್ಯವಿಲ್ಲದಿದ್ದರೆ, ಸ್ವತ್ತಿನ ಮಾಲೀಕನು ಬ್ಯಾಂಕ್ ಗ್ಯಾರಂಟಿಯನ್ನು ಮತ್ತು ಹಾಗೆ ಬಿಡಗಡೆ ಮಾಡಲಾದ ಸ್ವತ್ತನ್ನು ಅಗತ್ಯಪಡಿಸಿದಾಗಲೆಲ್ಲಾ, ಸ್ವಾಧೀನಪಡಿಸಿಕೊಳ್ಳಲಾದುದಕ್ಕೆ ಸಂಬಂಧಿಸಿದಂತೆ ಅಪರಾಧದ ವಿಚಾರಣೆ ನಡೆಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟರ ಮುಂದೆ ಅಥವಾ ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸುವ ಬಗ್ಗೆ ಒಂದು ಮುಚ್ಚಳಿಕೆ ಬಂಧ ಪತ್ರವನ್ನು ಬರೆದುಕೊಟ್ಟ ಮೇಲೆ, ಜಿಲ್ಲಾಧಿಕಾರಿಯು ಅದನ್ನು ಬಿಡುಗಡೆ ಮಾಡಬಹುದು.

**16. ಪ್ರಾಧಿಕೃತ ಅಧಿಕಾರಿಯು ವಶಪಡಿಸಿಕೊಳ್ಳುವುದು.–** (1) 14ನೇ ಪ್ರಕರಣದ ಅಡಿಯಲ್ಲಿ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ, ಹೆಸರಿಸಲಾದ ಅಧಿಕಾರಿಯು ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ಯಾವುದೇ ಅನುಚಿತ ವಿಳಂಬವಿಲ್ಲದೆ ಪ್ರಾಧಿಕೃತ ಅಧಿಕಾರಿಯ ಮುಂದೆ ಸ್ವತ್ತನ್ನು ಹಾಜರುಪಡಿಸತಕ್ಕದ್ದು.

(2) ಸ್ವಾಧೀನಪಡಿಸಿಕೊಂಡ ಯಾವುದೇ ಸ್ವತ್ತನ್ನು ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸಿದಾಗ ಮತ್ತು ಅಂಥ ಸ್ವತ್ತನ್ನು ಉಪಯೋಗಿಸಿಕೊಂಡು 12ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧ ಮಾಡಲಾಗಿದೆ ಎಂದು ಅವನಿಗೆ ಮನವರಿಕೆಯಾದರೆ ಅಂಥ ಅಪರಾಧ ಘಟಿಸಿದುದಕ್ಕಾಗಿ ಪ್ರಾಸಿಕ್ಯೂಷನ್‌ನ್ನು ಹೂಡಿರಲಿ ಅಥವಾ ಹೂಡಿಲ್ಲದಿರಲಿ, ಪ್ರಾಧಿಕೃತ ಅಧಿಕಾರಿಯು, ಹಾಗೆ ಸ್ವಾಧೀನಕ್ಕೆ ತೆಗೆದುಕೊಂಡ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕೆ ಆದೇಶ ಮಾಡಬಹುದು.

(3) (2)ನೇ ಉಪಪ್ರಕರಣದ ಅಡಿಯಲ್ಲಿ ವಶಪಡಿಸಿಕೊಳ್ಳುವ ಆದೇಶವನ್ನು ಹೊರಡಿಸುವ ಪ್ರಾಧಿಕೃತ ಅಧಿಕಾರಿಯು, ವಶಪಡಿಸಿಕೊಂಡ ಸ್ವತ್ತನ್ನು ಅಥವಾ ಅದರ ಭಾಗವನ್ನು ಸಾರ್ವಜನಿಕ ಹರಾಜಿನಲ್ಲಿ ಮಾರಾಟಮಾಡುವುದು ಸಾರ್ವಜನಿಕ ಹಿತಾಸ್ತಕಿಯಲ್ಲಿ ಯುಕ್ತವಾಗಿದೆ ಎಂದು ಅಭಿಪ್ರಾಯ ಪಟ್ಟರೆ ಅವನು ಹಾಗೆ ಮಾರಾಟಮಾಡುವುದಕ್ಕೆ ಆದೇಶ ಮಾಡಬಹುದು.

(4) ಮೇಲೆ ಹೇಳಿದಂತೆ ಯಾವುದೇ ವಶಪಡಿಸಿಕೊಂಡ ಸ್ವತ್ತನ್ನು ಮಾರಾಟ ಮಾಡಿದಲ್ಲಿ, ಅದರ ಉತ್ಪನ್ನವನ್ನು, ಅಂಥ ಹರಾಜಿನ ವೆಚ್ಚಗಳನ್ನು ಅಥವಾ ಅದಕ್ಕೆ ಸಂಬಂಧಪಟ್ಟ ಇತರ ಪ್ರಾಸಂಗಿಕ ವೆಚ್ಚಗಳನ್ನು ಅದರಿಂದ ಕಡಿತ ಮಾಡಿಕೊಂಡು, (2)ನೇ ಉಪಪ್ರಕರಣದ ಅಡಿಯಲ್ಲಿ ವಶಪಡಿಸಿಕೊಳ್ಳಲು ಮಾಡಿದ ಆದೇಶವನ್ನು 17 ಅಥವಾ 18ನೇ ಪ್ರಕರಣದ ಅಡಿಯಲ್ಲಿಯ ಆದೇಶದ ಮೂಲಕ ತಳ್ಳಿಹಾಕಿದಲ್ಲಿ ಅಥವಾ ರದ್ದುಪಡಿಸಿದಲ್ಲಿ, ಅದರ ಮಾಲೀಕನಿಗೆ ಅಥವಾ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅದನ್ನು ಯಾರಿಂದ ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

**17. ವಶಪಡಿಸಿಕೊಳ್ಳುವುದಕ್ಕೆ ಮೊದಲು ಕಾರಣ ಕೇಳಿ ನೋಟೀಸು ನೀಡುವುದು.–** (1) ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನ ಸಾಮಾಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತನ್ನು ವಶಪಡಿಸಿಕೊಳ್ಳುವ ಯಾವುದೇ ಆದೇಶವನ್ನು, ಅದನ್ನು ಯಾರಿಂದ ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಲಿಖಿತ ನೋಟೀಸನ್ನು ಕೊಟ್ಟ ಹೊರತು ಮತ್ತು ಆತನ ಆಕ್ಷೇಪಣೆಗಳು,

ಯಾವುದಾದರೂ ಇದ್ದರೆ, ಅವುಗಳನ್ನು ಪರಿಗಣಿಸಿದ ತರುವಾಯದ ಹೊರತು, 14ನೇ ಪ್ರಕರಣದ ಅಡಿಯಲ್ಲಿ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ:

ಪರಂತು, ಮೋಟಾರು ವಾಹನವನ್ನು ವಶಪಡಿಸಿಕೊಳ್ಳುವ ಯಾವುದೇ ಆದೇಶವನ್ನು, ಅದರ ನೋಂದಾಯಿತ ಮಾಲೀಕರಿಗೆ ಲಿಖಿತ ನೋಟೀಸನ್ನು ಕೊಡುವುದು ಕಾರ್ಯಸಾಧ್ಯವೆಂದು ಪ್ರಾಧಿಕೃತ ಅಧಿಕಾರಿಯು ಅಭಿಪ್ರಾಯಪಟ್ಟರೆ, ಹಾಗೆ ನೋಟೀಸನ್ನು ಕೊಟ್ಟ ತರುವಾಯದ ಹೊರತು ಮತ್ತು ಆತನ ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರಿಗಣಿಸಿದ ಹೊರತು, ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನ ಸಾಮಾಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತನ್ನು ವಶಪಡಿಸಿಕೊಳ್ಳುವ ಯಾವುದೇ ಆದೇಶವನ್ನು ಅಂಥ ಸಾಧನದ, ಸಲಕರಣೆಯ, ಯಂತ್ರೋಪಕರಣದ, ಉಪಕರಣದ, ಸಾಧನಸಾಮಗ್ರಿಯ, ದೋಣಿಯ, ವಾಹನದ ಅಥವಾ ಇತರ ಯಾವುದೇ ಸ್ವತ್ತಿನ ಮಾಲೀಕನು ಅದನ್ನು ಸ್ವತ: ಮಾಲೀಕನ, ಅವನ ಏಜೆಂಟನ, ಯಾರಾದರೂ ಇದ್ದಲ್ಲಿ, ಮತ್ತು ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನ ಸಾಮಾಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತಿನ ಪ್ರಭಾರದಲ್ಲಿರುವ ವ್ಯಕ್ತಿಯ ತಿಳುವಳಿಕೆಗೆ ಬಾರದೆ ಅಥವಾ ಸಮ್ಮತಿಯಿಂದ ಬಳಸಲಾಗಿದೆ ಎಂದು ಮತ್ತು ಅವರಲ್ಲಿ ಪ್ರತಿಯೊಬ್ಬರು ಅಂತಹ ಬಳಕೆಗೆ ಪ್ರತಿಯಾಗಿ ಎಲ್ಲಾ ಸೂಕ್ತ ಮತ್ತು ಅವಶ್ಯಕ ಮುಂಜಾಗ್ರತೆಗಳನ್ನು ತೆಗೆದುಕೊಂಡಿದ್ದಾರೆಂದು ಪ್ರಾಧಿಕೃತ ಅಧಿಕಾರಿಗೆ ಮನವರಿಕೆಯಾಗುವಂತೆ ರುಜುವಾತುಪಡಿಸಿದರೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**18. ಪುನರೀಕ್ಷಣೆ.–** ಮುಖ್ಯ ಕಾರ್ಯನಿರ್ವಹಣಾಧಿಕಾರಿಯು, 14ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯು ಮೀರುವುದಕ್ಕೆ ಮೊದಲು, ಆ ಆದೇಶದ ದಾಖಲೆಗಳನ್ನು ಸ್ವತ: ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು ಹಾಗೂ ಆತನು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯನ್ನು ಮಾಡಬಹುದು ಅಥವಾ ಅಂಥ ವಿಚಾರಣೆಯನ್ನು ಮಾಡುವುದಕ್ಕೆ ಕಾರಣರಾಗಬಹುದು ಮತ್ತು ಅಂಥ ಆದೇಶಗಳನ್ನು ಹೊರಡಿಸಬಹುದು.

**19. ಅಪೀಲು.–** (1) 16ನೇ ಪ್ರಕರಣ ಅಥವಾ 18ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ಆದೇಶವು ಆತನಿಗೆ ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಬೇಕಾಗಿದೆಯೋ ಆ ಆದೇಶದಲ್ಲಿ ಯಾವ ಸ್ವತ್ತನ್ನು ಅಭಿಗ್ರಹಿಸಲಾಗಿದೆಯೋ ಅಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಸೆಷನ್ಸ್ ನ್ಯಾಯಾಧೀಶರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು ಮತ್ತು ಸೆಷನ್ಸ್ ನ್ಯಾಯಾಧೀಶರು, ಅಪೀಲುದಾರ ಮತ್ತು ಪ್ರಾಧಿಕೃತ ಅಧಿಕಾರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ ತರುವಾಯ, ಅಂಥ ಆದೇಶವನ್ನು ಸ್ಥಿರೀಕರಿಸಲು, ಮಾರ್ಪಡಿಸಲು ಅಥವಾ ರದ್ದುಪಡಿಸಲು ಅವಶ್ಯಕವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಹೊರಡಿಸತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ಸೆಷನ್ಸ್ ನ್ಯಾಯಾಧೀಶರ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸತಕ್ಕದ್ದಲ್ಲ.

**20. ಇತರ ಶಿಕ್ಷೆಗಳೊಂದಿಗೆ ಹಸ್ತಕ್ಷೇಪ ಮಾಡದ ಮುಟ್ಟುಗೋಲಿನ ಆದೇಶ.–** 15 ಅಥವಾ 16 ಅಥವಾ 17 ಅಥವಾ 18ನೇ ಪ್ರಕರಣದ ಅಡಿಯಲ್ಲಿಯ ಯಾವುದೇ ಮುಟ್ಟುಗೋಲಿನ ಆದೇಶವು, ಈ ಅಧಿನಿಯಮದಡಿಯಲ್ಲಿ, ಅದರ ಮೂಲಕ ಕ್ರಮ ಜರುಗಿಸುವುದಕ್ಕೆ ಬದ್ಧನಾಗಿರುವ ವ್ಯಕ್ತಿಗೆ ಶಿಕ್ಷೆಯ ವಿಧಿಸುವಿಕೆಯನ್ನು ಪ್ರತಿಬಂಧಿಸತಕ್ಕದ್ದಲ್ಲ.

**21. ಸ್ವತ್ತು ಸರ್ಕಾರದಲ್ಲಿ ನಿಹಿತವಾದಾಗ ಮುಟ್ಟುಗೋಲು.–** 15 ಅಥವಾ 16 ಅಥವಾ 17 ಅಥವಾ 18ನೇ ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತಿನ ಮುಟ್ಟುಗೋಲಿಗಾಗಿ ಆದೇಶವನ್ನು ಹೊರಡಿಸಿದಾಗ ಮತ್ತು ಅಂಥ ಆದೇಶವು, ಅಂಥ ಸ್ವತ್ತಿನ ಪೂರ್ಣ ಅಥವಾ ಅದರ ಭಾಗದ ಸಂಬಂಧದಲ್ಲಿ ಅಂತಿಮವಾದಾಗ, ಅಂಥ ಸ್ವತ್ತು ಅಥವಾ ಸಂದರ್ಭಾನುಸಾರವಾಗಿ ಅದರ ಭಾಗವು (ಅಥವಾ 16ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಇದನ್ನು ಮಾರಾಟ ಮಾಡಿದಲ್ಲಿ ಅದರ ಉತ್ಪನ್ನವು) ಅದರ ಎಲ್ಲಾ ಋಣಭಾರ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು:

ಪರಂತು, ಯಾವೊಬ್ಬ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡದ ಹೊರತು ಈ ಪ್ರಕರಣದಡಿಯಲ್ಲಿ ಅಂಥ ಯಾವುದೇ ಪ್ರತಿಕೂಲ ಪ್ರಭಾವದ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**22. ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಅಧಿಕಾರ.–** (1) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವಿಕೆ) ಅಧಿನಿಯಮ, 1974ರಲ್ಲಿ (1974ರ ಕರ್ನಾಟಕ ಅಧಿನಿಯಮ 32) ಏನೇ ಒಳಗೊಂಡಿದ್ದರೂ, ಯಾವುದೇ ಕೆರೆಯ ಭೂಮಿ ಅಥವಾ ಅದರ ಭಾಗವನ್ನು ಅನಧಿಕೃತವಾಗಿ ಅಧಿಭೋಗದಲ್ಲಿಟ್ಟುಕೊಂಡಿದ್ದಾನೆಂದು ಕಂಡುಬರುವಂಥ ಯಾವೊಬ್ಬ ವ್ಯಕ್ತಿಯನ್ನು, ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಆತನ ವಿರುದ್ಧ ಕೈಗೊಳ್ಳಬಹುದಾದ ಅಂಥ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ, ಹೆಸರಿಸಲಾದ ಅಧಿಕಾರಿಯು ಅಥವಾ ಈ ಸಂಬಂಧದಲ್ಲಿ ಪ್ರಾಧಿಕಾರದಿಂದ ಪ್ರಾಧಿಕೃತನಾದ ಯಾವೊಬ್ಬ ಇತರ ಅಧಿಕಾರಿಯು ಕ್ಷಿಪ್ರವಾಗಿ ಹೊರಹಾಕತಕ್ಕದ್ದು:

ಪರಂತು, ಯಾವೊಬ್ಬ ವ್ಯಕ್ತಿಯನ್ನು, ಆತನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡದ ಹೊರತು, ಈ ಉಪಪ್ರಕರಣದಡಿಯಲ್ಲಿ ಹೊರಹಾಕತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಹೊರಹಾಕುವ ಪ್ರತೀ ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ಕೆರೆಯ ಭೂಮಿಯನ್ನು ಅನಧಿಕೃತವಾಗಿ ಅಧಿಭೋಗಿಸುತ್ತಿರುವ ವ್ಯಕ್ತಿಗೆ ಅದರ ಪ್ರತಿಯನ್ನು ನೀಡುವ ಅಥವಾ ಒಪ್ಪಿಸುವ ಮೂಲಕ ಅಥವಾ ನೋಂದಾಯಿತ ಅಂಚೆಯ ಮೂಲಕ ಅದರ ಪ್ರತಿಯನ್ನು ರವಾನಿಸುವ ಮೂಲಕ ಅಥವಾ ಆತನು, ಇದನ್ನು ಸ್ವೀಕರಿಸಲು ನಿರಾಕರಿಸಿದಲ್ಲಿ ಅಥವಾ ಜಾರಿಯನ್ನು ತಪ್ಪಿಸಿದಲ್ಲಿ, ಆತನ ಅಧಿಭೋಗದಲ್ಲಿರುವ ಸ್ವತ್ತಿನ ಪ್ರಮುಖ ಭಾಗದ ಮೇಲೆ ಅಂಟಿಸುವ ಮೂಲಕ ಅಥವಾ ಆ ಪ್ರದೇಶದಲ್ಲಿ ವ್ಯಾಪಕ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಜಾರಿಮಾಡತಕ್ಕದ್ದು.

(3) ಕೆರೆಯ ಭೂಮಿಯಲ್ಲಿ ಬೆಳೆದಿರುವ ಮರಗಳನ್ನು ಒಳಗೊಂಡಂತೆ ಯಾವುದೇ ಬೆಳೆಯನ್ನು ಮತ್ತು ಅನಧಿಕೃತ ಅಧಿಭೋಗದಾರನು ಅದರ ಮೇಲೆ ನಿರ್ಮಿಸಿರುವ ಯಾವುದೇ ಕಟ್ಟಡಗಳು ಅಥವಾ ಇತರ ನಿರ್ಮಿತಿಗಳನ್ನು, (1)ನೇ ಉಪಪ್ರಕರಣದಲ್ಲಿ ಹೊರಹಾಕುವಿಕೆಯ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳೊಳಗೆ ಆತನು ತೆರವುಗೊಳಿಸದಿದ್ದಲ್ಲಿ, ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ಕ್ಷಿಪ್ರವಾಗಿ ತೆರವುಗೊಳಿಸಲು ಬದ್ಧವಾಗಿರತಕ್ಕದ್ದು.

(4) (3)ನೇ ಉಪಪ್ರಕರಣದ ಅಡಿಯಲ್ಲಿ ಮುಟ್ಟುಗೋಲನ್ನು ಹಾಕಿಕೊಂಡ ಯಾವುದೇ ಸ್ವತ್ತು ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಯುಕ್ತವೆಂದು ಭಾವಿಸಬಹುದಾದ ಅಂಥ ರೀತಿಯಲ್ಲಿ ಇದನ್ನು ವಿಲೆ ಮಾಡಬಹುದು ಮತ್ತು ಯಾವುದೇ ಬೆಳೆ, ಮರಗಳು, ಕಟ್ಟಡಗಳು ಅಥವಾ ಇತರ ನಿರ್ಮಿತಿಗಳನ್ನು ತೆಗೆದುಹಾಕುವುದಕ್ಕಾಗಿನ ಖರ್ಚನ್ನು ಮತ್ತು ಕೆರೆಯನ್ನು ಅದರ ಪೂರ್ವಸ್ಥಿತಿಗೆ ತರಲು ಭರಿಸುವ ವೆಚ್ಚವನ್ನು, ಹೊರಹಾಕಿದ ವ್ಯಕ್ತಿಯಿಂದ ಭೂ ಕಂದಾಯದ ಬಾಕಿಯಂತೆ ಅಥವಾ ನಿಯಮಿಸಬಹುದಾದ ಅಂಥ ಯಾವುದೇ ಇತರ ರೀತಿಯಲ್ಲಿ ವಸೂಲಿಮಾಡತಕ್ಕದ್ದು.

(5) ಹೆಸರಿಸಲಾದ ಅಧಿಕಾರಿಯ ಅಥವಾ (1)ನೇ ಉಪಪ್ರಕರಣದಡಿಯಲ್ಲಿ ಪ್ರಾಧಿಕಾರವು ಪ್ರಾಧಿಕೃತಗೊಳಿಸಿದ ಯಾವೊಬ್ಬ ಇತರ ಅಧಿಕಾರಿಯ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಅಂಥ ಆದೇಶದ ವಿರುದ್ಧ ಅಪೀಲನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಪ್ರಾಧಿಕಾರಕ್ಕೆ ಸಲ್ಲಿಸಬಹುದು ಮತ್ತು (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವು, ಅಂಥ ಅಪೀಲಿನಲ್ಲಿನ ನಿರ್ಣಯಕ್ಕೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

## ಅಧ್ಯಾಯ – IV

## ದಂಡಗಳು ಮತ್ತು ಪ್ರಕ್ರಿಯೆಗಳು

**23. 12ನೇ ಪ್ರಕರಣದ ಉಲ್ಲಂಘನೆಗೆ ದಂಡ.–** 12ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅಂಥ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಇಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಅಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**24. ಯಾರೇ ಅಧಿಕಾರಿಗಳಿಗೆ ಅಡ್ಡಿಯುಂಟುಮಾಡುವುದಕ್ಕಾಗಿ ದಂಡ.–** ಯಾವೊಬ್ಬನು,–

(1) ಯಾವೊಬ್ಬ ಹೆಸರಿಸಲಾದ ಅಧಿಕಾರಿಯ, ಪ್ರಾಧಿಕೃತ ಅಧಿಕಾರಿಯ, ಅಧಿಕೃತಗೊಂಡ ಅಧಿಕಾರಿಯ ಅಥವಾ ಪ್ರಾಧಿಕಾರದ ಅಥವಾ ಪ್ರಾಧಿಕೃತಗೊಳಿಸಿದ ಅಥವಾ ಹೆಸರಿಸಲಾದ ಅಧಿಕಾರಿಯ ಆದೇಶಗಳು

ಅಥವಾ ನಿರ್ದೇಶನಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯನ್ನು, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ಆತನ ಅಧಿಕಾರವನ್ನು ಚಲಾಯಿಸುವುದನ್ನು, ಆತನ ಪ್ರಕಾರ್ಯಗಳನ್ನು ನಿರ್ವಹಿಸುವುದನ್ನು ಅಥವಾ ಆತನ ಕರ್ತವ್ಯಗಳನ್ನು ನೆರವೇರಿಸುವುದನ್ನು ಅಡ್ಡಿಪಡಿಸುತ್ತಾನೊ; ಅಥವಾ

(2) ಪ್ರಾಧಿಕಾರದ ಯಾವುದೇ ಕಾಮಗಾರಿಗಳನ್ನು ಅಥವಾ ಸ್ವತ್ತನ್ನು ಹಾನಿಪಡಿಸುತ್ತಾನೊ; ಅಥವಾ

(3) ಪ್ರಾಧಿಕಾರದ ಅಥವಾ ಯಾವೊಬ್ಬ ಪ್ರಾಧಿಕೃತ ಅಧಿಕಾರಿಯ ಅಥವಾ ಹೆಸರಿಸಲಾದ ಅಧಿಕಾರಿಯ ನಿರ್ದೇಶನಗಳ ಮೂಲಕ ಅಥವಾ ಅವುಗಳ ಅಡಿಯಲ್ಲಿ ಭೂಮಿಯಲ್ಲಿ ನಿಲ್ಲಿಸಿರುವ ಯಾವುದೇ ಸ್ತಂಭ, ಕಂಬ ಅಥವಾ ಗೂಟವನ್ನು ಅಥವಾ ಸಿದ್ಧಪಡಿಸಿದ, ಬರೆದ ಅಥವಾ ಇಟ್ಟಿರುವ ಯಾವುದೇ ನೋಟೀಸನ್ನು ಅಥವಾ ಇತರೆ ವಿಷಯವನ್ನು ಹಾಳು ಮಾಡುತ್ತಾನೊ, ಕೆಡಹುತ್ತಾನೊ, ತೆಗೆದುಹಾಕುತ್ತಾನೊ, ಹಾನಿಗೊಳಿಸುತ್ತಾನೊ ಅಥವಾ ವಿರೂಪಗೊಳಿಸುತ್ತಾನೊ,

– ಆತನು ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**25. ಕೆರೆಯ ಕಾನೂನುಬಾಹಿರ ಅಧಿಭೋಗವನ್ನು ವರದಿ ಮಾಡಲು ತಪ್ಪಿದ್ದಕ್ಕಾಗಿ ದಂಡ.–** ಕೆರೆಯ ಕಾನೂನುಬಾಹಿರ ಅಧಿಭೋಗದಾರಿಕೆ ಅಥವಾ ಬಳಕೆ ಅಥವಾ ಕೆರೆಯ ನಿರ್ವಹಣೆ ಮತ್ತು ಸಂರಕ್ಷಣೆಯನ್ನು ವರದಿ ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಟ್ಟಿರುವ ಪ್ರಾಧಿಕಾರದ ಅಥವಾ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಒಬ್ಬ ಅಧಿಕಾರಿ ಅಥವಾ ನೌಕರನು, ಅಂಥ ಕಾನೂನುಬಾಹಿರ ಅಧಿಭೋಗದಾರಿಕೆಯನ್ನು ವರದಿ ಮಾಡಲು ಅಥವಾ ತೆರವುಗೊಳಿಸಲು ಕ್ರಮ ಕೈಗೊಳ್ಳಲು ಅಥವಾ ಕೆರೆಯನ್ನು ನಿರ್ವಹಿಸಲು ಅಥವಾ ರಕ್ಷಿಸಲು ತಪ್ಪಿದಲ್ಲಿ, ಇಲಾಖಾ ವಿಚಾರಣೆಯ ತರುವಾಯ ಅಂಥ ಶಿಸ್ತು ದಂಡದಿಂದ ಅಥವಾ ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**26. ಅಕ್ರಮ ಅಭಿಗ್ರಹಣಕ್ಕಾಗಿ ಶಿಕ್ಷೆ.–** ಈ ಅಧಿನಿಯಮದ ಅಡಿಯಲ್ಲಿ ಮುಟ್ಟುಗೋಲಿಗೆ ಹೊಣೆಯಾಗಿರುವ ಯಾವುದೇ ಸ್ವತ್ತನ್ನು ಅಭಿಗ್ರಹಿಸುವ ಸೋಗಿನಲ್ಲಿ ತೊಂದರೆ ಕೊಡುವುದಕ್ಕಾಗಿ ಮತ್ತು ಅನವಶ್ಯಕವಾಗಿ ಯಾವುದೇ ಸ್ವತ್ತನ್ನು ಅಭಿಗ್ರಹಣ ಮಾಡುವ ಯಾವೊಬ್ಬ ಅಧಿಕಾರಿಯು, ಸಂಬಂಧಪಟ್ಟ

ಶಿಸ್ತು ನಿಯಮಗಳಲ್ಲಿ ನಿಯಮಿಸಲ್ಪಟ್ಟಂತೆ ಅಂಥ ದಂಡದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**27. ಅಧಿನಿಯಮದ ಕೆಲವು ಉಪಬಂಧಗಳ ಉಲ್ಲಂಘನೆಗಾಗಿ ದಂಡ.–** ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ, ಯಾವುವೇ ನಿಯಮಗಳನ್ನು ಅಥವಾ ವಿನಿಯಮಗಳನ್ನು, ನಿರ್ದಿಷ್ಟ ದಂಡವನ್ನು ಕಲ್ಪಿಸದಿರದ ಯಾವುವೇ ಇತರ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೀಡಿರುವ ಯಾವುದೇ ಆದೇಶ ಅಥವಾ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ, ಆತನು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**28. 23ನೇ ಪ್ರಕರಣದ ಅಡಿಯಲ್ಲಿ ಹಿಂದಿನ ಅಪರಾಧ ನಿರ್ಣಯದ ತರುವಾಯ ಹೆಚ್ಚಿಸಲಾದ ದಂಡ.–** 23ನೇ ಪ್ರಕರಣದ ಅಡಿಯಲ್ಲಿ ಯಾವುದೇ ಅಪರಾಧಕ್ಕಾಗಿ ಅಪರಾಧ ನಿರ್ಣೀತನಾದ ಯಾವೊಬ್ಬ ವ್ಯಕ್ತಿಯು, ಅದೇ ಉಪಬಂಧದ ಉಲ್ಲಂಘನೆಯನ್ನು ಒಳಗೊಳ್ಳುವ ಒಂದು ಅಪರಾಧಕ್ಕೆ ಪುನ: ತಪ್ಪಿತಸ್ಥನೆಂದು ಕಂಡುಬಂದಲ್ಲಿ, ಎರಡನೇ ಮತ್ತು ತರುವಾಯದ ಪ್ರತಿಯೊಂದು ನಿರ್ಣಿತ ಅಪರಾಧಕ್ಕೆ ಆರು ತಿಂಗಳುಗಳಿಗೆ ಕಡಿಮೆಯಲ್ಲದ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**29. ಅಪರಾಧಕ್ಕೆ ದುಷ್ಪ್ರೇರಣೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ದಂಡನೀಯವಾಗುವ ಯಾವುದೇ ಅಪರಾಧವನ್ನು ದುಷ್ಪ್ರೇರಿಸುವ ಅಥವಾ ಯಾವುದೇ ಅಂಥ ಅಪರಾಧವನ್ನು ಮಾಡುವುದಕ್ಕೆ ಪ್ರಯತ್ನಿಸಿದ ಯಾವೊಬ್ಬ ವ್ಯಕ್ತಿಯು ಅಂಥ ಅಪರಾಧಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ದಂಡದಿಂದ ದಂಡಿತನಾಗತಕ್ಕದ್ದು.

**30. ಕಂಪೆನಿಗಳಿಂದ/ನಿವಾಸಿ ಸಂಘದಿಂದ ಅಪರಾಧಗಳು.–** (1) ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಒಂದು ಕಂಪೆನಿಯು/ನಿವಾಸಿಗಳ ಸಂಘವು ಮಾಡಿದ್ದಲ್ಲಿ, ಅಪರಾಧವನ್ನು ಮಾಡಿದ ಸಮಯದಲ್ಲಿ ಪ್ರಭಾರದಲ್ಲಿದ್ದ ಮತ್ತು ಕಂಪೆನಿಯು/ನಿವಾಸಿಗಳ ಸಂಘದ ವ್ಯವಹಾರವನ್ನು ನಡೆಸಲು

ಜವಾಬ್ದಾರನಾದ ಪ್ರತಿಯೊಬ್ಬ ವ್ಯಕ್ತಿಯು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆತನ ವಿರುದ್ಧ ಕೈಗೊಳ್ಳುವ ಕ್ರಮಗಳಿಗೆ ಆತನು ಬದ್ಧನಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡನೀಯನಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದಾವುದೂ, ಅಂಥ ವ್ಯಕ್ತಿಯು ತನ್ನ ತಿಳುವಳಿಕೆಗೆ ಬಾರದೇ ಅಪರಾಧವು ನಡೆದಿದೆ ಅಥವಾ ಅಂಥ ಅಪರಾಧವು ನಡೆಯುವುದನ್ನು ತಪ್ಪಿಸಲು ಎಲ್ಲಾ ಯುಕ್ತ ಕಾರ್ಯತತ್ಪರತೆಯನ್ನು ತಾನು ಚಲಾಯಿಸಿದ್ದೆನೆಂದು ರುಜುವಾತು ಪಡಿಸಿದಲ್ಲಿ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡಕ್ಕೆ ಆತನನ್ನು ಹೊಣೆ ಮಾಡತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,

(ಎ) ‘ಕಂಪೆನಿ’ ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ;

(ಬಿ) ‘ನಿರ್ದೇಶಕ’ ಎಂದರೆ, ಒಂದು ಫರ್ಮ್‌ನ ಸಂಬಂಧದಲ್ಲಿ ಫರ್ಮ್‌ನಲ್ಲಿಯ ಪಾಲುದಾರ, ಸಂಘದ ಸಂಬಂಧದಲ್ಲಿ, ಸಂಘದ ಕಾರ್ಯದರ್ಶಿ ಅಥವಾ ಸಂದರ್ಭಾನುಸಾರವಾಗಿ ಅಧ್ಯಕ್ಷ.

**31. ಸರ್ಕಾರಿ ಇಲಾಖೆಯಿಂದ ಅಪರಾಧಗಳು.–** ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮಾಡಿದ್ದಲ್ಲಿ, ಸರ್ಕಾರದ ಇಲಾಖೆಯ ಮುಖ್ಯಸ್ಥ ಅಥವಾ ಅಂಥ ಸ್ಥಳೀಯ ಅಥವಾ ಸಂದರ್ಭಾನುಸಾರವಾಗಿ ಇತರ ಪ್ರಾಧಿಕಾರದ ಪ್ರಭಾರದಲ್ಲಿರುವ (ಯಾವುದೇ ಹೆಸರಿನಿಂದ ಕರೆಯಲ್ಪಡುವ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಆತನ ವಿರುದ್ಧ ಕೈಗೊಳ್ಳಲಾಗುವ ಕ್ರಮಗಳಿಗೆ ಆತನು ಬದ್ಧನಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡನೀಯನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಇರುವುದಾವುದೂ, ಅಂಥ ಇಲಾಖೆಯ ಮುಖ್ಯಸ್ಥ ಅಥವಾ ಸಂದರ್ಭಾನುಸಾರವಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ತನ್ನ ತಿಳುವಳಿಕೆಗೆ ಬಾರದೇ ಅಪರಾಧವು ನಡೆದಿದೆ ಮತ್ತು ಅಂಥ ಅಪರಾಧ ನಡೆಯುವುದನ್ನು ತಪ್ಪಿಸಲು ಎಲ್ಲಾ ಯುಕ್ತ ಕಾರ್ಯತತ್ಪರತೆಯನ್ನು ತಾನು ಚಲಾಯಿಸಿದ್ದೆನೆಂದು ಸಾಬೀತು ಪಡಿಸಿದಲ್ಲಿ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡಕ್ಕೆ ಆತನನ್ನು ಹೊಣೆ ಮಾಡತಕ್ಕದ್ದಲ್ಲ.

**32. ವಾರಂಟು ಇಲ್ಲದೆ ದಸ್ತಗಿರಿ.–** (1) ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಒಂದು ವರ್ಷ ಅಥವಾ ಅದಕ್ಕೂ ಹೆಚ್ಚಿನ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧವನ್ನು ಎಸಗಿದ್ದಾನೆಂದು ಯುಕ್ತವಾಗಿ ಸಂದೇಹಿತನಾಗಿದ್ದು, ಆತನು ತನ್ನ ಹೆಸರು ಮತ್ತು ನಿವಾಸದ ವಿಳಾಸವನ್ನು ಕೊಡಲು ನಿರಾಕರಿಸಿದಲ್ಲಿ ಅಥವಾ ಮೋಸವೆಂದು ನಂಬುವುದಕ್ಕೆ ಕಾರಣವಿರುವ ಹೆಸರು ಅಥವಾ ನಿವಾಸದ ವಿಳಾಸವನ್ನು ನೀಡಿದ್ದಲ್ಲಿ ಅಥವಾ ಆತನು ತಲೆಮರೆಸಿಕೊಳ್ಳುತ್ತಾನೆಂದು ನಂಬಲು ಕಾರಣವಿದ್ದಲ್ಲಿ ಆ ವ್ಯಕ್ತಿಯನ್ನು ಯಾವೊಬ್ಬ ಪೊಲೀಸ್ ಅಧಿಕಾರಿ ಅಥವಾ ಹೆಸರಿಸಲಾದ ಅಧಿಕಾರಿ ಅಥವಾ ಅಧಿಕೃತ ಅಧಿಕಾರಿಯು, ಮ್ಯಾಜಿಸ್ಟ್ರೇಟರನ ಆದೇಶಗಳಿಲ್ಲದೆ ಮತ್ತು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ದಸ್ತಗಿರಿಯಾದ ಯಾವೊಬ್ಬ ವ್ಯಕ್ತಿಗೆ, ಆದಷ್ಟು ಬೇಗನೆ, ಅಂಥ ದಸ್ತಗಿರಿಯ ಆಧಾರಗಳ ಮಾಹಿತಿಯನ್ನು ನೀಡತಕ್ಕದ್ದು ಮತ್ತು ದಸ್ತಗಿರಿಯ ಸ್ಥಳದಿಂದ ಮ್ಯಾಜಿಸ್ಟ್ರೇಟರನ ನ್ಯಾಯಾಲಯಕ್ಕೆ ಪ್ರಯಾಣಕ್ಕಾಗಿ ಅವಶ್ಯವಾಗುವ ಸಮಯವನ್ನು ಹೊರತುಪಡಿಸಿ, ಅಂಥ ದಸ್ತಗಿರಿಯ ಇಪ್ಪತ್ನಾಲ್ಕು ಗಂಟೆಯೊಳಗೆ ಆ ಪ್ರಕರಣದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಹತ್ತಿರದ ಮ್ಯಾಜಿಸ್ಟ್ರೇಟರ್ ಎದುರಿಗೆ ಹಾಜರುಪಡಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟರನ ಪ್ರಾಧಿಕಾರವಿಲ್ಲದೆ ಸದರಿ ಅವಧಿಗೆ ಮೀರಿ ಅಭಿರಕ್ಷೆಯಲ್ಲಿ ಬಂಧಿಸಿಡತಕ್ಕದ್ದಲ್ಲ.

**33. ದಸ್ತಗಿರಿಯಾದ ಒಬ್ಬ ವ್ಯಕ್ತಿಯನ್ನು ಬಾಂಡ್ ಮೇಲೆ ಬಿಡುಗಡೆಗೊಳಿಸುವ ಅಧಿಕಾರ.–** 32ನೇ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಯಾವೊಬ್ಬ ಪೊಲೀಸ್ ಅಧಿಕಾರಿ ಅಥವಾ ಹೆಸರಿಸಲಾದ ಅಧಿಕಾರಿಯು, ಆ ಪ್ರಕರಣದ ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟರನ ಮುಂದೆ ಅಥವಾ ಹತ್ತಿರದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಹಾಜರಾಗಲು ಹಾಗೆ ಅಗತ್ಯಪಡಿಸಿದರೆ ಮತ್ತು ಆಗ ಅಂಥ ವ್ಯಕ್ತಿಯು, ಸೂಕ್ತ ಭದ್ರತೆಯೊಂದಿಗೆ ಒಂದು ಬಾಂಡ್ ಅನ್ನು ಬರೆದುಕೊಟ್ಟಲ್ಲಿ, ಆ ವ್ಯಕ್ತಿಯನ್ನು ಬಿಡುಗಡೆಗೊಳಿಸಬಹುದು.

**34. ಅಪರಾಧಗಳ ಸಂಜ್ಞೇಯತೆ.–** ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.

## ಅಧ್ಯಾಯ V

## ಪ್ರಾಧಿಕಾರದ ನಿಧಿ, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**35. ಪ್ರಾಧಿಕಾರದ ನಿಧಿ.–** (1) ಸರ್ಕಾರವು ಕಾಲಕಾಲಕ್ಕೆ ಮೊತ್ತವನ್ನು ಪಾವತಿಸಬಹುದಾದ, ಅಂಥ ತನ್ನದೇ ಆದ ಒಂದು ನಿಧಿಯನ್ನು ಪ್ರಾಧಿಕಾರವು ಹೊಂದಿರತಕ್ಕದು ಮತ್ತು ಎಲ್ಲಾ ಇತರ ಸ್ವೀಕೃತಿಗಳನ್ನು (ದಾನಗಳು, ಅನುದಾನ, ದಂಡಗಳು, ಶುಲ್ಕಗಳು, ಚಾರ್ಜುಗಳು ಅಥವಾ ಅನ್ಯಥಾ) ಪ್ರಾಧಿಕಾರದ ನಿಧಿಗೆ ವರ್ಗಾಯಿಸತಕ್ಕದ್ದು ಮತ್ತು ಪ್ರಾಧಿಕಾರಕ್ಕೆ ಎಲ್ಲಾ ಸಂದಾಯಗಳನ್ನು ಅದರ ಮೂಲಕ ಮಾಡತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ತನ್ನ ಕರ್ತವ್ಯಗಳನ್ನು ನೆರವೇರಿಸಲು ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಂಥ ಮೊತ್ತವನ್ನು ಖರ್ಚು ಮಾಡಬಹುದು. ಅಂಥ ಮೊತ್ತವನ್ನು ಪ್ರಾಧಿಕಾರದ ನಿಧಿಯಿಂದ ಸಂದಾಯ ಮಾಡಬಹುದಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**36. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಪ್ರಾಧಿಕಾರವು ಕ್ರಮಬದ್ಧವಾದ ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರ ಪಟ್ಟಿಕೆಯನ್ನು ತಯಾರಿಸತಕ್ಕದ್ದು.

(2) ರಾಜ್ಯ ಲೆಕ್ಕಪತ್ರ ಇಲಾಖೆ ಅಥವಾ ಸರ್ಕಾರವು ನೇಮಿಸಿದ ಅಂಥ ಲೆಕ್ಕಪರಿಶೋಧಕರು ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ಮಾಡತಕ್ಕದ್ದು.

(3) ಸದರಿ ಲೆಕ್ಕಪರಿಶೋಧಕರು ಪ್ರಾಧಿಕಾರದ ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ವೋಚರುಗಳು ಮತ್ತು ಇತರ ದಾಖಲೆಗಳು ಹಾಗೂ ಕಾಗದಪತ್ರಗಳನ್ನು ಹಾಜರುಪಡಿಸಲು ಒತ್ತಾಯಪಡಿಸುವ ಮತ್ತು ಪ್ರಾಧಿಕಾರದ ಯಾವುವೇ ಕಚೇರಿಗಳನ್ನು ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷವು ಕೊನೆಗೊಂಡಂದಿನಿಂದ ಒಂಬತ್ತು ತಿಂಗಳುಗಳೊಳಗೆ ಒಂದು ಲೆಕ್ಕಪರಿಶೋಧಿತ ಪ್ರತಿಯೊಂದಿಗೆ ಲೆಕ್ಕಪರಿಶೋಧಕರ ವರದಿಯ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(5) ಸರ್ಕಾರವು, (4)ನೇ ಉಪಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ತರುವಾಯ, ಆದಷ್ಟು ಬೇಗನೇ, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**37. ವಾರ್ಷಿಕ ವರದಿ.–** ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿಯ, ಈ ಅಧಿನಿಯಮದ ಅಡಿಯಲ್ಲಿ ತನ್ನ ಚಟುವಟಿಕೆಗಳ ಪೂರ್ಣ ಮಾಹಿತಿಯನ್ನು ಕೊಡುವ ವಾರ್ಷಿಕ ವರದಿಯನ್ನು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ತಯಾರಿಸತಕ್ಕದ್ದು ಮತ್ತು ಹಿಂದಿನ ಹಣಕಾಸು ವರ್ಷದ ಕೊನೆಯ ದಿನಾಂಕದಿಂದ ನಾಲ್ಕು ತಿಂಗಳುಗಳೊಳಗೆ ಅದರ ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸರ್ಕಾರವು, ಅಂಥ ವರದಿಯನ್ನು ಹಿಂದಿನ ಹಣಕಾಸು ವರ್ಷದ ಕೊನೆಯ ದಿನಾಂಕದಿಂದ ಒಂಭತ್ತು ತಿಂಗಳುಗಳ ಅವಧಿಯೊಳಗೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**38. ಆಯವ್ಯಯ.–** ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷದ ಅವಧಿಯಲ್ಲಿ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ಸಮಯದಲ್ಲಿ, ಮುಂಬರುವ ಹಣಕಾಸು ವರ್ಷದ ಸಂಬಂಧದಲ್ಲಿ ಅಂದಾಜು ಸ್ವೀಕೃತಿ ಮತ್ತು ವೆಚ್ಚವನ್ನು ತೋರಿಸುವ ಆಯವ್ಯಯವನ್ನು ತಯಾರಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

**39. ಪ್ರಾಧಿಕಾರದ ಸಾಲಪಡೆಯುವ ಅಧಿಕಾರ.–** ಪ್ರಾಧಿಕಾರವು, ಸರ್ಕಾರದ ಅನುಮತಿಯೊಂದಿಗೆ ಅಥವಾ ಅದಕ್ಕೆ ಸರ್ಕಾರವು ನೀಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ನಿಬಂಧನೆಗಳಿಗೆ ಅನುಸಾರವಾಗಿ, ಸಾಲಗಳು ಅಥವಾ ಬಾಂಡುಗಳು, ಡಿಬೆಂಚರುಗಳನ್ನು ನೀಡುವ ಅಥವಾ ಈ ಅಧಿನಿಯಮದ ಅಡಿಯಲ್ಲಿ ತನ್ನ ಯಾವುದೇ ಅಥವಾ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸಲು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಇತರ ಲಿಖಿತ ಪತ್ರಗಳನ್ನು ನೀಡುವ ಮೂಲಕ ಯಾವುದೇ ಮೂಲದಿಂದ ಹಣವನ್ನು ಸಾಲ ಪಡೆಯಬಹುದು.

**40. ಕರಾರು ಮಾಡುವ ವಿಧಾನ.–** ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಕ್ರಮಕೈಗೊಳ್ಳಲು ಅಧಿಕಾರವನ್ನು ಹೊಂದಿರುವ ವಿಷಯಗಳ ಸಂಬಂಧದಲ್ಲಿ, ಆತನು ಪ್ರಾಧಿಕಾರದ ಪರವಾಗಿ ಕರಾರುಗಳು ಮತ್ತು ಒಪ್ಪಂದಗಳನ್ನು ಕಾರ್ಯಗತಗೊಳಿಸತಕ್ಕದ್ದು.

ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಮೊತ್ತದವರೆಗೆ ಪ್ರಾಧಿಕಾರದ ಪರವಾಗಿ ಅಂಥ ಕರಾರುಗಳು ಅಥವಾ ಒಪ್ಪಂದಗಳನ್ನು ಆತನು ಕಾರ್ಯಗತಗೊಳಿಸಬಹುದು. ಇತರ ಎಲ್ಲಾ ಪ್ರಕರಣಗಳಲ್ಲಿ ಪ್ರಾಧಿಕಾರದ ಮಂಜೂರಾತಿಯೊಂದಿಗೆ ಮಾತ್ರವೇ ಆತನು ಒಂದು ಕರಾರು ಅಥವಾ ಒಪ್ಪಂದವನ್ನು ಕಾರ್ಯಗತಗೊಳಿಸತಕ್ಕದ್ದು.

## ಅಧ್ಯಾಯ – VI

## ಸಂಕೀರ್ಣ

**41. ಸರ್ಕಾರದ, ಸ್ಥಳೀಯ ಪ್ರಾಧಿಕಾರಗಳು ಇತ್ಯಾದಿಗಳ ಅಧಿಕಾರಿಗಳು ನೆರವು ನೀಡುವುದು.–** ಸರ್ಕಾರದ, ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಎಲ್ಲಾ ಅಧಿಕಾರಿಗಳು ಪ್ರಾಧಿಕಾರಕ್ಕೆ, ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅಗತ್ಯವಾಗಬಹುದಾದ ಅಂಥ ನೆರವು ಮತ್ತು ಸಹಾಯವನ್ನು ನೀಡತಕ್ಕದ್ದು ಮತ್ತು ಅಂಥ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅವಶ್ಯವಾಗಬಹುದಾದ ಅಂಥ ದಾಖಲೆಗಳು, ಭೂಪಟಗಳು, ನಕ್ಷೆಗಳು ಮತ್ತು ಇತರ ದಸ್ತಾವೇಜುಗಳ ತಪಾಸಣೆ ಮತ್ತು ಪರೀಕ್ಷೆಗಾಗಿ ಪ್ರಾಧಿಕಾರಕ್ಕೆ ಅಥವಾ ಈ ಬಗ್ಗೆ ಪ್ರಾಧಿಕೃತನಾದ ಯಾವೊಬ್ಬ ಇತರ ಅಧಿಕಾರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

**42. ಅಧಿಕಾರ ವ್ಯಾಪ್ತಿಯ ಪ್ರತಿಷೇಧ.–** 14ನೇ ಪ್ರಕರಣದ ಅಡಿಯಲ್ಲಿ ಯಾವುದೇ ಸಾಧನ, ಸಲಕರಣೆ, ಯಂತ್ರೋಪಕರಣ, ಉಪಕರಣ, ಸಾಧನ ಸಾಮಗ್ರಿ, ದೋಣಿ, ವಾಹನ ಅಥವಾ ಇತರ ಯಾವುದೇ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿದ್ದಲ್ಲಿ, 16ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯು ಅಥವಾ 18ನೇ ಪ್ರಕರಣದ ಅಡಿಯಲ್ಲಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ಅಥವಾ 19ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿಯ ಕೇಳುವಿಕೆಯನ್ನು (ಹಿಯರಿಂಗ್) ಮಾಡುವ ಸೆಷನ್ಸ್ ನ್ಯಾಯಾಧೀಶರು, ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ 2) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇನ್ನಾವುದೇ ಇತರ ಕಾನೂನಿನ ಅನುಸಾರವಾಗಿ ಅಧಿಕಾರಗಳನ್ನು ಚಲಾಯಿಸುವ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಇತರ ಯಾವುದೇ ಅಧಿಕಾರಿ, ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರವು ಅಂಥ ಸ್ವತ್ತಿನ ಅಭಿರಕ್ಷೆ, ಸ್ವಾಧೀನತೆ, ಬಟವಾಡೆ, ವಿಲೆ ಅಥವಾ ಹಂಚಿಕೆಗೆ ಸಂಬಂಧಿಸಿದಂತೆ ಆದೇಶ ಮಾಡುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

**43. ಅಧಿಕಾರಿಗಳು ಸಾರ್ವಜನಿಕ ನೌಕರರಾಗಿರುವುದು.–** ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರನ್ನು ಮತ್ತು ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಚಲಾಯಿಸುವ ಯಾವೊಬ್ಬ ಇತರ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರನೆಂದು ಭಾವಿಸತಕ್ಕದ್ದು.

**44. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಥವಾ ವಿನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕಾದುದನ್ನು ಲೋಪ ಮಾಡಿದ ಕಾರ್ಯದ ಸಂಬಂಧದಲ್ಲಿ, ಪ್ರಾಧಿಕಾರದ, ಅಥವಾ ಪ್ರಾಧಿಕಾರದ ಅಧ್ಯಕ್ಷರ ಅಥವಾ ಸದಸ್ಯರ ಅಥವಾ ಪ್ರಾಧಿಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರರ ಅಥವಾ ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರವು ನೇಮಕ ಮಾಡಿದ ಅಥವಾ ಪ್ರಾಧಿಕೃತಗೊಳಿಸಿದ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಯಾವುದೇ ಇತರ ಕಾನೂನು ವ್ಯವಹರಣೆಗಳನ್ನು ನಡೆಸಲು ಅವಕಾಶ ಇರತಕ್ಕದ್ದಲ್ಲ.

**45. ಕರ್ತವ್ಯದ ನೆಪದಲ್ಲಿ ಮಾಡಿದ ಕಾರ್ಯಗಳ ಸಂಬಂಧದಲ್ಲಿ ದಾವೆಗಳು ಅಥವಾ ಪ್ರಾಸಿಕ್ಯೂಷನ್.–** (1) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರದ ಹೆಸರಿಸಲಾದ ಅಧಿಕಾರಿಯು, ಪ್ರಾಧಿಕೃತ ಅಧಿಕಾರಿಯು ಅಥವಾ ಯಾವೊಬ್ಬ ಇತರ ಅಧಿಕಾರಿಯು ಅಥವಾ ನೌಕರನು ಮಾಡಿದ್ದಾನೆಂದು ಆಪಾದಿಸಲಾದ ಅಪರಾಧದ ಅಥವಾ ಅಂಥ ಹೆಸರಿಸಲಾದ ಅಧಿಕಾರಿಯು, ಪ್ರಾಧಿಕೃತ ಅಧಿಕಾರಿಯು ಅಥವಾ ಇತರ ಅಧಿಕಾರಿಯು ಅಥವಾ ನೌಕರನು ಅಂಥ ಕರ್ತವ್ಯದ ನೆಪದಲ್ಲಿ ಅಥವಾ ಕರ್ತವ್ಯವನ್ನು ಅಥವಾ ಅಧಿಕಾರವನ್ನು ಮೀರಿ ಯಾವುದೇ ಕಾರ್ಯವನ್ನು ಮಾಡಿದ್ದಾನೆಂದು ಆಪಾದಿಸಲಾದ ತಪ್ಪಿನ ಯಾವುದೇ ಪ್ರಕರಣದಲ್ಲಿ ಅಪರಾಧವನ್ನು ಎಸಗಿದ್ದಲ್ಲಿ ಅಥವಾ ಮಾಡಿದ್ದಲ್ಲಿ, ಅದು ಮೇಲೆ ಹೇಳಿದ ಸ್ವರೂಪದ್ದಾಗಿದೆಯೆಂದು ನ್ಯಾಯಾಲಯಕ್ಕೆ ಕಂಡುಬಂದಲ್ಲಿ, ಸರ್ಕಾರದ ಪೂರ್ವ ಮಂಜೂರಾತಿಯ ಹೊರತಾಗಿ ಅವರ ವಿರುದ್ಧ ಪ್ರಾಸಿಕ್ಯೂಷನ್ ಅಥವಾ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

(2) ಮೇಲೆ ಹೇಳಿದಂತೆ ಅಂಥ ತಪ್ಪಿನ ಕಾರಣದಿಂದಾಗಿ, ಉದ್ದೇಶಿಸಲಾದ ದಾವೆಯ ಸಂದರ್ಭದಲ್ಲಿ, ದಾವೆಯನ್ನು ಹೂಡಲು ಉದ್ದೇಶಿಸಿದ ವ್ಯಕ್ತಿಯು, ಫಿರ್ಯಾದಿನಲ್ಲಿ ಹೇಳಿದ ತಪ್ಪಿನ ಬಗ್ಗೆ ಸಾಕಷ್ಟು

ವಿವರಣೆಯೊಂದಿಗೆ ಉದ್ದೇಶಿತ ದಾವೆಯ ದಿನಾಂಕದಿಂದ ಕನಿಷ್ಠ ಮೂರು ತಿಂಗಳ ನೋಟೀಸನ್ನು, ಆರೋಪಿತ ತಪ್ಪು ಮಾಡಿದವನಿಗೆ ನೀಡಲು ಬದ್ಧನಾಗಿರತಕ್ಕದ್ದು, ಅದಕ್ಕೆ ತಪ್ಪಿದಲ್ಲಿ ಅಂಥ ದಾವೆಯನ್ನು ನಡೆಸತಕ್ಕದ್ದಲ್ಲ.

(3) ವಾದಪತ್ರದಲ್ಲಿ ಪ್ರತಿವಾದಿಗೆ, ಮೇಲೆ ಹೇಳಿದಂತೆ ನೋಟೀಸನ್ನು ಜಾರಿ ಮಾಡಲಾಗಿದೆಯೆಂಬುದನ್ನು ಮತ್ತು ಅಂಥ ಜಾರಿಯ ದಿನಾಂಕವನ್ನು ತಿಳಿಸತಕ್ಕದ್ದು ಹಾಗೂ ಪ್ರತಿವಾದಿಯು ಪರಿಹಾರವನ್ನು ನೀಡಿದ್ದರೆ, ಹಾಗೆ ನೀಡಿದ ಪರಿಹಾರ ಎಷ್ಟು ಎಂಬುದನ್ನು ಅದರಲ್ಲಿ ತಿಳಿಸತಕ್ಕದ್ದು. ಸದರಿ ನೋಟೀಸಿನ ಒಂದು ಪ್ರತಿಯನ್ನು, ಅದನ್ನು ಜಾರಿ ಮಾಡಿದ ಸಮಯ ಮತ್ತು ವಿಧಾನದ ಬಗ್ಗೆ ಘೋಷಣಾ ಪತ್ರವನ್ನು ಹಿಂಬರಹ ಮಾಡಿ ವಾದಿಯು ವಾದಪತ್ರಕ್ಕೆ ಲಗತ್ತಿಸತಕ್ಕದ್ದು.

**46. ಅಧಿಕಾರಗಳ ಪ್ರತ್ಯಾಯೋಜನೆ.–** ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ತನಗೆ ಅಥವಾ ತನ್ನ ಅಧೀನದಲ್ಲಿರುವ ಯಾವೊಬ್ಬ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳ ಪೈಕಿ ಯಾವುವೇ ಅಧಿಕಾರಗಳನ್ನು, ಅಧಿಸೂಚನೆಯ ಮೂಲಕ, ಯಾವೊಬ್ಬ ಅಧಿಕಾರಿಗೆ ಅಥವಾ ತನ್ನ ಅಧೀನದಲ್ಲಿರುವ ಪ್ರಾಧಿಕಾರಕ್ಕೆ, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಿರ್ಬಂಧಗಳು ಮತ್ತು ಷರತ್ತುಗಳು, ಯಾವುದಾದರೂ ಇದ್ದಲ್ಲಿ, ಅವುಗಳಿಗೆ ಒಳಪಟ್ಟು, ಅಂಥ ಅಧಿಕಾರಿ ಅಥವಾ ಪ್ರಾಧಿಕಾರವು ಚಲಾಯಿಸಲು ಪ್ರತ್ಯಾಯೋಜಿಸಬಹುದು.

**47. ಇತರ ಕಾನೂನುಗಳ ಪರಿಣಾಮ.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳು, ಈ ಅಧಿನಿಯಮವನ್ನು ಹೊರತುಪಡಿಸಿ, ಯಾವುದೇ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ಅಸಂಗತವಾಗಿರುವುದು ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಇರುವುದಾವುದೂ, ಈ ಅಧಿನಿಯಮದ ಅಡಿಯಲ್ಲಿ ಅಪರಾಧವಾಗುವ, ಯಾವುದೇ ಕಾರ್ಯ ಅಥವಾ ಲೋಪಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಪ್ರಾಸಿಕ್ಯೂಟ್ ಮಾಡುವುದರಿಂದ ಮತ್ತು ದಂಡವನ್ನು ವಿಧಿಸುವುದರಿಂದ ಅಥವಾ ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಉಪಬಂಧ ಕಲ್ಪಿಸಿದುದನ್ನು ಹೊರತುಪಡಿಸಿ, ಯಾವುದೇ ಹೆಚ್ಚಿನ ಶಿಕ್ಷೆಗೆ ಅಥವಾ ದಂಡಕ್ಕೆ ಅಂಥ ಇತರ ಕಾನೂನಿನ ಅಡಿಯಲ್ಲಿ ಹೊಣೆಗಾರನಾಗುವುದರಿಂದ, ಯಾವೊಬ್ಬ ವ್ಯಕ್ತಿಯನ್ನು ಪ್ರತಿಬಂಧಿಸತಕ್ಕದ್ದಲ್ಲ:

ಪರಂತು, ಯಾವೊಬ್ಬ ವ್ಯಕ್ತಿಯು ಒಂದೇ ಅಪರಾಧಕ್ಕಾಗಿ ಎರಡು ಬಾರಿ ದಂಡಿತನಾಗತಕ್ಕದ್ದಲ್ಲ.

**48. ತೊಂದರೆಯ ನಿವಾರಣೆ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ, ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಬಹುದು.

**49. ಪ್ರಾಧಿಕಾರದ ವಿರುದ್ಧ ದಾವೆಯ ನೋಟೀಸು ಇತ್ಯಾದಿ.–** (1) ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಅನುಸಾರವಾಗಿ ಮಾಡಿದ ಅಥವಾ ಮಾಡಲಾಗಿದೆಯೆಂದು ಭಾವಿಸಲಾಗುವ ಯಾವುದೇ ಕಾರ್ಯಕ್ಕಾಗಿ ಉದ್ದೇಶಿಸಿದ ದಾವೆ ಅಥವಾ ಇತರ ವ್ಯವಹರಣೆಗಳ ಆದರೆ, ಅದರ ಕಾರಣವನ್ನು ತಿಳಿಸುವ ಮೂರು ತಿಂಗಳ ಲಿಖಿತ ನೋಟೀಸನ್ನು ನೀಡದ ಹೊರತು, ಮತ್ತು ಅಂಥ ದಾವೆ ಅಥವಾ ಇತರ ವ್ಯವಹರಣೆಗಳ ಕಾರಣ ಉಂಟಾದಂದಿನಿಂದ ಆರು ತಿಂಗಳುಗಳ ತರುವಾಯ ಅಥವಾ ಸಾಕಷ್ಟು ಪರಿಹಾರವನ್ನು ನೀಡಿದ ತರುವಾಯ ಪ್ರಾಧಿಕಾರದ, ಪ್ರಾಧಿಕಾರದ ಅಧ್ಯಕ್ಷನ ಅಥವಾ ಯಾವೊಬ್ಬ ಸದಸ್ಯನ ವಿರುದ್ಧ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ.

(2) ಪ್ರಾಧಿಕಾರವು, ಅದರ ಅಧ್ಯಕ್ಷನು ಅಥವಾ ಸಂದರ್ಭಾನುಸಾರವಾಗಿ ಯಾವೊಬ್ಬ ಸದಸ್ಯನು ತನ್ನ ಪದದ ಸಾಮರ್ಥ್ಯದಲ್ಲಿ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ಪ್ರಾಧಿಕಾರದ, ಪ್ರಾಧಿಕಾರದ ಅಧ್ಯಕ್ಷನ ಅಥವಾ ಅಂಥ ಸದಸ್ಯನ ವಿರುದ್ಧ, ತುರ್ತು ಅಥವಾ ತಕ್ಷಣದ ಪರಿಹಾರವನ್ನು ಪಡೆಯಲು ಒಂದು ದಾವೆಯನ್ನು (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದ ಯಾವುದೇ ನೋಟೀಸನ್ನು ಜಾರಿ ಮಾಡದೆ, ನ್ಯಾಯಾಲಯದ ಅನುಮತಿಯೊಂದಿಗೆ ಹೂಡಬಹುದು ಆದರೆ ನ್ಯಾಯಾಲಯವು, ದಾವೆಯಲ್ಲಿ ಕೋರಲಾದ ಪರಿಹಾರದ ಸಂಬಂಧದಲ್ಲಿ, ಕಾರಣವನ್ನು ತೋರಿಸುವ ಯುಕ್ತ ಅವಕಾಶವನ್ನು ಪ್ರಾಧಿಕಾರಕ್ಕೆ, ಅಧ್ಯಕ್ಷನಿಗೆ ಅಥವಾ ಸಂದರ್ಭಾನುಸಾರವಾಗಿ ಸದಸ್ಯನಿಗೆ ನೀಡಿದ ಹೊರತು ಮಧ್ಯಂತರ ಅಥವಾ ಅನ್ಯಥಾ ದಾವೆಯಲ್ಲಿ ಪರಿಹಾರವನ್ನು ಮಂಜೂರು ಮಾಡತಕ್ಕದ್ದಲ್ಲ.

**50. ನಿಯಮಗಳ ರಚನಾಧಿಕಾರ.–** (1) ಸರ್ಕಾರವು, ಈ ಅಧಿನಿಯಮದ ಯಾವುದೇ ಅಥವಾ ಎಲ್ಲಾ ಉದ್ದೇಶಗಳನ್ನು ನೆರವೇರಿಸಲು, ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿದ್ದಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ಅದರ ನಿಕಟ ತರುವಾಯದ ಅಧಿವೇಶನ ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ಯಾವುದೇ ನಿಯಮ ರಚಿಸಬಾರದೆಂದು ಒಪ್ಪಿದರೆ ಆ ತರುವಾಯ ಸಂದರ್ಭಾನುಸಾರ, ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಮೊದಲು ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**51. ವಿನಿಯಮಗಳನ್ನು ರಚಿಸಲು ಅಧಿಕಾರ.-** ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಒಳಪಟ್ಟು ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಪೂರ್ವ ಪ್ರಕಟಣೆಯ ತರುವಾಯ, ಅದರ ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು, ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2013–14ನೇ ಆಯವ್ಯಯ ಭಾಷಣದಲ್ಲಿ ಕೆರೆ ಮತ್ತು ಸರೋವರಗಳನ್ನು ಅಭಿವೃದ್ಧಿಪಡಿಸಲು ರಾಜ್ಯದಲ್ಲಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಾಗಿ ಘೋಷಿಸಲಾಗಿದೆ. ಆದುದರಿಂದ, ಈ ಕೆಳಗಿನಂತೆ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

(ಎ) ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ ಕೆರೆಗಳು, ಕೊಳಗಳು, ಸರೋವರಗಳ ಸುಧಾರಣೆಗೆ ಹಾಗೂ ಅಂತರ್ಜಲ ಅಭಿವೃದ್ಧಿಗಾಗಿ ಅಗತ್ಯ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಹೊಂದಿರುವ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರದ ಸ್ಥಾಪನೆ.

(ಬಿ) ಕೆರೆಗಳ ಒತ್ತುವರಿಯನ್ನು ಸ್ವಾಧೀನಪಡಿಸಿಕೊಳ್ಳುವುದು, ಜಲಸಂಕುಲಗಳ (Water bodies) ರಕ್ಷಣೆ ಮತ್ತು ಅಭಿವೃದ್ಧಿ ಇತ್ಯಾದಿ; ಹಾಗೂ

(ಸಿ)ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಸುಮಾರು 1.11 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಉಂಟಾಗುತ್ತದೆ.

## ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

ಖಂಡ 3 (i) (4)ನೇ ಉಪಖಂಡವು, ಪ್ರಾಧಿಕಾರದ ಅಧಿಕಾರೇತರ ಸದಸ್ಯರ ಪದಾವಧಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 3 (ii) (5)ನೇ ಉಪಖಂಡವು, ಪ್ರಾಧಿಕಾರದ ಅಧಿಕಾರೇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 8 (2)ನೇ ಉಪಖಂಡದ (ಎಚ್) ಬಾಬು, ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಇತರ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 9 (2)ನೇ ಉಪಖಂಡವು, ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರ ನೇಮಕಾತಿ ವಿಧಾನ, ಸಂದಾಯ ಮಾಡಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 22 (i) (4)ನೇ ಉಪಖಂಡವು, ಅನಧಿಕೃತ ಅಧಿಭೋಗದಾರರಿಂದ ಕಟ್ಟಲ್ಪಟ್ಟ ನಿರ್ಮಿತಿಯನ್ನು ತೆರವುಗೊಳಿಸಲು ಭರಿಸಲಾದ ಖರ್ಚನ್ನು ಅಥವಾ ಕೆರೆಯನ್ನು ಅದರ ಪೂರ್ವಸ್ಥಿತಿಗೆ ತರಲು ಭರಿಸುವ ವೆಚ್ಚವನ್ನು ವಸೂಲು ಮಾಡುವ ವಿಧಾನಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(ii) (5)ನೇ ಉಪಖಂಡವು, ಹೆಸರಿಸಲಾದ ಅಧಿಕಾರಿಯ ಅಥವಾ ಪ್ರಾಧಿಕಾರವು ಪ್ರಾಧಿಕೃತಗೊಳಿಸಿದ ಇತರ ಅಧಿಕಾರಿಯ ಆದೇಶದಿಂದ ಬಾಧಿತವಾದ ಯಾವೊಬ್ಬ ವ್ಯಕ್ತಿಯು ಅಂಥ ಆದೇಶದ ವಿರುದ್ಧ ಅಪೀಲನ್ನು ಯಾರಿಗೆ ಸಲ್ಲಿಸಬೇಕು ಹಾಗೂ ಸಲ್ಲಿಸುವ ವಿಧಾನ ಇವುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 36 (1)ನೇ ಉಪಖಂಡವು, ಲೆಕ್ಕಪತ್ರಗಳ ವಾರ್ಷಿಕ ವಿವರ ಪಟ್ಟಿಕೆಯನ್ನು ನಿರ್ವಹಿಸುವ ನಮೂನೆ ಮತ್ತು ವಿಧಾನಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 37 ಪ್ರಾಧಿಕಾರದ ವಾರ್ಷಿಕ ವರದಿಯನ್ನು ತಯಾರಿಸುವ ನಮೂನೆಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 38 ಆಯವ್ಯಯವನ್ನು ತಯಾರಿಸುವ ನಮೂನೆ ಮತ್ತು ಅವಧಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 50 ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಯಾವುದೇ ಅಥವಾ ಎಲ್ಲಾ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಸಣ್ಣ ನೀರಾವರಿ ಸಚಿವರು

## *ತೀರ್ಪುಗಾರರ ಮಾದರಿ ಅಂಕ ಪಟ್ಟಿ*

## *ದಿನಾಂಕ . . . 20. . .ರ ಜಿಲ್ಲಾ/ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯ ಅಂಕಪಟ್ಟಿ*

| *ಕ್ರಮ ಸಂಖ್ಯೆ* | *ಜಿಲ್ಲೆಯ ಹೆಸರು* | *ವಿದ್ಯಾರ್ಥಿ ಹಾಗೂ ಪದವಿ ಪೂರ್ವ ಕಾಲೇಜಿನ ಹೆಸರು ಹಾಗೂ ಪ್ರಥಮ/ ದ್ವಿತೀಯ ಪಿಯುಸಿ* | *ಶಿಸ್ತು ಮತ್ತು ಸಭ್ಯತೆ (ಗರಿಷ್ಠ 10 ಅಂಕಗಳು)* | *ಸಂಸದೀಯ ಕಾರ್ಯ ವಿಧಾನದ ಪಾಲನೆ (ಗರಿಷ್ಠ 20 ಅಂಕಗಳು)* | *ಪ್ರಶ್ನೆಗಳಿಗಾಗಿ ವಿಷಯಗಳ ಆಯ್ಕೆ ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಗುಣಮಟ್ಟ (ಗರಿಷ್ಠ 20 ಅಂಕಗಳು)* | *ಚರ್ಚೆಗಳಿಗೆ ವಿಷಯಗಳ ಆಯ್ಕೆ (ಗರಿಷ್ಠ 10 ಅಂಕಗಳು)* | *ಮಾಡಿದ ಭಾಷಣದ ಶೈಲಿ ಅಥವಾ ಮೌಲ್ಯ ಚರ್ಚೆಗಳ ಗುಣಮಟ್ಟ (ಗರಿಷ್ಠ30 ಅಂಕಗಳು)* | *ಒಟ್ಟಾರೆ ಸಾಧನೆಯ ಸಾಮಾನ್ಯ ಮೌಲ್ಯ ಮಾಪನ (ಗರಿಷ್ಠ 10 ಅಂಕಗಳು)* | *ಒಟ್ಟು 100 ಅಂಕಗಳು* |
|---|---|---|---|---|---|---|---|---|---|
| *1* | | | | | | | | | |
| *2* | | | | | | | | | |

***ಜಿಲ್ಲಾ /ರಾಜ್ಯ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧೆಗಳ ಪಟ್ಟಿ (ಶಾಲೆಯ ಹೆಸರು, ಸ್ಪರ್ಧಾರ್ಥಿಗಳ ಹೆಸರು)***

***ಜಿಲ್ಲಾ /ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಗಳ ವಿವರಗಳು 20 –***

| *ಕ್ರಮ ಸಂಖ್ಯೆ* | *ಭಾಗವಹಿಸಿದ ಸ್ಪರ್ಧಾರ್ಥಿಗಳ ಹೆಸರು ಸ್ಥಳ/ಜಿಲ್ಲೆ* | *ಪದವಿಪೂರ್ವ ಕಾಲೇಜಿನ ಹೆಸರು ಸ್ಥಳ/ಜಿಲ್ಲೆ* |
|---|---|---|
| *1* | | |
| *2* | | |
| *3* | | |
| *4* | | |
| *5* | | |
| *ಪದವಿಪೂರ್ವ ಕಾಲೇಜುಗಳ ಒಟ್ಟು ಸಂಖ್ಯೆ* | | *ವಿದ್ಯಾರ್ಥಿಗಳ ಒಟ್ಟು ಸಂಖ್ಯೆ* |
| | | |

***ಜಿಲ್ಲೆಗಳ ವಿವರ***

| *ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನ ಪಡೆದವರ ಸಂಖ್ಯೆ* | *ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನ ಗಳಿಸಿದ ವಿದ್ಯಾರ್ಥಿಗಳ ಹೆಸರು ಮತ್ತು ಜಿಲ್ಲೆ* | *ಪಡೆದ ಅಂಕಗಳು* | *ಪದವಿಪೂರ್ವ ಕಾಲೇಜಿನ ಹೆಸರು* |
|---|---|---|---|
| | | | |
| | | | |
| | | | |
| | | | |

* * * * *